ರಂಜನೆ ಬೋಧನೆ ಪ್ರಚೋದನೆ

ಲಂಕೇಶ್ ಪತ್ರಿಕೆ

ಫೆಬ್ರವರಿ 10, 2010 ರೂ. 12/-



ಲಂಕೇಶ್-75




ರೆಡ್ಡಿ ಸೋಮನ ಬಂಟ ರಾಜಶೇಖರ ಫಿನಿಷ್!



ಸಾಹಿತ್ಯ ಸಮ್ಮೇಳನ
ರಾಮುಲು ಪಲಾಯನ



MLCಗಾಗಿ ಮಂಗಾಟ




ಚರ್ಚ್ ದಾಳಿ
ನಾಮರ್ಧ ಸರ್ಕಾರ



ಮಂಗಳೂರು ವಿವಿ
ಉಮೇಶ್‌ಚಂದ್ರ ವಿರುದ್ಧ
ಚೆಡ್ಡಿಗಳು

IPLನ ಕಮರ್ಷಿಯಲ್ ದೇಶಪ್ರೇಮವೂ ಮತ್ತು ಪಾಕಿಸ್ತಾನೀ ಕ್ರಿಕೆಟಿಗರೂ!



ಈ ಬಾರಿ ಐಪಿಎಲ್‌ನ ಟೂರ್ನಮೆಂಟಿಗೆ ಒಬ್ಬ ಪಾಕಿಸ್ತಾನೀ ಕ್ರಿಕೆಟಿಗನನ್ನೂ ಆಯ್ಕೆ ಮಾಡದ ಐಪಿಎಲ್ ಒಡೆಯರು ಇದ್ದಕ್ಕಿದ್ದಂತೆ ಅಪಾರ ದೇಶಪ್ರೇಮಿಗಳಾಗಿ ಮಾಧ್ಯಮಗಳೆದುರು ಮಿಂಚುತ್ತಿದ್ದಾರೆ. "ಕೇವಲ ಪಾಕಿಸ್ತಾನಿ ಕ್ರಿಕೆಟಿಗರನ್ನು ಮಾತ್ರ ಹೊರಗಿಟ್ಟಿದ್ದಕ್ಕೆ ಮಾಧ್ಯಮಗಳು ಭೂಮ್ಯಾಕಾಶ ಒಂದು ಮಾಡುತ್ತಿವೆ, ಆದರೆ ಹಲವಾರು ಇತರ ದೇಶಗಳ ಕ್ರಿಕೆಟ್ಟಿಗರೂ ಈ ಬಾರಿ ಆಯ್ಕೆಯಾಗಿಲ್ಲ" ಎಂದು ಪ್ರಾರಂಭದಲ್ಲಿ ಅಪಾರ ಮುಗ್ಧತೆ ವ್ಯಕ್ತಪಡಿಸಿದ ಪ್ರೀತಿ ಜಿಂಟಾ, ಶಿಲ್ಪಾ ಶೆಟ್ಟಿ, ಅಂಬಾನಿಗಳು "ನಾವಿನ್ನೂ 26/11ನ್ನು ಮರೆತಿಲ್ಲ" ಎಂದು ತಮ್ಮ ದೇಶಪ್ರೇಮವನ್ನೂ ಮೆರೆದು ಪಾಕಿಸ್ತಾನಿ ಕ್ರಿಕೆಟಿಗರ ಆಯ್ಕೆ ಆಗದಿದ್ದದ್ದು ಕೇವಲ ಅಕಸ್ಮಿಕವಲ್ಲ ಎಂಬುದನ್ನು ಪರೋಕ್ಷವಾಗಿ ಸ್ಪಷ್ಟಪಡಿಸಿದ್ದಾರೆ.





ಈಗ ಗೃಹಮಂತ್ರಿ ಚಿದಂಬರಂರವರೇ ಸ್ವಯಂಹೇಳಿಕೆ ನೀಡಿ "ಪಾಕಿಸ್ತಾನಿ ಕ್ರಿಕೆಟಿಗರು ಆಯ್ಕೆ ಆಗದಿದ್ದದ್ದು ಒಬ್ಬ ಕ್ರಿಕೆಟಿಗನಾಗಿ ನನಗೆ ನೋವು ತಂದಿದೆ. ಇದರ ಬಗ್ಗೆ ಪಾಕಿಸ್ತಾನ ಒಂದು ದೇಶವಾಗಿ ತನಗೆ ಅಪಮಾನವಾಗಿದೆ ಎಂದು ಭಾವಿಸುವುದು ಸಹಜವೇ ಆಗಿದೆ. ಐಪಿಎಲ್ ಮಂಡಳಿ ಈ ಪ್ರಕರಣವನ್ನು ಇನ್ನಷ್ಟು ಪ್ರಬುದ್ಧತೆಯಿಂದ ನಿಭಾಯಿಸಬಹುದಿತ್ತು" ಎಂದು ತಿಪ್ಪೆಸಾರಿಸಿದ್ದಾರೆ. ಪಾಕಿಸ್ತಾನಿ ಕ್ರಿಕೆಟಿಗರು ಆಯ್ಕೆ ಆಗದೇ ಹೋದದ್ದು ಆಕಸ್ಮಿಕ ಎಂದು ನಂಬಿಸಲು ಐಪಿಎಲ್ ಫ್ರಾಂಚೈಸಿಗಳು ಎಷ್ಟೇ ಪ್ರಯತ್ನಪಟ್ಟರೂ, ಅವರೆಲ್ಲರ ಸಾಮೂಹಿಕ ನಿರ್ಧಾರ ಮತ್ತು ಸರ್ಕಾರದ "ಸಲಹೆ"ಯ ಮೇರೆಗೇ ಯಾವೊಂದು ತಂಡವೂ ಒಬ್ಬ ಪಾಕಿಸ್ತಾನಿ ಕ್ರಿಕೆಟಿಗನನ್ನು ಆಯ್ಕೆ ಮಾಡಲಿಲ್ಲವೆಂಬುದು ಈಗ ಸ್ಪಷ್ಟವಾಗಿದೆ. ಇದೀಗ ಅಂಬಾನಿ, ಶಿಲ್ಪಾ ಶೆಟ್ಟಿ, ಇನ್ನಿತರರು ಬಾಯ್ಬಿಡುತ್ತಿರುವಂತೆ ಪಾಕಿಸ್ತಾನಿ ಕ್ರಿಕೆಟಿಗರನ್ನು ಆಯ್ಕೆಮಾಡಿದರೆ ಭದ್ರತಾ ಸಮಸ್ಯೆ ಹೆಚ್ಚುತ್ತಿತ್ತು, ಅದಕ್ಕಾಗಿ ಫ್ರಾಂಚೈಸಿಗಳು ಮಾಡಬೇಕಾದ ವೆಚ್ಚವೂ ಹೆಚ್ಚಾಗುವ ಸಾಧ್ಯತೆ ಇತ್ತು. ತಮ್ಮ ಲಾಭವನ್ನು "ಕ್ರೀಡಾ ಪ್ರೇಮ"ದ ಹೆಸರಲ್ಲಿ ಕಡಿಮೆ ಮಾಡಿಕೊಳ್ಳಲು ತಯಾರಿಲ್ಲದ ಐಪಿಎಲ್ ಎಂಬ ಉದ್ಯಮದವರು ಪಾಕಿಸ್ತಾನಿ ಕ್ರಿಕೆಟಿಗರನ್ನು ಆಯ್ಕೆ ಮಾಡುವ "ರಿಸ್ಕ"ನ್ನು ತೆಗೆದುಕೊಂಡಿಲ್ಲ. ತಮ್ಮ ಈ ಶುದ್ಧಲಾಭದ ವ್ಯವಹಾರವು ಜನತೆಯ ಕಣ್ಣಿಗೆ ಕಾಣಿಸದಿರಲೆಂದೇ ಅದಕ್ಕೆ ದೇಶಪ್ರೇಮದ ಮುಸುಕು ತೊಡಿಸಿದ್ದಾರೆ.

26/11ನ್ನು, ಅದರ ಹಿಂದೆ ಇರುವ ಪಾಕಿಸ್ತಾನಿ ಮೂಲದ ಭಯೋತ್ಪಾದಕರನ್ನು, ಅವರಿಗೆ ಪಾಕಿಸ್ತಾನದ ಸರ್ಕಾರದ ಒಂದು ವಿಭಾಗದಲ್ಲಿ ಇರಬಹುದಾದ ಕುಮ್ಮಕ್ಕನ್ನು ಯಾರೂ ಮರೆಯುವ ಅಗತ್ಯವಿಲ್ಲ. ಆದರೆ ಈ ಪ್ರಕರಣದಲ್ಲಿ ಅಮೆರಿಕ ಮೂಲದ ರಾಣಾ-ಹೆಡ್ಲಿಗಳ ಹಸ್ತಕ್ಷೇಪ ಬಯಲಾಗುತ್ತಿರುವಂತೆ 26/11ರ ಹಿಂದೆ ಕೇವಲ ಪಾಕಿಸ್ತಾನ ಮಾತ್ರವಲ್ಲದೆ ಅಮೆರಿಕದ ಗೂಢಚರ್ಯೆ ವಿಭಾಗವೂ ಭಾಗವಹಿಸಿರಬಹುದಾದ ಸಂದೇಹವೂ ಬಲವಾಗುತ್ತಿದೆ. ಪಾಕಿಸ್ತಾನಿ ಭಯೋತ್ಪಾದಕರಿಗೆ, ತಾಲಿಬಾನ್‌ಗಳಿಗೆ ಪಾಕಿಸ್ತಾನಿ ಸರ್ಕಾರದ ಐಎಸ್‌ಐನ ಒಂದು ವಿಭಾಗ ನೇರವಾಗಿ ಸಹಾಯ ಮಾಡುತ್ತಿರುವುದು ಎಷ್ಟು ನಿಜವೋ, ಈ ಐಎಸ್‌ಐನ ರಾಜಕೀಯ ನಡೆಗಳು ಅಮೆರಿಕದ ಸಿಐಎಯ ಒಪ್ಪಿಗೆ ಇಲ್ಲದೆ ಅಥವಾ ಅರಿವಿಗೆ ಬಾರದೆ ನಡೆಯುವುದಿಲ್ಲ ಎಂಬುದೂ ಅಷ್ಟೇ ನಿಜ.

ಅಷ್ಟು ಮಾತ್ರವಲ್ಲ, ಪಾಕಿಸ್ತಾನಿ ಭಯೋತ್ಪಾದಕರು ನಡೆಸುತ್ತಿರುವ ಕೃತ್ಯಗಳಿಗೆ ಇಡೀ ಪಾಕಿಸ್ತಾನಿ ನಾಗರಿಕ ಸಮಾಜವನ್ನು ಹೊಣೆಮಾಡಲು ಸಾಧ್ಯವಿಲ್ಲ. ಅದೇ ರೀತಿ ಇಂದು ಪಾಕಿಸ್ತಾನಿ ರಾಜಕೀಯ ವ್ಯವಸ್ಥೆಯೇ ಸ್ವತಃ ತಾಲಿಬಾನಿಗಳ ದಾಳಿಗೆ ಸಿಕ್ಕಿ ತತ್ತರಿಸುತ್ತಿರುವಾಗ ಇಡೀ ಪಾಕಿಸ್ತಾನಿ ಸರ್ಕಾರವನ್ನೇ 26/11 ಭೀಭತ್ಸಕ್ಕೆ ಹೊಣೆಮಾಡಲು ಸಾಧ್ಯವಿಲ್ಲ. ಪಾಕಿಸ್ತಾನಿ ಸರ್ಕಾರ ಈ ವಿಷಯದಲ್ಲಿ ನಿಜವಾದ ಭಯೋತ್ಪಾದಕರನ್ನು ಹಿಡಿಯಲು ಮತ್ತು ಶಿಕ್ಷಿಸಲು ಹಿಂದೆಮುಂದೆ ನೋಡುತ್ತಿದೆ ಅಥವಾ ಭಯೋತ್ಪಾದಕರಿಗೆ ಪೂರಕವಾಗಿ ನಡೆದುಕೊಳ್ಳುತ್ತಿದೆ ಎಂಬ ಕೇಂದ್ರ ಸರ್ಕಾರದ ಟೀಕೆಯಲ್ಲಿ ಸತ್ಯಾಂಶವಿದ್ದರೂ ಅದಕ್ಕೆ ಪಾಠ ಕಲಿಸಲು ರಾಜತಾಂತ್ರಿಕ ಅಥವಾ ಸರ್ಕಾರದ ಮಟ್ಟದ ಒತ್ತಡವನ್ನೂ ಅನುಸರಿಸಬೇಕಿತ್ತು. ಅದರ ಬದಲಿಗೆ ಇಡೀ ಪಾಕಿಸ್ತಾನಿ ಆಟಗಾರರನ್ನು ಸಾರಾಸಗಟಾಗಿ ತಿರಸ್ಕರಿಸುವಂತೆ ನೋಡಿಕೊಳ್ಳುವ ಮೂಲಕ ಇಡೀ ಪಾಕಿಸ್ತಾನಿ ಜನತೆಯನ್ನು ಭಾರತದ ಶತ್ರುಗಳನ್ನಾಗಿಸಲು ಅವಕಾಶ ಮಾಡಿಕೊಟ್ಟಿದೆ.

ಐಪಿಎಲ್ ಹಾಗೂ ಸರ್ಕಾರದ ಈ ಕ್ರಮ 26/11ರ ಪ್ರಕರಣದಲ್ಲಿ ಪಾಕಿಸ್ತಾನ ತೋರುತ್ತಿರುವ ಬೇಜವಾಬ್ದಾರಿಯ ಬಗ್ಗೆ ಸೇಡು ತೀರಿಸಿಕೊಳ್ಳುವ ಕ್ರಮವಾಗಿದೆಯೇ ವಿನಃ ಪಾಕಿಸ್ತಾನದ ಮೇಲೆ ಪರಿಣಾಮಕಾರಿ ಪ್ರಭಾವವನ್ನು ಹೇರುವ ಕ್ರಮವಂತೂ ಆಗಿಲ್ಲ. ಈಗಾಗಲೇ ಐಪಿಎಲ್‌ನ ಈ ನಡತೆಯ ಬಗ್ಗೆ ಪ್ರಪಂಚದ ಎಲ್ಲಾ ಮೂಲೆಗಳಿಂದಲೂ ಆಕ್ಷೇಪಣೆ ಬರುತ್ತಿದೆ. ಆದ್ದರಿಂದಲೇ ಚಿದಂಬರಂ ಸಹ ಐಪಿಎಲ್ ಈ ವಿಷಯದಲ್ಲಿ ಇನ್ನೊಂದಷ್ಟು ಜವಾಬ್ದಾರಿಯಿಂದ ವರ್ತಿಸಬೇಕಿತ್ತು ಎಂದು ಹೇಳಿಕೆ ನೀಡಬೇಕಾದ ಅನಿವಾರ್ಯತೆ ಒದಗಿದೆ.

ಅದೇನೇ ಇದ್ದರೂ ಐಪಿಎಲ್ ಒಡೆಯರ ಈ ಕಮರ್ಷಿಯಲ್ ದೇಶಪ್ರೇಮ ಪಾಕಿಸ್ತಾನಿ ಕ್ರಿಕೆಟಿಗರು ಆಡುವಾಗ ಮುಂಬೈ ಪಿಚ್ಚನ್ನೇ ಅಗೆದು ಆಟಕ್ಕೆ ತಡೆಯೊಡ್ಡಿದ್ದ ದುರಭಿಮಾನಿ ಶಿವಸೇನಾದ ದೇಶಪ್ರೇಮಕ್ಕಿಂತ ಯಾವ ರೀತಿಯಿಂದಲೂ ಭಿನ್ನವಲ್ಲ. ಭಾರತ ಸಂಸ್ಕೃತಿಯ ರಕ್ಷಣೆಯ ಬಗ್ಗೆ ಉದ್ದುದ್ದ ಮಾತಾಡುವ ಶಿವಸೇನಾ ಮೈಕೆಲ್ ಜಾಕ್ಸನ್ ಬಂದಾಗ, ಮಹಾರಾಷ್ಟ್ರದ ಸಂಪನ್ಮೂಲಗಳನ್ನು ವಿದೇಶೀ ಕಂಪನಿಗಳು ನುಂಗಿನೀರು ಕುಡಿಯುತ್ತಿರುವಾಗ ಬಾಯಿಮುಚ್ಚಿ ಕೂತಂತೆ ಈ ಅಂಬಾನಿಗಳು, ಶಿಲ್ಪಾ, ಜಿಂಟಾಗಳು ಸಹ ಭಾರತದ ಭದ್ರತೆಗೆ ನಿಜವಾದ ಆತಂಕ ಉಂಟುಮಾಡುತ್ತಿರುವ ಅಮೆರಿಕ, ಅದರ ಸಿಐಎ ಇನ್ನಿತ್ಯಾದಿಗಳ ಬಗ್ಗೆ ಬಾಯಿಬಿಡುವುದಿಲ್ಲ.

ಆಸ್ಟ್ರೇಲಿಯಾ ಆಟಗಾರರು ಆಟದ ಮೈದಾನದಲ್ಲಿ, ಪೆವಿಲಿಯನ್‌ನಲ್ಲಿ ಭಾರತೀಯ ಆಟಗಾರರ ಬಗ್ಗೆ ವರ್ಣಭೇದವನ್ನೇ ಅನುಸರಿಸುತ್ತಿದ್ದರೂ ಆ ಆಟಗಾರರ ಜೊತೆ ಹಲ್ಲುಗಿಂಜಿಕೊಂಡು ಫೋಟೋ ತೆಗೆಸಿಕೊಳ್ಳುವಾಗ ದೇಶದ ಮರ್ಯಾದೆಯ ಪ್ರಶ್ನೆಯನ್ನು ಮುಂದುಮಾಡಿಕೊಳ್ಳುವುದಿಲ್ಲ. ಆಸ್ಟ್ರೇಲಿಯಾದಲ್ಲಿ ಭಾರತೀಯರ ಮೇಲೆ ಆಗುತ್ತಿರುವ ಹಲ್ಲೆಗೆ ಆಸ್ಟ್ರೇಲಿಯಾದಲ್ಲಿ ಬೇರುಬಿಟ್ಟಿರುವ ವರ್ಣಭೇದವೇ ಕಾರಣ. ಪ್ರತಿನಿತ್ಯ ಭಾರತೀಯರ ಮೇಲೆ ಅಲ್ಲಿ ಹಲ್ಲೆ ನಡೆಯುತ್ತಿದರೂ ಅಲ್ಲಿನ ಸರ್ಕಾರ ಇದು ಹಲ್ಲೆಯೇ ಅಲ್ಲ, ವರ್ಣಬೇಧವೇ ಇಲ್ಲ ಎಂದು ಹೇಳುತ್ತಿದೆ. (ಕರ್ನಾಟಕದಲ್ಲಿ ಚರ್ಚ್ ಮೇಲೆ ನಡೆದದ್ದು ದಾಳಿಯೇ ಅಲ್ಲ. ಕಾಂಪೌಂಡ್ ಗೋಡೆ ಕೆದವಿದ್ದನ್ನು ದಾಳಿ ಎನ್ನಲು ಸಾಧ್ಯವಿಲ್ಲ. ಅಲ್ಲದೆ ರಸ್ತೆಯ ಬದಿಯಲ್ಲಿರುವ ಪ್ರತಿಮೆಗಳಿಗೆ ಗಾಜಿನ ಹೊದಿಕೆ ಹಾಕದ ಚರ್ಚ್‌ಗಳದ್ದೇ ತಪ್ಪು ಎಂದು ಇಲ್ಲಿ ಗೃಹಮಂತ್ರಿ ಆಚಾರ್ಯ ಹೇಳಿದಂತೆ!). ಇವಕ್ಕೆಲ್ಲಾ ಆಸ್ಟ್ರೇಲಿಯಾದ ಆಟಗಾರರನ್ನು ಹೊಣೆಮಾಡುವುದು ತಪ್ಪಾದರೂ ಪಾಕಿಸ್ತಾನದ ಬಗ್ಗೆ ಸುಲಭವಾಗಿ ಪರೋಕ್ಷ ಬಹಿಷ್ಕಾರದಂಥ ಕ್ರಮ ತೆಗೆದುಕೊಳ್ಳುವ ಐಪಿಎಲ್ ಒಡೆಯರು ಮತ್ತು ಸರ್ಕಾರದ ಮನಸ್ಥಿತಿ ಪಕ್ಕಾ ಕಮರ್ಷಿಯಲ್ ಹಾಗೂ ಗುಲಾಮಿತನವಲ್ಲವೇ?

ಕಾರ್ಗಿಲ್ ಯುದ್ಧ ನಡೆದಾಗ ಪಾಕಿಸ್ತಾನವನ್ನು ದೂಷಿಸುತ್ತಾ ಯಾವುದೇ ಚಾರಿತ್ರಿಕ ಹೊಣೆಗಾರಿಕೆಯಿಲ್ಲದಂತೆ ಬಾಲಿವುಡ್ ಹತ್ತಾರು ಚಲನಚಿತ್ರವನ್ನು ತಯಾರಿಸಿ ಹಣವನ್ನು ಸೂರೆ ಹೊಡೆದ ಬಾಲಿವುಡ್ ಮನಸ್ಥಿತಿಯೇ ಈ ಐಪಿಎಲ್ ಪ್ರಾಯೋಜಕರದ್ದು. ಆದರೆ ಒಂದು ಪ್ರಜಾಸತ್ತೆಯಲ್ಲಿ ಜನರಿಂದ ಆಯ್ಕೆಯಾದ ಸರ್ಕಾರವೂ ರಾಜಕಾರಣಕ್ಕೆ, ರಾಜತಾಂತ್ರಿಕತೆಗೆ ಬದಲಿಯಾಗಿ ಬಾಲಿವುಡ್ಡಿನ ತಂತ್ರಗಳನ್ನು ಅನುಸರಿಸುವಂತೆ ಆಗಿರುವುದೇ ಈ ಪ್ರಕರಣದ ದುರಂತ!

ಕಾಶ್ಮೀರದ ಗಾಯಕ್ಕೆ ಸಿಬಿಐ ಉಪ್ಪು!

"ಶೋಪಿಯಾನ್ ಪ್ರದೇಶದಲ್ಲಿ ಕೊಲೆಯಾದ ಇಬ್ಬರು ಕಾಶ್ಮೀರಿ ಮುಸ್ಲಿಂ ಮಹಿಳೆಯರು ಬಲಾತ್ಕಾರಕ್ಕೆ ಒಳಗಾಗಿರಲಿಲ್ಲ ಮತ್ತು ಅವರನ್ನು ಭದ್ರತಾ ಪಡೆಗಳು ಕೊಂದಿಲ್ಲ ಹಾಗೂ ಈಜು ಬರದ ಅವರು ನದಿಯಲ್ಲಿ ಜಾರಿಬಿದ್ದು ಸತ್ತಿದ್ದಾರೆ ಎಂದು ವರದಿ ನೀಡಿರುವ ಸಿಬಿಐ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರ ಹುಡುಕುವ ಗೋಜಿಗೇ ಹೋಗಿಲ್ಲ:

1. ಆ ಇಬ್ಬರು ಹೆಂಗಸರ ಮೃತದೇಹ ಸಿಕ್ಕ ಜಾಗದಲ್ಲಿ ನದಿಯ ಆಳ ಒಂದೂವರೆ ಅಡಿಯೂ ಇರಲಿಲ್ಲ. ಅಂಥಾ ಜಾಗದಲ್ಲಿ ಮುಳುಗಿ ಸಾಯಲು ಸಾಧ್ಯವೇ?
2. ಹಿಂದಿನ ಮೂರು ದಿನಗಳಲ್ಲಿ ಆ ನದಿ ಪಾತ್ರದಲ್ಲಿ ಯಾವ ಪ್ರವಾಹವೂ ಬಂದಿರಲಿಲ್ಲವೆಂದೂ ಸರ್ಕಾರಿ ಇಲಾಖೆಯೇ ಸ್ಪಷ್ಟಪಡಿಸಿವೆ. ಹಾಗಿದ್ದರೂ ಇಬ್ಬರಲ್ಲಿ ಒಬ್ಬರ ಮೃತದೇಹವ 1.5 ಕಿಮೀ ದೂರದ ತನಕ ನದಿ ಪಾತ್ರದಲ್ಲಿ ಕೊಚ್ಚಿಹೋದದ್ದು ಹೇಗೆ?
3. ಅದೇ ಜಾಗದಲ್ಲಿ ಗ್ರಾಮಸ್ಥರು ಮಧ್ಯರಾತ್ರಿಯ ತನಕ ಹುಡುಕಾಡಿದರೂ ದೊರೆಯದ ಹೆಣಗಳು ಮಾರನೇ ದಿನ ಬೆಳ್ಳಂಬೆಳಗ್ಗೆ ಅದೇ ಜಾಗದಲ್ಲಿ ಪ್ರತ್ಯಕ್ಷವಾದದ್ದು ಹೇಗೆ?
4. ದೂರು ನೀಡಿ 7 ದಿನಗಳಾದರೂ ಎಫ್.ಐ.ಆರ್ ಫೈಲ್ ಮಾಡದೇ ಪೊಲೀಸರು ಸಾಕ್ಷ್ಯಗಳು ನಾಶವಾಗುವಂತೆ ಮಾಡಿದ್ದೇಕೆ?

ಆದ್ದರಿಂದ ಈ ಪ್ರಕರಣದಲ್ಲಿ ಭಾರತದ ಯಾವ ತನಿಖಾ ಸಂಸ್ಥೆಗಳು ನಮಗೆ ನ್ಯಾಯ ಒದಗಿಸಲಾರವು. ಆದ್ದರಿಂದ ಇದರ ಬಗ್ಗೆ ಅಂತರರಾಷ್ಟ್ರೀಯ ಮಟ್ಟದ ತನಿಖೆಯೇ ಆಗಬೇಕು ಎಂದು ನಮ್ಮ ಆಗ್ರಹ."

– ಸಿ.ಡಿ.ಆರ್.ಓ, ಮಾನವ ಹಕ್ಕುಗಳ ಒಕ್ಕೂಟ

ನೋ ಕಾಮೆಂಟ್ಸ್

"ಪ್ರಭುತ್ವ ಯಾವುದೇ ರೀತಿಯಲ್ಲಿ ಪ್ರಶಸ್ತಿ ಕೊಡುವುದನ್ನು ನಾನು ವಿರೋಧಿಸುತ್ತೇನೆ. ಏಕೆಂದರೆ ಅದು ನಾಗರಿಕ ಸಮಾಜದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಪ್ರಶಸ್ತಿಗಳಿಗಾಗಿಯೇ ಸರ್ಕಾರದ ಮರ್ಜಿ ಕಾಯುವ ಭಟ್ಟಂಗಿ ವರ್ಗವೊಂದನ್ನು ಅದು ನಾಗರಿಕ ಸಮಾಜದಲ್ಲಿ ಸೃಷ್ಟಿಸುತ್ತದೆ. ನಾನು ಪದ್ಮಭೂಷಣ ಪ್ರಶಸ್ತಿಯನ್ನು ತಿರಸ್ಕರಿಸಲು ಈ ತಾತ್ವಿಕ ಕಾರಣಗಳು ಮಾತ್ರವಲ್ಲದೆ ಇನ್ನೂ ಒಂದು ಕಾರಣವಿದೆ. ಈ ಗೌರವವನ್ನು ಸ್ವೀಕರಿಸಿದರೆ ಒಂದು ಪ್ರಜಾಪ್ರಭುತ್ವದಲ್ಲಿ ನಾಟಕ-ಸಾಹಿತ್ಯ ಇತ್ಯಾದಿಗಳ ಮಹತ್ವವೇನು ಎಂಬುದನ್ನು ಸರ್ಕಾರ ಅರ್ಥಮಾಡಿಕೊಂಡುಬಿಟ್ಟಿದೆ ಎಂಬ ತಪ್ಪು ಅಭಿಪ್ರಾಯವೂ ಜನರಲ್ಲಿ ಮೂಡಿಬಿಡುತ್ತದೆ. ಅದನ್ನು ತಡೆಯಬೇಕೆಂದರೂ ಸಹ ನಾನು ಈ ಪ್ರಶಸ್ತಿಯನ್ನು ತಿರಸ್ಕರಿಸಲೇ ಬೇಕು."

- ಶಿಶಿರ್ ಬಾಧುರಿ, ಪ್ರಸಿದ್ಧ ನಟ-ನಿರ್ದೇಶಕ, 1959ರಲ್ಲಿ ತನಗೆ ನೀಡಲಾದ ಪದ್ಮ ಪ್ರಶಸ್ತಿಯನ್ನು ಯಾಕೆ ತಿರಸ್ಕರಿಸಿದೆ ಎಂದು ನೀಡಿದ ಹೇಳಿಕೆಯಿಂದ.

"ಗಣರಾಜ್ಯೋತ್ಸವವೆಂಬುದು ನಮ್ಮ ಸಾಧನೆಗಳನ್ನು ಮತ್ತು ವೈಫಲ್ಯಗಳನ್ನು ಪರಾಮರ್ಶೆಗೊಳಪಡಿಸುವ ಸಂದರ್ಭವಾಗಬೇಕು. ಕಳೆದ 60 ವರ್ಷಗಳಲ್ಲಿ ನಮ್ಮ ಸಾಧನೆಗಳು ಅಲ್ಪ, ವೈಫಲ್ಯಗಳೇ ಅಧಿಕ ಎಂದರೆ ತಪ್ಪಲ್ಲ. ಸಂವಿಧಾನದಲ್ಲಿ ಆಶಿಸಲಾಗಿರುವ ಸಮಾನತೆಯನ್ನು ಸಾಧಿಸುವ ಮಾತು ಒತ್ತಟ್ಟಿಗಿರಲಿ, ಜನರ ಮೂಲಭೂತ ಅಗತ್ಯಗಳನ್ನೇ ಇನ್ನೂ ನಾವು ಒದಗಿಸಲಾಗಿಲ್ಲ. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಮೂರೂ ಭ್ರಷ್ಟಗೊಂಡಿವೆ. ಮಾಧ್ಯಮಗಳನ್ನು ನಡೆಸುವವರೂ ಪಟ್ಟಭದ್ರ ಹಿತಾಸಕ್ತಿಗಳೇ ಆಗಿರುವುದರಿಂದ ಮುಕ್ತ ಹಾಗೂ ನಿಷ್ಪಕ್ಷಪಾತ ಮಾಧ್ಯಮ ನಮ್ಮಲ್ಲಿಲ್ಲ. ಇಂಥಾ ಸಂದರ್ಭದಲ್ಲಿ ನಮ್ಮ ದೇಶದ ಶ್ರೀಸಾಮಾನ್ಯನಲ್ಲಿ ಇನ್ನೂ ಉಳಿದುಕೊಂಡಿರುವ ನ್ಯಾಯಪರತೆಯೊಂದೇ ಈ ದೇಶದ ಆಶಾಕಿರಣ."

ನ್ಯಾಯಮೂರ್ತಿ ಶೈಲೇಂದ್ರ ಕುಮಾರ್

ಸಂವಿಧಾನಬದ್ಧ ಹೋರಾಟಗಳ ರಾಜಕೀಯ ಅದರ ಶಕ್ತಿ ಮತ್ತು ಸೆಳೆತ ಎರಡನ್ನೂ ನಿಧಾನವಾಗಿ ಕಳೆದುಕೊಳ್ಳುತ್ತಿದೆ. ಇದರಿಂದಾಗಿಯೇ "ಅವರ" ಪ್ರವೇಶವಾಗುತ್ತಿದೆ. ವ್ಯವಸ್ಥೆಯ ತುಳಿತಕ್ಕೆ ಸಿಕ್ಕಿ ಅಸಹಾಯಕರಾದ ಜನ ಮಾತ್ರವಲ್ಲ, ರಾಜಕೀಯ ಭ್ರಷ್ಟಾಚಾರದಿಂದ ರೋಸಿಹೋದ ಪ್ರಜ್ಞಾವಂತರೂ ಸಹ ಹತಾಶೆಯ ದನಿಯಲ್ಲಿ ಇವರಿಗೆ ಬುದ್ಧಿ ಕಲಿಸಲು "ಅವರು" ಬರಬೇಕು ಎನ್ನುತ್ತಿದ್ದಾರೆ. "ಅವರು" ಎಂದರೆ ಸಂವಿಧಾನದ ಮೇಲೆ ನಂಬಿಕೆ ಇಲ್ಲದ, ಬಂದೂಕಿನ ಮೂಲಕ ಬದಲಾವಣೆ ತರಲು ಹೊರಟಿರುವ ಮಾವೋವಾದಿಗಳು. ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವದಲ್ಲಿ 60 ವರ್ಷಗಳ ಅವಧಿಯಲ್ಲೇ ಸಂವಿಧಾನ ಅಪ್ರಸ್ತುತವಾಗುತ್ತಿದೆಯೇ?

- ದಿನೇಶ್ ಅಮೀನ್ ಮಟ್ಟು

"ಈಗ ರಾಜ್ಯದಲ್ಲಿ ನಡೆಯುತ್ತಿರುವ ಶ್ರೀಕೃಷ್ಣದೇವರಾಯನ 500ನೇ ಪಟ್ಟಾಭಿಷೇಕ ಮಹೋತ್ಸವವನ್ನು ನಾವು ಪರಿಭಾವಿಸಿಕೊಂಡಿರುವ ರೀತಿಯೇನು? ರಾಜಪ್ರಭುತ್ವ ಕೇವಲ ಹಂಗಿನ ಸಂಸ್ಕೃತಿಯನ್ನು ಪೋಷಿಸಬಲ್ಲುದು. ಅಲ್ಲಿ ಸ್ವಾತಂತ್ರ್ಯಕ್ಕೆ, ಸ್ವಾಭಿಮಾನಿ ಬದುಕಿಗೆ ಮತ್ತು ಹಕ್ಕಿನ ಸಂಸ್ಕೃತಿಗೆ ಅವಕಾಶವಿರುವುದಿಲ್ಲ. 1947ರಲ್ಲೇ ನಾವು ರಾಜಪ್ರಭುತ್ವಕ್ಕೆ ಕೊನೆಹಾಡಿ ಹಕ್ಕಿನ ಸಂಸ್ಕೃತಿಯ ಪ್ರಜಾಪ್ರಭುತ್ವವನ್ನು ಜಾರಿಗೆ ತಂದಿದ್ದೇವೆ. ಇಂದು ಮತ್ತೆ ರಾಜಪ್ರಭುತ್ವವನ್ನು ಮರೆಸಿ ಹಕ್ಕಿನ ಸಂಸ್ಕೃತಿಯನ್ನು ಮೂಲೆಗುಂಪು ಮಾಡುವ ಪ್ರಯತ್ನ ನಡೆದಿರುವುದು ವಿಷಾದಕರ."

-ಡಾ. ಟಿ.ಆರ್.ಚಂದ್ರಶೇಖರ್, ಹಂಪಿ ವಿವಿ

"ಶ್ರೀಕೃಷ್ಣದೇವರಾಯನ 500ನೇ ಪಟ್ಟಾಭಿಷೇಕ ಮಹೋತ್ಸವಕ್ಕಾಗಿ ಮಾಡುತ್ತಿರುವ ದುಂದುವೆಚ್ಚ ಅನಗತ್ಯ. ಆತ ಕನ್ನಡನಾಡಿಗೆ ನೀಡಿರುವ ಕೊಡುಗೆಯೇ ವಿವಾದಾಸ್ಪದವಾಗಿರುವಾಗ ಇಂಥಾ ಉತ್ಸವವೇ ಒಂದು ಪ್ರಹಸನ. ದೇಶಕ್ಕೆ ಪ್ರಜಾಪ್ರಭುತ್ವ ಬಂದು 60 ವರ್ಷಗಳೇ ಕಳೆದಿದ್ದರೂ ಈ ಬಗೆಯ ರಾಜಪ್ರಭುತ್ವ ಸ್ಮರಣೆ ಮತ್ತು ವೈಭವೀಕರಣ ಸರಿಯಲ್ಲ."

- 'ಪ್ರಜಾವಾಣಿ' ಸಂಪಾದಕೀಯ

ನಂಬಿದ್ರೆನಂಬಿ ಬಿಟ್ರೆಬಿಡಿ

"ನಾನು 'ವಿಮುಕ್ತಿ' ಚಿತ್ರೀಕರಣ ಮಾಡಿದ ವಾರಣಾಸಿಯಲ್ಲಿರುವ 'ವಿಮುಕ್ತಿಧಾಮ'ದಲ್ಲಿ ಸಾಯಬೇಕೆನ್ನುವವರಿಗೆ ಉಚಿತ ಸ್ಥಳಾವಕಾಶ ನೀಡಲಾಗುತ್ತದೆ. ಆದರೆ ಒಂದು ಶರತ್ತೆಂದರೆ ಅವರು 15 ದಿನದೊಳಗೆ ಸಾಯಬೇಕು. ಸಾಯದಿದ್ದರೆ ರೂಮು ಖಾಲಿ ಮಾಡಬೇಕು."

- ಪಿ. ಶೇಷಾದ್ರಿ

ಇಷ್ಟದ ದೊರೆಗೆ ಭ್ರಷ್ಟ ಯಡ್ಡಿ-ರೆಡ್ಡಿಗಳ ಅಭಿಷೇಕ!



ಕಂಡಹಾಗೆ

■ ಗೌರಿ ಲಂಕೇಶ್

ಪ್ರಸ್ತುತ ವಿದ್ಯಮಾನಗಳನ್ನು ನೋಡಿದರೆ ರಾಜ್ಯದಲ್ಲಿ ಸರ್ಕಾರ ಎಂಬುದೇ ಅಸ್ತಿತ್ವದಲ್ಲಿರದೆ, ಹುಚ್ಚರ ಗುಂಪೊಂದು ಅಧಿಕಾರದ ಚುಕ್ಕಾಣಿ ಹಿಡಿದಿರುವಂತಿದೆ.

ನೆರೆ ಬಂದು ನಾಲ್ಕು ತಿಂಗಳುಗಳಾದರೂ, ಇವತ್ತಿಗೂ ಲಕ್ಷಾಂತರ ಜನ ತಲೆ ಮೇಲೊಂದು ಸೂರಿಲ್ಲದೆ ಬದುಕುತ್ತಿದ್ದರೂ, ಹುಚ್ಚು ಸಂತೆಯ ಪ್ರಮುಖರಾದ ಯಡ್ಡಿ-ರೆಡ್ಡಿಗಳು ಸೇರಿಕೊಂಡು ಹಂಪಿಯಲ್ಲಿ ಚೆಡ್ಡಿಗಳ ಸಿದ್ಧಾಂತವನ್ನು ಸಾರುವ ಕಾರ್ಯಕ್ರಮಕ್ಕೆ ಕೋಟ್ಯಂತರ ರೂಪಾಯಿಗಳನ್ನು ವೆಚ್ಚ ಮಾಡುತ್ತಿದ್ದಾರೆ.

ಇತಿಹಾಸದಲ್ಲಿ ಭಾರತದ ಪ್ರಮುಖ ಚಕ್ರವರ್ತಿಗಳಲ್ಲಿ ಕೃಷ್ಣದೇವರಾಯ ಕೂಡಾ ಒಬ್ಬ ಎಂಬುದು ನಿಜವಾದರೂ, ಆತನ ಪಟ್ಟಾಭಿಷೇಕಕ್ಕೂ ಪ್ರಸ್ತುತ ಪ್ರಜಾತಂತ್ರಕ್ಕೂ ಏನು ಸಂಬಂಧ? ಆತ ಪಟ್ಟಕ್ಕೇರಿದ 500ನೇ ವರ್ಷಾಚರಣೆಯನ್ನು 'ಮಹೋತ್ಸವ'ವಾಗಿ ಆಚರಿಸುವ ಮೂಲಕ ಇವತ್ತಿನ ಪ್ರಜಾತಂತ್ರ (ಅದರಲ್ಲೂ ಲೋಪದೋಷಗಳೊಂದಿಗೆ) ವ್ಯವಸ್ಥೆಗಿಂತಲೂ ಅಂದಿನ ರಾಜಾಡಳಿತವೇ ಉತ್ತಮವಾಗಿತ್ತು ಎಂಬ ಸಂದೇಶ ಸಾರುವ ಉದ್ದೇಶ ಯಡ್ಡಿ-ರೆಡ್ಡಿ-ಚೆಡ್ಡಿಗಳದ್ದು.

ಭಿನ್ನಮತೀಯರಿಂದಾಗಿ ಇತ್ತೀಚೆಗೆ ಯಡ್ಡಿ ಮುಂಡವಿಲ್ಲದ ಮುಂಡದಂತಾಗಿದ್ದಾರೆ. ಆದ್ದರಿಂದಲೇ ಅವರು ಲಿಂಗಾಯತರ ಬೆಂಬಲ ಪಡೆದು ಮುಖ್ಯಮಂತ್ರಿಯಾಗಿದ್ದರೂ, ರಾಜ್ಯದ ಶಾಲಾ-ಕಾಲೇಜುಗಳಲ್ಲಿ ಭಗವದ್ಗೀತೆಯನ್ನು ಪಠಿಸುವ ಕಾರ್ಯಕ್ರಮವನ್ನು ಚೆಡ್ಡಿಗಳು ಪ್ರಾರಂಭಿಸಿದಾಗಲೂ, ಅದರ ಬದಲಾಗಿ ಇವತ್ತಿಗೂ ಪ್ರಸ್ತುತವಾಗಿರುವ ಶರಣರ ವಚನಗಳನ್ನು ವಿದ್ಯಾರ್ಥಿಗಳಿಗೆ ಹೇಳಿಕೊಡಿ ಎನ್ನಲಿಲ್ಲ. ಇನ್ನು ತಾವೇ ಕೃಷ್ಣದೇವರಾಯನ ಆಧುನಿಕ ಅವತಾರಗಳು, ತಮ್ಮ ಗಣಿ ರಾಜ್ಯವೇ ಇವತ್ತಿನ ವಿಜಯನಗರ ಸಾಮ್ರಾಜ್ಯ, ತಾವೇ ಹಿಂದಿನ ಚಕ್ರವರ್ತಿಗಳು ಎಂಬಂತೆ ವರ್ತಿಸುತ್ತಿರುವ ರೆಡ್ಡಿಗಳ ಈ ಕೃಷ್ಣದೇವರಾಯ ಮಹೋತ್ಸವ'ಕ್ಕೆ ಅಡ್ಡಿ ಮಾಡುವ ತಾಕತ್ತಾದರೂ ಯಡ್ಡಿಗೆ ಎಲ್ಲಿಂದ ಬಂದೀತು? ಅದಕ್ಕೆ ರೆಡ್ಡಿಗಳ ಎಲ್ಲಾ ಜಲು ಪೈಲು ಯೋಜನೆಗಳಿಗೆ ಲಿಂಗಾಯತ ಯಡಿಯೂರಪ್ಪ ಶರಣು ಶರಣು ಎಂದರು.

ಇನ್ನು ಕೃಷ್ಣದೇವರಾಯನ ಪಟ್ಟಾಭಿಷೇಕವನ್ನು ಅದ್ದೂರಿಯಾಗಿ ಆಚರಿಸುವುದರ ಹಿಂದಿನ ಉದ್ದೇಶ ಹಿಂದೂಗಳು ಅಲ್ಪಸಂಖ್ಯಾತ ಮುಸಲ್ಮಾನರ ವಿರುದ್ಧ ಆಕ್ರೋಶಗೊಳ್ಳುವಂತೆ ಮಾಡುವುದೇ ಆಗಿದೆ. ಉದಾಹರಣೆಗೆ ಈ 'ಮಹೋತ್ಸವ' ಕುರಿತಂತೆ ರಾಜ್ಯ ಸರ್ಕಾರ ಪ್ರಕಟಿಸುವ ಪಾಂಪ್ಲೆಟ್‌ನಲ್ಲಿ "ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಒಂದು ಐತಿಹಾಸಿಕ ಮಹತ್ವದ ಘಟನೆ. ದೆಹಲಿಯಲ್ಲಿ ರಾಜ್ಯ ಕಟ್ಟಿದ ಸುಲ್ತಾನರು ಹದಿಮೂರು ಮತ್ತು ಹದಿನಾಲ್ಕನೇ ಶತಮಾನದಲ್ಲಿ ದಕ್ಷಿಣ ಭಾರತದ ರಾಜ್ಯಗಳ ಮೇಲೆ ದಾಳಿ ಮಾಡಿದರು. ಈ ದಾಳಿಯಲ್ಲಿ ರಾಜ್ಯಕೋಶಗಳು ಸೂರೆಗೊಂಡು ದೇವಾಲಯಗಳು, ಮಠಮಂದಿರಗಳು ಧ್ವಂಸಗೊಂಡವು. ಹಿಂದೂ ಧರ್ಮ ಸಂಸ್ಕೃತಿಗಳಿಗೆ ಅಳಿವಿನ ಭೀತಿ ತಟ್ಟಿತ್ತು. ಧರ್ಮ, ಸಂಸ್ಕೃತಿಗಳ ಉಳಿವಿಗಾಗಿ ವಿಜಯನಗರದ ರಾಜ್ಯವನ್ನು ಹರಿಹರ ಮತ್ತು ಬುಕ್ಕರು ವಿದ್ಯಾರಣ್ಯರ ಪ್ರೇರಣೆಯಿಂದ ಸ್ಥಾಪಿಸಿದರು" ಎಂದು ಹೇಳಲಾಗಿದೆ. ಅಂದರೆ ವಿಜಯನಗರ ಜನ್ಮವೆತ್ತಿದ್ದೇ ಮುಸಲ್ಮಾನರಿಂದ ಹಿಂದೂಗಳನ್ನು, ಹಿಂದೂ ಧರ್ಮವನ್ನು ಮತ್ತು ಹಿಂದೂ ಸಂಸ್ಕೃತಿಯನ್ನು ರಕ್ಷಿಸಲೆಂದೂ ಹಾಗೂ ಆ ರಾಜ್ಯವನ್ನು ಉತ್ತುಂಗಕ್ಕೆ ಏರಿಸಿದ ಕೃಷ್ಣದೇವರಾಯನೂ ಹಿಂದೂ ರಕ್ಷಕನೇ ಆಗಿದ್ದನೆಂಬುದು ಇದರ ಅರ್ಥ.

ಇದೊಂದು ದೊಡ್ಡ ಸುಳ್ಳು. ಅಷ್ಟೇ ಅಲ್ಲ, ಇದರ ಮುಂದುವರೆದ ಭಾಗವಾಗಿ ಹಂಪಿಯನ್ನೂ, ಅದರ ದೇವಸ್ಥಾನಗಳನ್ನೂ ಲೂಟಿ ಮಾಡಿದ್ದು, ನಾಶಗೊಳಿಸಿದ್ದೂ ಮುಸಲ್ಮಾನರೇ ಎಂಬ ಇನ್ನೊಂದು ದೊಡ್ಡ ಸುಳ್ಳನ್ನು ಹಲವಾರು ದಶಕಗಳಿಂದ ಹಿಂದೂತ್ವವಾದಿಗಳು ಹೇಳುತ್ತಲೇ ಬಂದಿದ್ದಾರೆ. ಇವತ್ತಿಗೂ ಚಿದಾನಂದಮೂರ್ತಿ ಮತ್ತು ಎಸ್.ಎಲ್. ಭೈರಪ್ಪರಂತಹ ಚೆಡ್ಡಿಚಿಂತಕರೂ ಇದನ್ನೇ ವಾದಿಸುತ್ತಾ ಬಂದಿದ್ದಾರೆ.



ವಾಸ್ತವವಾಗಿ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಶೂದ್ರ, ದಲಿತ ಸಮುದಾಯಗಳು ಉದ್ಧಾರವನ್ನೇನೂ ಹೊಂದಲಿಲ್ಲ, ಬದಲಾಗಿ ಬ್ರಾಹ್ಮಣಶಾಹಿಗಳು ಮತ್ತು ವರ್ತಕರು ಲಾಭ ಪಡೆದು ಸಮಾಜದ ಮೇಲಿನ ತಮ್ಮ ಹಿಡಿತವನ್ನು ಮತ್ತಷ್ಟು ಗಟ್ಟಿಪಡಿಸಿಕೊಂಡು ರೈತಾಪಿಗಳು ಮತ್ತು ಕೂಲಿ ಕಾರ್ಮಿಕರನ್ನು ಇನ್ನಷ್ಟು ಶೋಷಿಸಿದರು.

ಇನ್ನು ಬಹಮನಿ ಸುಲ್ತಾನರನ್ನು ಸೋಲಿಸಿ ಅವರ ಉಪಟಳವನ್ನು ನಿಲ್ಲಿಸಿದ ಕೀರ್ತಿ ಕೃಷ್ಣದೇವರಾಯನದ್ದಾದರೂ ಆತ ರಕ್ತಸಿಕ್ತ ಯುದ್ಧ ನಡೆಸಿದ್ದು ಕೇವಲ ಮುಸಲ್ಮಾನ ಸುಲ್ತಾನರ ಮೇಲಲ್ಲ. ಇತಿಹಾಸ ತಜ್ಞರೇ ಹೇಳುವಂತೆ ಕೃಷ್ಣದೇವರಾಯ ಕೊಂಡವೀಡುವಿನ ರೆಡ್ಡಿಗಳನ್ನು, ಭುವನಗಿರಿಯ ವೇಲಣಗಳನ್ನು ಸದೆಬಡಿದು ಕೃಷ್ಣಾ ನದಿಯ ತನಕ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದ. ಇತ್ತ ಉಮತ್ತೂರಿನ ಗಂಗಾ ರಾಜನನ್ನು ಸೋಲಿಸಿದ. ಹಾಗೆಯೇ ಕಾವೇರಿ ನದಿಯ ಸುತ್ತಲಿನ ಪ್ರದೇಶವನ್ನು ತನ್ನದಾಗಿಸಿಕೊಂಡ. ತೆಲಂಗಾಣದ ಮೇಲೆ ಆರು ಬಾರಿ ದಂಡೆತ್ತಿ ಹೋಗಿ ಆ ಪ್ರದೇಶದ ಮೇಲೆ ಆಗ ಅಧಿಪತ್ಯವನ್ನು ಹೊಂದಿದ್ದ ಒರಿಸ್ಸಾದ ಗಜಪತಿ ವಂಶವನ್ನು ಸದೆಬಡಿದ. ತನ್ನ ವಿಜಯದ ಸಂಕೇತವಾಗಿ ಗಜಪತಿರಾಜನ ಮಗಳಾದ ಜಗನ್ಮೋಹಿನಿಯನ್ನು ತನ್ನ ಮೂರನೇ ಪತ್ನಿಯಾಗಿ ಸ್ವೀಕರಿಸಿದ.

ಅಂದಹಾಗೆ, ಕೃಷ್ಣದೇವರಾಯನಿಂದಾಗಿಯೇ ವಿಜಯನಗರ 'ಸುವರ್ಣ' ಯುಗವನ್ನು ಕಂಡಿತು ಎಂದು ಆನಂದಿಸುವ ಜನರಿಗೆ ಆತ ಅದನ್ನು ಹೇಗೆ ಸಾಧಿಸಿದ ಎಂಬುದು ಗೊತ್ತಿರಲಿಕ್ಕಿಲ್ಲ. ಕೃಷ್ಣದೇವರಾಯನ ಬಗ್ಗೆ ಸಾಕಷ್ಟು ಬರೆದಿದ್ದ ಪೋರ್ಚುಗೀಸ್ ಯಾತ್ರಿಕ ಡಾಮಿಂಗೋ ಪಯಸ್ ಹೇಳಿರುವಂತೆ "ಕೊಲೆ ಮಾಡುವ ಮೂಲಕವೇ ರಾಜ ಸುವ್ಯವಸ್ಥೆಯನ್ನು ಕಾಪಾಡುತ್ತಾನೆ." ಕಳ್ಳರ ಕೈಗಳನ್ನು ಕತ್ತರಿಸುವುದು, ಕೊಲೆಗಡುಕರ ಶಿರಚ್ಛೇದನ ಮಾಡಿಸುವುದು ಕೃಷ್ಣದೇವರಾಯನ ಕಾಲದ ಕಾನೂನಾಗಿತ್ತು. ಇದೆಲ್ಲ ಮಿಡೀವಲ್ ಪದ್ಧತಿಯಾಗಿದ್ದು ಇವತ್ತಿನ ಕಾಲಕ್ಕೆ ಸಂಪೂರ್ಣವಾಗಿ ಅಪ್ರಸ್ತುತ. ಆದರೂ ಆತನನ್ನು ಈಗ ಈ ಸರ್ಕಾರದ ಹುಚ್ಚರು ಕೊಂಡಾಡುತ್ತಿದ್ದಾರೆ.

ಇನ್ನು ಕೃಷ್ಣದೇವರಾಯನ ಸಾಮ್ರಾಜ್ಯದಲ್ಲಿ ಮತ್ತು ಯುದ್ಧ ನೀತಿಯಲ್ಲಿ ಪುರೋಹಿತಶಾಹಿಗಳ ಮತ್ತು ಮುಸಲ್ಮಾನರ ಪಾತ್ರ ಎಷ್ಟಿತ್ತೆಂದು ಈಗಾಗಲೇ ನಮ್ಮ ಜನವರಿ 20, 2010 ರ ಸಂಚಿಕೆಯಲ್ಲಿ ಶಿವಸುಂದರ್ ಅವರು ಬರೆದಿದ್ದರಿಂದ ಅದನ್ನು ಇಲ್ಲಿ ಮತ್ತೆ ವಿವರಿಸುವುದಿಲ್ಲ.

ಆದರೆ ಈಗಾಗಲೇ ಹಲವಾರು ಇತಿಹಾಸ ತಜ್ಞರು ಹೇಳುವುದನ್ನು ಮತ್ತೆ ಪ್ರಸ್ತಾಪಿಸುತ್ತೇನೆ. ಅದೇನೆಂದರೆ ಹಂಪಿಯ ನಾಶಕ್ಕೆ ಮುಸಲ್ಮಾನರು ಕಾರಣರಾಗಿರಲಿಲ್ಲ; ಬದಲಾಗಿ ಅದರ ಧ್ವಂಸಕ್ಕೆ ಕಾರಣವಾಗಿದ್ದು ಶೈವರ ಮತ್ತು ವೈಷ್ಣವರ ನಡುವಿನ ಕಾಳಗ ಎಂಬುದು. ಇದಕ್ಕೆ ಸ್ಪಷ್ಟ ಉದಾಹರಣೆ ಹಂಪಿಯಲ್ಲಿರುವ ಶೈವರ ವಿರೂಪಾಕ್ಷ ದೇವಸ್ಥಾನ ಇವತ್ತಿಗೂ ಹಾಗೆ ಉಳಿದಿದೆ; ಆದರೆ ಉಗ್ರನರಸಿಂಹನ ಪ್ರತಿಮೆ ಸೇರಿದಂತೆ ಅಲ್ಲಿದ್ದ ಎಲ್ಲಾ ವೈಷ್ಣವರ ದೇಗುಲಗಳು ಧ್ವಂಸಗೊಂಡಿದ್ದವು. ಹಾಗೊಮ್ಮೆ ಮುಸಲ್ಮಾನರೇ ಹಂಪಿಯನ್ನು ಧ್ವಂಸ ಮಾಡಿದರೆ ಅವರೇಕೆ ಶೈವರ ವಿರೂಪಾಕ್ಷ ದೇಗುಲವನ್ನು ಉಳಿಸಿದರು? ಈ ಪ್ರಶ್ನೆಯನ್ನು "ಮುಸಲ್ಮಾನರೇ ಹಂಪಿಯ ಧ್ವಂಸಕ್ಕೆ ಕಾರಣ" ಎನ್ನುವವರೆಲ್ಲ ಚಿಂತಿಸಬೇಕು.

ದ್ವೇಷ, ಸಿಟ್ಟು, ಸೇಡವುಗಳನ್ನೇ ತನ್ನ ವ್ಯಕ್ತಿತ್ವವಾಗಿಸಿಕೊಂಡಿದ್ದ ಕೃಷ್ಣ ದೇವರಾಯ ಎಂತಹ ಅಮಾನವೀಯ ವ್ಯಕ್ತಿಯಾಗಿದ್ದ ಎಂಬುದಕ್ಕೆ ಒಂದು ಉದಾಹರಣೆ ಕೊಟ್ಟು ಈ ಟಿಪ್ಪಣಿಯನ್ನು ಮುಗಿಸುತ್ತೇನೆ.

ಎಲ್ಲರಿಗೂ ಗೊತ್ತಿರುವಂತೆ ಕೃಷ್ಣದೇವರಾಯ ರಾಜನಾಗಿ ಪಟ್ಟಾಭಿಷೇಕ ಮಾಡಿಕೊಳ್ಳಲು ನೆರವಾಗಿದ್ದು, ಆನಂತರ ಆತನ ವಿಸ್ತಾರವಾದ ಸಾಮ್ರಾಜ್ಯದ ಮೇಲೆ ಆಡಳಿತ ನಡೆಸಲು ನೆರವಾಗಿದ್ದು ತಿಮ್ಮರಸು ಎಂಬ ಪ್ರಧಾನಮಂತ್ರಿ. ಆದರೆ ಇದೇ ಮನುಷ್ಯನಿಗೆ ಕೃಷ್ಣದೇವರಾಯ ಆನಂತರ ಮಾಡಿದ್ದೇನು? 1524 ರಲ್ಲಿ ತನ್ನ ಮಗನನ್ನು ಯುವರಾಜ ಎಂದು ಕೃಷ್ಣದೇವರಾಯ ಘೋಷಿಸಿದ. ಆದರೆ ಆ ಬಾಲಕ ಬಹಳ ದಿನ ಬದುಕಿರಲಿಲ್ಲ. ಆತನಿಗೆ ಯಾರೋ ವಿಷ ನೀಡಿದ್ದರಿಂದ ಆತ ತೀರಿಕೊಂಡ. ಈ ಕುತಂತ್ರದ ಹಿಂದೆ ತಿಮ್ಮರಸುವಿನ ಪಾತ್ರವಿದೆ ಎಂದು ನಂಬಿದ ಕೃಷ್ಣದೇವರಾಯ ತಿಮ್ಮರಸುವಿನ ಮತ್ತು ಆತನ ಸಂಸಾರದ ಎಲ್ಲರ ಕಣ್ಣುಗಳನ್ನು ಕೀಳಿಸಿ ಅವನ ಇಡೀ ವಂಶವನ್ನೇ ಕುರುಡರನ್ನಾಗಿ ಮಾಡಿದ.


ಈ ಘೋರ ಕೃತ್ಯದ ನಂತರ ತನ್ನ ಮಗನ ಸಾವಿಗೆ ಒರಿಸ್ಸಾದ ಗಜಪತಿ ರಾಜವಂಶವೇ ಕಾರಣವೆಂದು ಕೃಷ್ಣದೇವರಾಯನಿಗೆ ಗೊತ್ತಾಯಿತು. ಕೃಷ್ಣದೇವರಾಯನ ಪರಮ ವೈರಿಗಳಾಗಿದ್ದ ಗಜಪತಿಗಳು ಆತನ ಕೈಯಲ್ಲಿ ಸೋಲನ್ನು ಅನುಭವಿಸಿದ್ದಲ್ಲದೆ, ತಮ್ಮ ರಾಜಕುಮಾರಿ ಜಗನ್ಮೋಹಿನಿಯನ್ನೂ ಆತನ ಮೂರನೇ ಪತ್ನಿಯಾಗಿ ಕೊಡುವುದಕ್ಕೆ ಒಪ್ಪಿಕೊಳ್ಳಬೇಕಾಗಿತ್ತು. ಕೃಷ್ಣದೇವರಾಯನ ತಾಯಿ ರಾಜವಂಶದವಳಾಗಿಲ್ಲದಿದ್ದರಿಂದ ಆತ ಶುದ್ಧ ರಕ್ತ ಹೊಂದಿಲ್ಲ ಎಂದೇ ಗಜಪತಿಗಳು ನಂಬಿದ್ದರು. ಆ ಕಾರಣಕ್ಕೆ ಆತನ ಮಗನನ್ನು ಕೊಲ್ಲುವ ಮೂಲಕ ಸೇಡು ತೀರಿಸಿಕೊಂಡಿದ್ದರು.

ಇದು ಗೊತ್ತಾದ ನಂತರ ಕೃಷ್ಣದೇವರಾಯ ತಿಮ್ಮರಸುವನ್ನು ಬಂಧನದಿಂದ ಬಿಡುಗಡೆಗೊಳಿಸಿದ. ತನ್ನ ಜೀವನ ಪರ್ಯಂತ ಕೃಷ್ಣದೇವರಾಯನಿಗೆ ನಿಷ್ಠೆ ತೋರಿದ್ದ ತಿಮ್ಮರಸುಗೆ ತನ್ನ ರಾಜನ ಬಗ್ಗೆಯೇ ಎಷ್ಟು ಜಿಗುಪ್ಸೆ ಆಗಿತ್ತೆಂದರೆ ಕೃಷ್ಣದೇವರಾಯನ ಎಲ್ಲಾ ನೆರವನ್ನು ತಿರಸ್ಕರಿಸಿ ತಿರುಪತಿಯಲ್ಲಿ ಭಿಕ್ಷುಕನಾದ. "ಸುವರ್ಣ" ರಾಜ್ಯದ ಮುಖ್ಯಮಂತ್ರಿಯಾಗಿದ್ದ ತಿಮ್ಮರಸು ತನ್ನ ಬದುಕಿನ ಕೊನೇ ಕ್ಷಣದ ತನಕ ಭಿಕ್ಷೆ ಬೇಡುತ್ತಾ ಕಡು ಬಡತನದಲ್ಲೇ ಸತ್ತು ಹೋದ....



ತಾತನಿಗೆ ಮೊಮ್ಮಕ್ಕಳ 'ಸ್ಮೈಲಿ'

ಇದೇ ಜನವರಿ 26 ರಂದು ನಮ್ಮ ಇಡೀ ಫ್ಯಾಮಿಲಿ ಅಪ್ಪನ ಸಮಾಧಿ ಇರುವಲ್ಲಿಗೆ ಹೋಗಿದ್ದೆವು. ಸಮಾಧಿಯನ್ನು ತೊಳೆದು ಶುದ್ಧಗೊಳಿಸಿದ ನಂತರ ಅಪ್ಪನ ಮೂವರು ಮೊಮ್ಮಕ್ಕಳಾದ ಒಂಭತ್ತು ವರ್ಷ ವಯಸ್ಸಿನ ಸಮರ್, ಐದು ವರ್ಷದವಳಾದ ಇಶಾ ಮತ್ತು ನಾಲ್ಕು ವರ್ಷದ ಪುಟಾಣಿ ಸಮಯ್ ತಾವೇ ಸಮಾಧಿಗೆ ಹೂವಿನ ಅಲಂಕಾರ ಮಾಡುವುದಾಗಿ ಹೇಳಿದರು.



ಎರಡು ವರ್ಷಗಳ ಹಿಂದೆ ಅದೇ ಸಮಾಧಿಯ ಮೇಲೆ ಕೂತ ಆ ಮೂವರು ಪರಸ್ಪರರ ಮೇಲೆ ಹೂವುಗಳನ್ನು ಎರಚಾಡಿಕೊಂಡು ಆಟವಾಡಿದ್ದರು. ಅದನ್ನು ನೋಡಿದಾಗ ಅವರೆಲ್ಲರೂ ಅಪ್ಪನ ಮೇಲೆಯೇ ಆಟವಾಡುತ್ತಿರುವಂತೆ, ಅಪ್ಪ ಸಂತೋಷದಿಂದ ನಗುತ್ತಿರುವಂತೆ ನಮಗೆ ಭಾಸವಾಗಿತ್ತು.

ಈ ಬಾರಿ ಪುಟಾಣಿಗಳ ಬಯಕೆಯಂತೆ ಹೂವನ್ನು ಸಮಾಧಿಯ ಮೇಲೆ ಜೋಡಿಸುವ 'ಜವಾಬ್ದಾರಿ'ಯನ್ನು ಅವರಿಗೇ ನೀಡಿದೆವು. ಸಮರ್‌ನ ನೇತೃತ್ವದಲ್ಲಿ ಅವರು ಹೂವನ್ನು 'ಸ್ಮೈಲಿ' (ನಗುತ್ತಿರುವ ಮುಖ) ಶೈಲಿಯಲ್ಲಿ ಜೋಡಿಸಿದರು. ಹಲವರಿಗೆ ಇದೆಂತಹ ಹುಡುಗಾಟ ಅನ್ನಿಸಬಹುದು. ಆದರೆ ತನ್ನ ಮೊಮ್ಮಕ್ಕಳ ಈ ಪುಷ್ಪ ಕಲೆಯಿಂದ ತಾತ ಲಂಕೇಶ್ ಸಂತೋಷದಿಂದ ನಗುತ್ತಿರುವಂತೆ ಅನ್ನಿಸುತ್ತೆ, ಅದಕ್ಕೆ ಅದನ್ನು ನಿಮ್ಮೊಂದಿಗೆ ಇಲ್ಲಿ ಹಂಚಿಕೊಳ್ಳುತ್ತಿದ್ದೇನೆ.

ಕ್ಯೂಟ್ ಆಗಿದೆಯಲ್ಲವೇ?!


● ಗೌರು

ಶ್ರೀರಾಮ ಸೇನೆಗೂ ಡಿವೈಎಫ್‌ಐಗೂ ಏನು ವ್ಯತ್ಯಾಸ?

ಬಿಹಳ ವಿಷಾದದಿಂದಲೇ ಈ ಪ್ರಶ್ನೆಯನ್ನು ಕೇಳಲೇಬೇಕಾಗಿ ಬಂದಿರುವುದು ನಮ್ಮ ದುರ್ದೈವ.

ಇದು ಇತ್ತೀಚೆಗೆ ಕೇರಳದಲ್ಲಿ ನಡೆದ ಘಟನೆ. ಕಾಂಗ್ರೆಸ್ ಪಕ್ಷದ ನಾಯಕನೊಬ್ಬ ಯಾವುದೋ ಮಹಿಳೆಯೊಂದಿಗೆ ಒಂದು ಮನೆಯಲ್ಲಿದ್ದಾಗ ಡೆಮಾಕ್ರಟಿಕ್ ಯೂತ್ ಫೆಡರೇಶನ್ ಆಫ್ ಇಂಡಿಯ (ಡಿವೈಎಫ್‌ಐ) ಸಂಘಟನೆಯ ಕಾರ್ಯಕರ್ತರು ಅವರಿಬ್ಬರನ್ನೂ ಹೊರಗೆಳೆದು ಥಳಿಸಿದ್ದರು. ಕೊನೆಗೆ ಅದಕ್ಕೆ ವೇಶ್ಯಾವಾಟಿಕೆ, ಅನೈತಿಕ ಸಂಬಂಧ, ನಮ್ಮ ಸಂಸ್ಕೃತಿಗೆ ಧಕ್ಕೆ ತರುವ ವಿಚಾರ ಅಂತೆಲ್ಲಾ ಬಡಬಡಾಯಿಸಿ ತಮ್ಮ ಕೃತ್ಯವನ್ನು ಸಮರ್ಥಿಸಿಕೊಂಡಿದ್ದರು. ಇಂಥ ಕೆಲಸವನ್ನು ಭಜರಂಗದಳದವರು, ಶ್ರೀರಾಮಸೇನೆಯವರು ಮಾಡುತ್ತಲೇ ಬಂದಿದ್ದಾರೆ. ವಯಸ್ಕ ಗಂಡು-ಹೆಣ್ಣುಗಳಿಬ್ಬರು ದೈಹಿಕ ಸಂಪರ್ಕ ಇಟ್ಟುಕೊಳ್ಳಬಾರದೆಂದಾಗಲೀ, ಏಕಾಂತದಲ್ಲಿರಬಾರದೆಂದಾಗಲೀ, ಜೊತೆಗೆ ಓಡಾಡಬಾರದೆಂದಾಗಲೀ ಭಾರತದ ಸಂವಿಧಾನವಾಗಲಿ, ಯಾವುದೇ ಕಾನೂನಾಗಲಿ ನಿರ್ಬಂಧ ವಿಧಿಸಿಲ್ಲ. ಆದರೂ ಭಜರಂಗದಳ, ಶ್ರೀರಾಮಸೇನೆ, ವಿಶ್ವ ಹಿಂದೂ ಪರಿಷತ್ತು, ಎಬಿವಿಪಿ, ಹಿಂದೂ ಜಾಗರಣ ವೇದಿಕೆ ಮುಂತಾದ ಸಂಘಪರಿವಾರದ ಕಪಿಗಳು ಏಕಾಂಗಿಯಾಗಿ ಹಿಂದೂ ಮತ್ತು ಮುಸ್ಲಿಂ ಧರ್ಮಗಳಿಗೆ ಸೇರಿದ ಇಬ್ಬರು ಹೆಣ್ಣು-ಗಂಡುಗಳು ಸಿಕ್ಕರೆ ಎಲ್ಲಿಲ್ಲದ ಹುಮ್ಮಸ್ಸಿನಿಂದ ಅವರನ್ನು ಹಿಡಿದು ದನಕ್ಕೆ ಬಡಿದಂತೆ ಬಡಿದು ಹಾಕುತ್ತಾರೆ. ಇಂಥ ಸಂಘಟನೆಗಳಿಂದ ಜನರನ್ನು ರಕ್ಷಿಸುವುದೇ ದೊಡ್ಡ ಕಷ್ಟವಾಗಿರುವಾಗ ಈಗ ಆ ಸಾಲಿಗೆ ಸಿಪಿಐ(ಎಂ)ನ ಯುವಜನ ಘಟಕವಾದ ಡಿವೈಎಫ್‌ಐ ಕೂಡ ಸೇರಿದೆಯೆಂದರೆ ನಿಜಕ್ಕೂ ದೇಶಕ್ಕೆದುರಾಗಿರುವ ಅಪಾಯದ ತೀವ್ರತೆ ಅರ್ಥವಾಗುತ್ತದೆ.

ಎಡ-ಬಲಪಂಥೀಯ ತೀವ್ರವಾದಿಗಳಿಂದ ದೂರವಿದ್ದು ಪ್ರಜಾತಾಂತ್ರಿಕ ಮೌಲ್ಯಗಳನ್ನು ಎತ್ತಿಹಿಡಿಯುತ್ತಿರುವ ಕೇರಳದ ಪ್ರಖ್ಯಾತ ಬರಹಗಾರ ಪಾಲ್ ಜಾಚರಿಯ ಅವರು ಡಿವೈಎಫ್‌ಐನ ಕೃತ್ಯವನ್ನು ಬಹಿರಂಗವಾಗಿ, ಬಲವಾಗಿ ಖಂಡಿಸಿದ್ದರು. ವ್ಯಕ್ತಿ ಸ್ವಾತಂತ್ರ್ಯವನ್ನು ಹರಣ ಮಾಡುತ್ತಿರುವ ತಥಾಕಥಿತ ಕಮ್ಯೂನಿಸ್ಟರ ವಿರುದ್ಧ ಹರಿಹಾಯ್ದಿದ್ದರು. ಅದರ ಪರಿಣಾಮವೇನಾಗುತ್ತದೆಂಬುದು ಅಂದೇ ಬಹಳಷ್ಟು ಜನರಿಗೆ ಗೊತ್ತಾಗಿತ್ತು. ನಿರೀಕ್ಷೆಯಂತೆ ಡಿವೈಎಫ್‌ಐ ಸಂಘಟನೆಯ ಗೂಂಡಾಗಳು ತಮ್ಮನ್ನು ವಿಮರ್ಶೆ ಮಾಡಿದ ಪಾಲ್ ಜಾಚರಿಯ ಅವರ ಮೇಲೆಯೇ ದೈಹಿಕ ದಾಳಿ ಮಾಡಿಬಿಟ್ಟರು! ಸಂಘಟನೆಯ ಯಾವುದೋ ಸ್ಥಳೀಯ ಶಾಖೆಯ, ಸೈದ್ಧಾಂತಿಕವಾಗಿ ಪಕ್ವವಾಗಿರದ ಕೆಲವ ಕಿಡಿಗೇಡಿಗಳು ಈ ಕೃತ್ಯ ಮಾಡಿದ್ದರೆ ಕ್ಷಮಿಸಿಬಿಡಬಹುದಿತ್ತೇನೋ? ಆದರೆ, ಸಿಪಿಎಂನ ಕೇರಳ ರಾಜ್ಯ ಕಾರ್ಯದರ್ಶಿ ಹಾಗೂ ಅತಿದೊಡ್ಡ ನಾಯಕನಾಗಿರುವ ಪಿಣರಾಯಿ ವಿಜಯನ್ ಕೂಡ ಪಾಲ್ ಜಾಚರಿಯ ಅವರ ಮೇಲಿನ ದೈಹಿಕ ದಾಳಿಯನ್ನು ಸಮರ್ಥಿಸಿಕೊಂಡರು. ಈ ಸಂದರ್ಭದಲ್ಲಿ ಅವರು "ಯಾರೇ ಆಗಲಿ ಬಹಿರಂಗವಾಗಿ ಮಾತನಾಡುವಾಗ ತಮ್ಮ ಮಾತುಗಳ ಬಗ್ಗೆ ಎಚ್ಚರಿಕೆಯಿಂದಿರಬೇಕು" ಎಂಬ ಅಪ್ಪಣೆಯನ್ನೂ ಉಳಿದವರಿಗೂ ಕೊಟ್ಟರು. ಕೊಲ್ಕತ್ತಾದಿಂದ ಬಂದ ಮುಖ್ಯಮಂತ್ರಿ ಅಚ್ಯುತಾನಂದನ್ ಪಾಲ್ ಜಾಚರಿಯ ಅವರಿಗೆ ಫೋನಾಯಿಸಿ ಘಟನೆಯ ಬಗ್ಗೆ ತನಿಖೆ ನಡೆಸುವುದಾಗಿ ಹೇಳಿ ಕೈತೊಳೆದುಕೊಂಡರು.




ಇಂಥ ಘಟನೆಗಳನ್ನು ನೋಡಿದರೆ ಇವರು ನಿಜಕ್ಕೂ ಕಮ್ಯೂನಿಸ್ಟರಾ ಎಂಬ ಪ್ರಶ್ನೆ ಏಳುತ್ತದೆ. ವಿರುದ್ಧ ಲಿಂಗಕ್ಕೆ ಸೇರಿದ ಇಬ್ಬರು ವಯಸ್ಕರರು ಜೊತೆಗಿರುವಾಗ ದಾಳಿ ಮಾಡಿ ದನಕ್ಕೆ ಬಡಿದಂತೆ ಬಡಿಯುವುದು, ಅಂಥ ಕೃತ್ಯವನ್ನು ವಿಮರ್ಶಿಸಿದವರ ಮೇಲೂ ದೈಹಿಕ ದಾಳಿ ಮಾಡುವುದು ವಾಸ್ತವದಲ್ಲಿ ಸಂಘಪರಿವಾರದ ಗೂಂಡಾಗಳ ಜಾಯಮಾನ. ಅದನ್ನೆ ಎಡತೀವ್ರವಾದಿ ಸಿಪಿಎಂ ಕೂಡ ಮಾಡುತ್ತದೆಂದರೆ ಇಬ್ಬರಿಗೂ ಏನು ವ್ಯತ್ಯಾಸ ಎಂಬ ಪ್ರಶ್ನೆ ಏಳುವುದಿಲ್ಲವೆ? ಯಾರು ಯಾರನ್ನು ಪ್ರೇಮಿಸಬೇಕು, ಯಾರು ಯಾರೊಂದಿಗೆ ಲೈಂಗಿಕ ಸಂಬಂಧವಿಟ್ಟುಕೊಳ್ಳಬೇಕು, ಯಾರು ಯಾರೊಂದಿಗೆ ಸಿನಿಮಾ, ಪಾರ್ಕ್‌ಗೆ, ಪಿಕ್‌ನಿಕ್‌ಗೆ, ಬೀಚ್‌ಗೆ ಹೋಗಬೇಕು ಎಂಬುದನ್ನು ಡಿವೈಎಫ್‌ಐ ಅಥವ ಭಜರಂಗದಳದವರನ್ನು ಕೇಳಿಹೋಗಬೇಕೆ?

ದುರಂತ ನೋಡಿ. ಈ ಹಿಂದೆ ತಮಗನ್ನಿಸಿದ್ದನ್ನು ನೇರವಾಗಿ, ಬಹಿರಂಗವಾಗಿ ಮಾತನಾಡಿದ್ದಕ್ಕೆ ಪಾಲ್ ಜಾಚರಿಯ ಅವರ ಮೇಲೆ ಸಂಘಪರಿವಾರದ ಗೂಂಡಾಗಳು ದಾಳಿ ನಡೆಸಿದ್ದರು. ಈಗ ಕಮ್ಯೂನಿಸ್ಟರು ಪೆಟ್ಟು ಕೊಟ್ಟಿದ್ದಾರೆ. ತೀವ್ರವಾದಿಗಳು ಬೆಳೆದರೆ, ಅವರು ಎಡ ತೀವ್ರವಾದಿಗಳಿರಲಿ, ಬಲ ತೀವ್ರವಾದಿಗಳಿರಲಿ, ಎಂಥ ದುರಂತವನ್ನು ಎದುರಿಸಬೇಕಾಗುತ್ತದೆ ಎಂಬುದಕ್ಕೆ ಇದೊಂದು ಚಿಕ್ಕ ಉದಾಹರಣೆಯಷ್ಟೆ. ●

ಗ್ವಾಂಟನಾಮೋ ಚಿತ್ರಹಿಂಸೆಗೆ ಕೊನೆಯೆಂದು?

ಬರಾಕ್ ಒಬಾಮಾ ಅಮೆರಿಕದ ಅಧ್ಯಕ್ಷಗಾದಿಗೇರಿ ಒಂದು ವರ್ಷ ಆಯಿತು. ಅಧಿಕಾರಕ್ಕೇರಿದ ಹೊಸತರಲ್ಲಿ ಒಬಾಮ ಕೂಡ ತನ್ನ ಮೇಲೆ ಅಪಾರ ಭರವಸೆಯನ್ನಿಟ್ಟು ವಿಶ್ವದ ಅತ್ಯಂತ ಬಲಿಷ್ಠ ರಾಷ್ಟ್ರವೊಂದರ ಪರಮೋಚ್ಚ ನಾಯಕನನ್ನಾಗಿ ಆರಿಸಿದ ಮತದಾರರ ಚುನಾವಣೆಯ ಸಮಯದಲ್ಲಿ ಕೊಟ್ಟ ಭರವಸೆಗಳ ಜೊತೆಗೆ ಹೊಸ ಆಶ್ವಾಸನೆಯನ್ನೂ ಕೊಡಲಾರಂಭಿಸಿದರು. ಇರಾಕ್ ಮತ್ತು ಅಫಘಾನಿ ಸ್ತಾನಗಳಿಂದ ಅಮೆರಿಕ ಸೈನ್ಯವನ್ನು ವಾಪಾಸ್ಸು ಕರೆಸಿಕೊಳ್ಳುವ ಮೂಲಕ ಆಯಾ ದೇಶದ ಆಡಳಿತವನ್ನು ಆಯಾ ದೇಶದ ಜನರಿಗೇ ಬಿಟ್ಟುಕೊಡು ವುದು, ಇಸ್ರೇಲ್-ಪ್ಯಾಲಿಸ್ಟೇನ್ ಸಮಸ್ಯೆಯನ್ನು ಶಾಂತಿಯುತವಾಗಿ ಬಗೆಹರಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುವುದು - ಹೀಗೆ ಅವರು ಕೊಟ್ಟ ಹತ್ತು ಹಲವು ಭರವಸೆಗಳು ಕೇವಲ ಅಮೆರಿಕ ಜನತೆಗೆ ಮಾತ್ರವಲ್ಲ, ವಿಶ್ವದಾದ್ಯಂತ ಅನೇಕ ಪ್ರಗತಿಪರರಿಗೆ, ಶಾಂತಿಪ್ರಿಯರಿಗೆ, ಪ್ರಜಾತಂತ್ರವಾದಿಗಳಿಗೆ ಸಂತಸವನ್ನುಂಟುಮಾಡಿದ್ದವು. ತನ್ನ ಮಾತಿಗೆ ತಲೆಬಾಗದ ದೇಶಗಳ ಮೇಲೆ ಸರ್ವಾಧಿಕಾರಿಯಂತೆ ಅನ್ಯಾಯವಾಗಿ ಯುದ್ಧ ಮಾಡುತ್ತಾ ಶತಶತಮಾನಗಳಿಂದ ಕಟ್ಟಿದ ದೇಶಗಳನ್ನು ಬಾಂಬುಗಳ ಸುರಿಮಳೆ ಸುರಿಸಿ ಧ್ವಂಸ ಮಾಡುತ್ತಾ, ಆ ದೇಶಗಳು ದುರ್ಬಲವಾದ ಮೇಲೆ ಅವುಗಳ ಪ್ರಾಕೃತಿಕ ಸಂಪತ್ತನ್ನು ನಿರಂತರವಾಗಿ ಲೂಟಿ ಹೊಡೆಯುತ್ತಾ ವಿಶ್ವದ ಮೇಲೆ ಆಧಿಪತ್ಯ ಸಾಧಿಸಲು ಹೊರಟಿದ್ದ ಅಮೆರಿಕದಂತ ರಾಕ್ಷಸೀ ಪ್ರಭುತ್ವಕ್ಕೊಬ್ಬ ಮಾನವೀಯ ಹೃದಯದ ಅಧ್ಯಕ್ಷ ಸಿಕ್ಕನಲ್ಲ ಎಂದು ಖುಷಿಪಟ್ಟಿದ್ದರು.

ಒಬಾಮ ಅಮೆರಿಕದ ಚುಕ್ಕಾಣಿ ಹಿಡಿದು ಒಂದು ವರ್ಷವಾಗಿರುವ ಈ ಸಂದರ್ಭದಲ್ಲಿ ನಿಂತು ನೋಡಿ. ಒಂಭತ್ತು ವರ್ಷಗಳ ಹಿಂದೆ ಅಫಘಾನಿಸ್ತಾನಕ್ಕೆ ಹೋಗಿದ್ದ ಅಮೆರಿಕದ ಸೈನ್ಯ ಇನ್ನೂ ಹಿಂತಿರುಗಿಲ್ಲ, ಅದಾದ ಒಂದೂವರೆ ವರ್ಷದಲ್ಲಿ ಇರಾಕ್‌ಗೆ ಹೋಗಿದ್ದ ಸೈನ್ಯವೂ ಸಂಪೂರ್ಣವಾಗಿ ವಾಪಾಸ್ಸಾಗಿಲ್ಲ, ಅಲ್ಲಿಂದ ಸೈನ್ಯವನ್ನು ವಾಪಾಸ್ಸು ಕರೆಸಿಕೊಳ್ಳುವುದಿರಲಿ, ಇನ್ನೂ ಹೆಚ್ಚು ಹೆಚ್ಚು ಸೈನಿಕರನ್ನು, ಯುದ್ಧ ವಿಮಾನಗಳನ್ನು, ಬಾಂಬು ಬಂದೂಕುಗಳನ್ನು, ಸೇನಾ ವಾಹನಗಳನ್ನು ಒಬಾಮ ಕಳಿಸಿಕೊಡುತ್ತಿದ್ದಾರೆ! ಈಗಾಗಲೇ ಅಫಘಾನಿಸ್ತಾನದಲ್ಲಿ ಹೆಚ್ಚೂ ಕಡಿಮೆ ನಲ್ವತ್ತು ಸಾವಿರದಷ್ಟು ಅಮೆರಿಕನ್ ಸೈನಿಕರಿದ್ದು ಅವರ ಸಂಖ್ಯೆಯನ್ನು ಒಂದು ಲಕ್ಷಕ್ಕೇರಿಸುವುದಕ್ಕೆ ಒಬಾಮ ತೀರ್ಮಾನಿಸಿದ್ದಾರೆ. ಇನ್ನು ಅಮೆರಿಕದ ಬೆಂಬಲದೊಂದಿಗೆ ಇಸ್ರೇಲ್ ಪ್ಯಾಲಿಸ್ಟೇನ್ ಮೇಲೆ ಮಾಡುತ್ತಿರುವ ಅತ್ಯಾಚಾರ ನಿಂತಿಲ್ಲ, ನಿಜ ಹೇಳಬೇಕೆಂದರೆ ಒಬಾಮ ಅಧಿಕಾರಕ್ಕೆ ಬಂದ ಮೇಲೆ ಅಮೆರಿಕದಿಂದ ಇಸ್ರೇಲ್‌ಗೆ ಹಣ, ಯುದ್ಧಾಸ್ತ್ರಗಳ ಹರಿವು ಹೆಚ್ಚಾಗಿದೆಯೇ ಹೊರತು ಕಡಿಮೆಯೇನಾಗಿಲ್ಲ, ಪರಿಣಾಮವಾಗಿ, ಪ್ಯಾಲಿಸ್ಟೇನ್ ಮೇಲೆ ಇಸ್ರೇಲ್‌ನ ಆಕ್ರಮಣಗಳೂ ಕೊನೆಮೊದಲಿಲ್ಲದೇ ಸಾಗುತ್ತಿವೆ.



ಸುತ್ತ-ಮುತ್ತ

ಕುಮಾರ್ ಬುರಡಿಕಟ್ಟಿ

ಅದಿರಲಿ, ಒಬಾಮ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಕೆಲವೇ ದಿನಗಳಲ್ಲಿ ಇನ್ನೊಂದು ಮಹತ್ವಪೂರ್ಣ ಭರವಸೆಯನ್ನು ಕೊಟ್ಟಿದ್ದರು. ಅದೆಂದರೆ 2010ರ ಜನವರಿ 22ರ ಒಳಗೆ ಕ್ಯೂಬಾದಲ್ಲಿರು ಗ್ವಾಂಟನಾಮೋ ಚಿತ್ರಹಿಂಸಾ ಶಿಬಿರವನ್ನು ಮುಚ್ಚುವುದು. ಈಗ ಅವರೇ ನಿಗದಿಮಾಡಿಕೊಂಡಿದ್ದ ಗಡುವು ಮುಗಿದಿರುವ ಹೊತ್ತಿನಲ್ಲಿ ಶ್ವೇತಭವನದಿಂದ ಒಂದು ಪ್ರಕಟಣೆಯೂ ಹೊರಬಿದ್ದಿದೆ. ಅದರಲ್ಲಿ ಅಧ್ಯಕ್ಷ ಒಬಾಮ ಕೊಟ್ಟಿದ್ದ ಭರವಸೆಯಂತೆ ಗ್ವಾಂಟನಾಮೋ ಬಂದೀಖಾನೆಯನ್ನು ಮುಚ್ಚುವುದಕ್ಕೆ ಸಾಧ್ಯವಾಗುತ್ತಿಲ್ಲ ಎಂದು



ಹೇಳಲಾಗಿದೆ. ಅಲ್ಲದೇ, ಅದನ್ನು ಯಾವಾಗ ಮುಚ್ಚುತ್ತಾರೆಂಬುದರ ಬಗ್ಗೆ ಅಥವ ಮುಚ್ಚುತ್ತಾರೋ ಇಲ್ಲವೋ ಎಂಬ ಬಗ್ಗೆ ಖಚಿತವಾಗಿ ಏನನ್ನೂ ಹೇಳಿಲ್ಲ. ಅದರರ್ಥ ಈ ಚಿತ್ರಹಿಂಸಾ ಶಿಬಿರ ಹಿಂದಿನ ಅಧ್ಯಕ್ಷರಾವಧಿಯಲ್ಲಿಯಂತೆಯೂ ಒಬಾಮ ಅವಧಿಯಲ್ಲೂ ತನ್ನ ಪೈಶಾಚಿಕ ಕೃತ್ಯಗಳನ್ನು ಯಾವುದೇ ಅಡೆತಡೆಯಿಲ್ಲದೇ ಮುಂದುವರೆಸುತ್ತದೆ ಎಂಬುದಷ್ಟೇ ಆಗಿದೆ.

ಅಸಲಿಗೆ ಗ್ವಾಂಟನಾಮೋ ಚಿತ್ರಹಿಂಸಾ ಶಿಬಿರವನ್ನು ಅಮೆರಿಕ ಸ್ಥಾಪಿಸಿದ್ದೇ ವಿಶ್ವದ ಮೇಲಿನ ತನ್ನ ಮಿಲಿಟರಿ ಆಕ್ರಮಣವನ್ನು ವಿಸ್ತರಿಸುವ, ಬಿಗಿಗೊಳಿಸುವ ವಿಶಾಲ ವ್ಯೂಹತಂತ್ರದ ಭಾಗವಾಗಿ. 2001ರಲ್ಲಿ ಅಮೆರಿಕ "ಭಯೋತ್ಪಾದನೆಯ ಮೇಲೆ ಜಾಗತಿಕ ಸಮರ"ದ ಹೆಸರಿನಲ್ಲಿ ಅಫಘಾನಿಸ್ತಾನದ ಮೇಲೆ ಯುದ್ಧ ಸಾರಿದಾಗ ಅಲ್ಲಿ ಅನುಮಾನ ಬಂದವರನ್ನೆಲ್ಲಾ ಅರೆಸ್ಟ್ ಮಾಡಿ ಕೂಡಿಡುವುದಕ್ಕಾಗಿ, ಅವರನ್ನು ಚಿತ್ರವಿಚಿತ್ರ ದೈಹಿಕ ಹಿಂಸೆಗಳಿಗೆ ಒಳಪಡಿಸಿ ತಾಲೀಬಾನ್ ಜಾಲದ ರಹಸ್ಯಗಳನ್ನು ಬಾಯ್ಬಿಡಿಸುವುದಕ್ಕಾಗಿ 2002ರಲ್ಲಿ ಈ ಗ್ವಾಂಟನಾಮೋ ಬಂದಿಖಾನೆಯನ್ನು ತೆರೆಯಲಾಯಿತು. ವಿಶೇಷ ಎಂದರೆ ಈ ಬಂದಿಖಾನೆಯಿರುವುದು ಅಮೆರಿಕದ ನೆಲದಲ್ಲಲ್ಲ. ಪಕ್ಕದ ಕ್ಯೂಬಾದಲ್ಲಿ, ಗ್ವಾಂಟನಾಮೋ ಕೊಲ್ಲಿಯಲ್ಲಿದೆ. ತನ್ನ ನೆಲದಲ್ಲಿ ಇಂಥ ಒಂದು ಚಿತ್ರಹಿಂಸಾ ಶಿಬಿರವನ್ನು ಸ್ಥಾಪಿಸುವುದು ಅಮೆರಿಕದಲ್ಲಿರುವ ಕಾನೂನುಗಳಿಗೆ ವಿರುದ್ಧವಾದದ್ದಾಗಿದ್ದರಿಂದ ಅದನ್ನು ಅಲ್ಲಿ ಸ್ಥಾಪಿಸಲಾಗಿದೆ. ಹೀಗಾಗಿ, ಅಲ್ಲಿ ಬಂಧಿಯಾಗಿರುವವರ ಮೇಲೆ ಎಂತಹುದೇ ಚಿತ್ರಹಿಂಸೆ ನಡೆದರೂ ಅದು ಅಮೆರಿಕದ ಕಾನೂನು ವ್ಯಾಪ್ತಿಗೆ ಬರುವುದೇ ಇಲ್ಲ!

ಯಾರನ್ನೇ ಆದರೂ ಬಂಧಿಸಿದ ಮೇಲೆ ಆಯಾ ದೇಶದಲ್ಲಿ ಅಸ್ತಿತ್ವದಲ್ಲಿರುವ ಕಾನೂನಿನ ಪ್ರಕಾರ ಅವರ ಮೇಲಿರುವ ಆರೋಪಗಳ ಬಗ್ಗೆ ಮೊಕದ್ದಮೆ ದಾಖಲಿಸಬೇಕು, ದೋಷಾರೋಪ ಪಟ್ಟಿ ಸಲ್ಲಿಸಬೇಕು, ನ್ಯಾಯಾಲಯದ ಕಟಕಟೆಯಲ್ಲಿ ವಿಚಾರಣೆ ನಡೆಯಬೇಕು. ಅವರು ತಪ್ಪಿತಸ್ಥರೆಂದು ಸಾಬೀತಾದರೆ ಕಾನೂನಿನ ಪ್ರಕಾರ ಶಿಕ್ಷೆಯಾಗುತ್ತದೆ. ನಿರಪರಾಧಿಯಾಗಿದ್ದರೆ ಬಿಡುಗಡೆ ಮಾಡಲಾಗುತ್ತದೆ. ವಿಶ್ವದ ಎಲ್ಲಾ ದೇಶಗಳೂ ಈ ನಿಯಮವನ್ನು ಪರಿಪಾಲಿಸುತ್ತಿವೆ. ಅಸ್ತಿತ್ವದಲ್ಲಿರುವ ಕಾನೂನಿನ ಪ್ರಕಾರ ಅಮೆರಿಕವೂ ಇದೇ ಪ್ರಕ್ರಿಯೆಯನ್ನು ಪಾಲಿಸಬೇಕು. ಆದರೆ, ಅದರಿಂದ ತಪ್ಪಿಸಿಕೊಳ್ಳುವುದಕ್ಕಾಗಿಯೇ ಅಮೆರಿಕದಿಂದ ಹೊರಗೆ ಈ ಚಿತ್ರಹಿಂಸಾ ಶಿಬಿರವನ್ನು ಸ್ಥಾಪಿಸಲಾಗಿದೆ. ಅಲ್ಲಿರುವ ಯಾವುದೇ ಬಂಧಿತರ ಮೇಲೂ ಒಂದೇ ಒಂದು ಕೇಸು ದಾಖಲಿಸಿಲ್ಲ, ದೋಷಾರೋಪ ಪಟ್ಟಿ ಸಲ್ಲಿಸಿಲ್ಲ, ನ್ಯಾಯಾಲಯದಲ್ಲಿ ಹಾಜರುಪಡಿಸಿ ವಿಚಾರಣೆ ನಡೆಸಿಲ್ಲ, ಅನುಮಾನ ಬಂದವರನ್ನು ಅರೆಸ್ಟ್ ಮಾಡುವುದು, ತಿಂಗಳುಗಟ್ಟಲೇ, ವರ್ಷಗಟ್ಟಲೇ ಚಿತ್ರಹಿಂಸೆ ಕೊಡುವುದು, ಕೊನೆಗೆ ನಿರಪರಾಧಿಯೆಂದು ಸೈನ್ಯಾಧಿಕಾರಿಗಳಿಗೆ ಮನವರಿಕೆಯಾದ ಮೇಲೆ ಅವರನ್ನು ಬಿಡುಗಡೆ ಮಾಡುವುದು (ಅಷ್ಟೆಲ್ಲಾ ಚಿತ್ರಹಿಂಸೆ ಅನುಭವಿಸಿಯೂ ಬದುಕುಳಿದಿದ್ದರೆ) - ಇದು ಅಮೆರಿಕದ ಸೈನ್ಯ ಅನುಸರಿಸುತ್ತಿರುವ ಪೈಶಾಚಿಕ ನೀತಿ.

ಗ್ವಾಂಟನಾಮೋ ಚಿತ್ರಹಿಂಸಾ ಶಿಬಿರದಲ್ಲಿ ಬಂಧಿಗಳಿಗೆ ಹೇಗ್ಹೇಗೆ ಚಿತ್ರಹಿಂಸೆ ನೀಡಲಾಗುತ್ತದೆ ಎಂಬುದನ್ನು ಖುದ್ದು ಅನುಭವಿಸಿ ಕೊನೆಗೆ ಬಿಡುಗಡೆಗೊಂಡು ಬಂದಿರುವ ಅಮಾಯಕ ನಿರಪರಾಧಿಗಳು ಅನೇಕ ಬಾರಿ ತೋಡಿಕೊಂಡಿದ್ದಾರೆ; ಅವರು ಹೇಳುವ ಒಂದೊಂದು ಘಟನೆಗಳೂ ಹೃದಯವಿದ್ರಾವಕವಾಗಿದ್ದು ನಿಜಕ್ಕೂ ಮೈ ನಡುಗಿಸುತ್ತವೆ. ಪ್ರಾಣಿಗಳನ್ನು ಕೂಡಿಡುವಂತೆ ಮನುಷ್ಯರನ್ನೂ ಇಲ್ಲಿ ಬೋನುಗಳಲ್ಲಿ ಕೂಡಿಹಾಕಲಾಗುತ್ತದೆ. ಗಾತ್ರದಲ್ಲಿ ಅವು ಪ್ರಾಣಿಗಳ ಬೋನುಗಳಷ್ಟೇ ದೊಡ್ಡವಿರುತ್ತವೆಯಾದ್ದರಿಂದ ಕೈಕಾಲು ಆಡಿಸುವುದಕ್ಕೂ ಅವಕಾಶವಿರುವುದಿಲ್ಲ. ಹಲವಾರು ಸಂದರ್ಭದಲ್ಲಿ ಈ ಬೋನುಗಳನ್ನೂ ಜೊತೆಗಿಡುವುದಿಲ್ಲ, ಬಂಧಿಗಳು ಪರಸ್ಪರ ಮಾತನಾಡಿಕೊಳ್ಳಬಾರದೆಂಬ ಕಾರಣಕ್ಕೆ ಪ್ರತ್ಯೇಕವಾಗಿ, ಏಕಾಂಗಿಯಾಗಿ ಇಡಲಾಗುತ್ತದೆ. ನಾಲ್ಕು ದಿನಕ್ಕೋ, ಐದು ದಿನಕ್ಕೋ, ಆರು ದಿನಕ್ಕೋ ಸೈನಿಕರು ಬಂದು ಚಿತ್ರಹಿಂಸೆ ಕೊಟ್ಟು ವಿಚಾರಣೆ ನಡೆಸಿ ಮತ್ತೆ ಬೋನಿನೊಳಗೆ ಹಾಕಿಹೋಗುತ್ತಾರೆ. ದಿನದ ಇಪ್ಪತ್ನಾಲ್ಕು ಗಂಟೆಯಲ್ಲಿ ಒಂದು ನಿಮಿಷವೂ ನಿದ್ದೆ ಮಾಡದಂತೆ ಹಿಂಸಿಸುತ್ತಾರೆ. ಬಂಧಿಗಳ ಇಚ್ಛೆಗೆ ವಿರುದ್ಧವಾಗಿ ಅದ್ಯಾವುದೋ ಮತ್ತು ಬರುವ ಇಂಜೆಕ್ಷನ್ ಕೊಟ್ಟು ಹಿಂಸಿಸಲಾಗುತ್ತದೆ. ಹೀಗೆ, ಒಬ್ಬ ವ್ಯಕ್ತಿ ಯಾರೊಂದಿಗೂ ಮಾತನಾಡದೇ, ಏಕಾಂಗಿಯಾಗಿ, ಪ್ರಾಣಿಯಂತೆ ಬೋನಿನೊಳಗೆ ಎರಡು ವರ್ಷಗಳನ್ನು ಕಳೆದರೆ ಆತನ ಪರಿಸ್ಥಿತಿ ಏನಾಗಿರಬೇಡ? ಅಲ್ಲಿಂದ ಬಿಡುಗಡೆಯಾಗಿ ಬಂದಿರುವ ಹಲವಾರು ನಿರಪರಾಧಿಗಳೇ ಇದಕ್ಕೆ ಉತ್ತರವಾಗಿ ನಿಲ್ಲುತ್ತಾರೆ. ಉತ್ತಮ, ಆರೋಗ್ಯಪೂರ್ಣ ವ್ಯಕ್ತಿಗಳಾಗಿ ಗ್ವಾಂಟನಾಮೋದ ಒಳಗೆ ಹೋದವರು ಮನೋರೋಗಿಗಳಾಗಿ ಹೊರಬಂದಿದ್ದಾರೆ. ಮತ್ತೆ ಕೆಲವರು ನಿರಪರಾಧಿಗಳಾಗಿದ್ದ ತಮ್ಮ ಮೇಲೆ ಅಮಾನುಷ ಕ್ರೌರ್ಯಗಳನ್ನೆಸಗಿದ್ದಕ್ಕೆ ಅಮೆರಿಕದ ಮೇಲೆ ಪ್ರತೀಕಾರ ತೀರಿಸಿಕೊಳ್ಳಲು ಭಯೋತ್ಪಾದಕರಾಗಿ ಬದಲಾಗಿದ್ದಾರೆ! ಕೆಲವೊಮ್ಮೆ ಗ್ವಾಂಟನಾಮೋವನ್ನು ಸ್ಥಾಪಿಸಿರುವುದು ಭಯೋತ್ಪಾದಕರನ್ನು ನಿರ್ಮೂಲನೆ ಮಾಡುವುದಕ್ಕೋ ಅಥವ ಭಯೋತ್ಪಾದಕರನ್ನು ತಯಾರಿಸುವುದಕ್ಕೋ ಎಂಬ ಅನುಮಾನವೂ ಬರುತ್ತದೆ.

ಅಂತಾರಾಷ್ಟ್ರೀಯ ಜಿನೇವಾ ಸಮ್ಮೇಳನವು ಯುದ್ಧ ಕೈದಿಗಳಿಗಿರುವ ಹಕ್ಕುಗಳನ್ನು, ಅವರನ್ನು ನಡೆಸಿಕೊಳ್ಳಬೇಕಿರುವ ರೀತಿಯನ್ನು ಸ್ಪಷ್ಟವಾಗಿ ಹೇಳಿದೆ. ಅದನ್ನು ಎಲ್ಲಾ ರಾಷ್ಟ್ರಗಳು ಚಾಚೂತಪ್ಪದೇ ಪರಿಪಾಲಿಸಬೇಕು. ಆದರೆ, ಅಮೆರಿಕ ಮಾತ್ರ ಅದ್ಯಾವುದಕ್ಕೂ ಸೊಪ್ಪು ಹಾಕುವುದಿಲ್ಲ, ಇಡೀ ವಿಶ್ವಕ್ಕೇ ಮಾನವೀಯತೆ ಬಗ್ಗೆ ಸಾರುವ, ಪ್ರಜಾತಂತ್ರದ ಬಗ್ಗೆ ಉದ್ದುದ್ದ ಭಾಷಣ ಮಾಡುವ ಅಮೆರಿಕ, ನಾಡಿನ ಕಾನೂನುಗಳನ್ನು ಪರಿಪಾಲಿಸುವ ಪಾಠ ಹೇಳುತ್ತಿರುವ ಅಮೆರಿಕ ಖುದ್ದಾಗಿ ಕಾನೂನುಗಳನ್ನು ಪರಿಪಾಲಿಸುತ್ತಿರುವ ಪರಿಯಿದು. ಗ್ವಾಂಟೆನಾಮೋ ಚಿತ್ರಹಿಂಸಾ ಶಿಬಿರದ ಬಗ್ಗೆ ವಿಶ್ವದಾದ್ಯಂತ ಅನೇಕ ಮಾನವ ಹಕ್ಕು ಸಂಘಟನೆಗಳು ದೊಡ್ಡ ಮಟ್ಟದಲ್ಲಿ ಪ್ರತಿಭಟನೆಯ ಕೂಗೆಬ್ಬಿಸಿ ಅಮೆರಿಕಕ್ಕೆ ಮುಜುಗರವುಂಟುಮಾಡುತ್ತಲೇ ಇವೆ. ಈ ಹಿನ್ನೆಲೆಯಲ್ಲಿಯೇ ಒಬಾಮ ಕೂಡ ತನ್ನನ್ನು ಇತರ ಅಧ್ಯಕ್ಷರಿಗಿಂತ ಭಿನ್ನವಾಗಿ ಪ್ರೊಜೆಕ್ಟ್ ಮಾಡಿಕೊಳ್ಳುವ ಸಲುವಾಗಿ 2010ರ ಜನವರಿ 22ರ ಒಳಗೆ ಮುಚ್ಚುವುದಾಗಿ ಭರವಸೆ ಕೊಟ್ಟಿದ್ದು. ಆತ ಎಷ್ಟು ಚಾಲಾಕಿ ಎಂದರೆ ಒಂದೆಡೆ ಗ್ವಾಂಟೆನಾಮೋ ಬಂದೀಖಾನೆಯನ್ನು ಮುಚ್ಚುವ ಮಾತನಾಡುತ್ತಲೇ ಅತ್ತ ಇರಾಕಿನಲ್ಲಿ ಗ್ವಾಂಟನಾಮೋಗಿಂತ ಭಯಂಕರವಾದ ಮೂರ್‍ನಾಲ್ಕು ಚಿತ್ರಹಿಂಸಾ ಶಿಬಿರಗಳನ್ನು ತೆರೆದ! ಅಂದರೆ, ಒಬಾಮಾ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡ ಮೇಲೆ ಗ್ವಾಂಟನಾಮೋಗಳ ಸಂಖ್ಯೆ ನಾಲ್ಕೈದು ಆದಂತಾಯಿತು.

ಅಸಲಿಗೆ ಅದು ಒಬಾಮನ ಮಿತಿಯಲ್ಲ. ಈ ಹೊತ್ತು ಅದರ ಪ್ರಭುತ್ವ ಯಂತ್ರಾಂಗವೇ ಹೇಗಾಗಿಬಿಟ್ಟಿದೆಯೆಂದರೆ ಅಧ್ಯಕ್ಷ ಬಯಸಿದರೂ ಅಮೆರಿಕದ ಯುದ್ಧಕೋರ ವಿದೇಶಾಂಗ ನೀತಿಯನ್ನು ಬದಲಿಸಲಿಕ್ಕಾಗುವುದಿಲ್ಲ, ಎಲ್ಲಿಯತನಕ ಈ ನೀತಿ ಬದಲಾಗುವುದಿಲ್ಲವೋ ಅಲ್ಲಿಯತನಕ ಗ್ವಾಂಟನಾಮೋಗಳು ಅಸ್ತಿತ್ವದಲ್ಲಿದ್ದೇ ಇರುತ್ತವೆ. ಹೆಚ್ಚೆಂದರೆ ಹೆಸರು, ಸ್ಥಳ ಬದಲಾಗಬಹುದಷ್ಟೆ.

ವಿಶೇಷ ನೋಡಿ. ವಿಶ್ವದ ಮೊದಲ ಚಿತ್ರಹಿಂಸಾ ಶಿಬಿರ (concentration camp) ಅಸ್ತಿತ್ವಕ್ಕೆ ಬಂದಿದ್ದು ಕ್ಯೂಬಾದಲ್ಲಿ. 1890ರ ದಶಕದಲ್ಲಿ ಸ್ಪೇನ್ ಅದನ್ನು ಸ್ಥಾಪಿಸಿತ್ತು. ವಿಶ್ವದ ಕೊನೆಯ ಚಿತ್ರಹಿಂಸಾ ಶಿಬಿರವೂ ಅಸ್ತಿತ್ವದಲ್ಲಿರುವುದು ಕ್ಯೂಬಾದಲ್ಲಿ. ಅದನ್ನು ಅಮೆರಿಕ ಸ್ಥಾಪಿಸಿದೆ. ಅವುಗಳ ಸ್ಥಾಪನೆಯ ಹಿಂದೆ ಎರಡೂ ದೇಶಗಳಿಗಿದ್ದ ಉದ್ದೇಶವೂ ಒಂದೇ. ●

ಗೋಕರ್ಣ ಪ್ರಕರಣದಿಂದ ಮುಖ್ಯಮಂತ್ರಿ ಯಡಿಯೂರಪ್ಪ ಪಾಠ ಕಲಿತಂತೆ ಕಾಣುತ್ತಿಲ್ಲ. ಒಂದು ಸಲ ಎಲ್ಲರಿಂದಲೂ ಉಗಿಸಿಕೊಂಡ ಯಡ್ಡಿ ಮತ್ತೆ ಉಗಿಸಿಕೊಳ್ಳುವ ಮಹದಾಸೆಯಲ್ಲಿದ್ದಾರೆ. ಹಾಗಾಗಿ ಗೋಕರ್ಣ ಮಾದರಿಯಲ್ಲೇ ಉಡುಪಿಯ ಪ್ರಸಿದ್ಧ ಅಂಬಲಪಾಡಿ ದೇಗುಲವನ್ನು ಸಹ ಒಬ್ಬ ವ್ಯಕ್ತಿಯ ಕೈಗೆ ಹಸ್ತಾಂತರಿಸುವ ಮೂಲಕ ಖಾಸಗೀಕರಣಗೊಳಿಸಲು ಸರ್ವಸಿದ್ಧತೆ ನಡೆಸಿದ್ದಾರೆ.

ಉಡುಪಿಯ ರಾಷ್ಟ್ರೀಯ ಹೆದ್ದಾರಿ-17ರ ಪಕ್ಕವೇ ಇದೆ ಅಂಬಲವಾಡಿ ಶ್ರೀ ಜನಾರ್ದನ ಮತ್ತು ಶ್ರೀ ಮಹಾಕಾಳಿ ದೇವಾಲಯ. ವಾಸ್ತವವಾಗಿ ಇದು ಶ್ರೀ ಮಹಾಕಾಳಿ ಮತ್ತು ಶ್ರೀ ಜನಾರ್ದನ ದೇವಾಲಯ ಎಂದಾಗಬೇಕಿತ್ತು.

ಉಡುಪಿಯ ಪ್ರಸಿದ್ಧ ಶ್ರೀಕೃಷ್ಣ ದೇವಾಲಯದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿಯ ಬದಲು ಪರ್ಯಾಯ ಎಂಬ ಕೇವಲ ಅಧಿಕಾರ ಹಸ್ತಾಂತರಿಸುವ ಕಾರ್ಯಕ್ರಮ ನಾಡಹಬ್ಬವಾದಂತೆಯೇ, ಅಂಬಲಪಾಡಿಯ ಶ್ರೀ ಮಹಾಕಾಳಿ ದೇವಾಲಯವು ಶ್ರೀ ಜನಾರ್ದನ ದೇವಾಲಯವಾಗಿದೆ.

ಜೈನ ದೇಗುಲ

ಎಂಟು ಗ್ರಾಮಗಳ ಕೂಟವಾದ ನಿಡಂಬೂರು ಮಾಗಣೆಯನ್ನು ಹಿಂದೆ ಬಂಗ ವಂಶದ ಜೈನರು ನಿಡಂಬೂರು ಬೀಡು ಎಂಬ ಅರಮನೆಯಲ್ಲಿದ್ದುಕೊಂಡು ಆಳುತ್ತಿದ್ದರು. ಈ ಅರಮನೆ ಈಗಲೂ ಇದೆ. ಅಂದು ಕಂದಾವರ ಮೂಲದ ಉಡುಪ ಕುಟುಂಬದವರು ತೀರ್ಥಯಾತ್ರೆ ಹೊರಟವರು ದಾರಿ ನಡುವೆ ಅಮ್ಮನ ಪಾಡಿಯಾದ ಅಂಬಲಪಾಡಿಯ ಮಹಾಕಾಳಿ ಗುಡಿ ಎದುರು ವಿಶ್ರಾಂತಿ ಕುಳಿತಿದ್ದರು.

ತೀರ್ಥಯಾತ್ರೆಗೆ ಹೊರಟಿದ್ದು, ಮಹಾಕಾಳಿ ಗುಡಿಯ ಮುಂಭಾಗ ಜಪ-ತಪದಲ್ಲಿ ನಿರತರಾಗಿದ್ದ ಉಡುಪ ಕುಟುಂಬಸ್ಥರನ್ನು ಕಂಡು ಮಾತನಾಡಿದ ಬಂಗ ವಂಶದ ಕೊನೆಯ ಅರಸ, ಅವರಿಂದ ಸನ್ಯಾಸ ದೀಕ್ಷೆ ಪಡೆದು, ರಾಜ್ಯಾಧಿಕಾರವನ್ನು ತ್ಯಜಿಸಿ, ಊರಭಕ್ತರು ಆರಾಧಿಸುತ್ತಿದ್ದ ಮಹಾಕಾಳಿಯನ್ನು ಉಡುಪ ಕುಟುಂಬಕ್ಕೆ ಹಸ್ತಾಂತರಿಸಿ ನಿರ್ಗಮಿಸಿದ್ದರು. ಕಂದಾವರದಿಂದ ಅಂಬಲಪಾಡಿಗೆ ವಲಸೆ ಬಂದು ಜೈನರ ಬೀಡಾದ ನಿಡಂಬೂರುಬೀಡು ಪ್ರವೇಶಿಸಿದ ಉಡುಪರು ಬಳಿಕ ಬಲ್ಲಾಳರಾದರು.

ಉಡುಪ ಕುಲದ ಹಿರಿಯರಾಗಿದ್ದ ಶ್ರೀಧರ ನಿಡಂಬೂರಾಯ ಎಂಬುವವರು ಗ್ರಾಮ ದೇಗುಲವಾದ ಶ್ರೀ ಮಹಾಕಾಳಿ ಗುಡಿಯ ಪಕ್ಕವೇ ತಮ್ಮ ಮನೆ ದೇವರಾದ ಶ್ರೀ ಜನಾರ್ದನ ದೇವರ ವಿಗ್ರಹವನ್ನು ಪ್ರತಿಷ್ಠಾಪಿಸಿ, ಗುಡಿ ನಿರ್ಮಿಸಿದ್ದರು. ಅಂಬಲಪಾಡಿ ದೇಗುಲ ಜೈನರ ದೇಗುಲವಾಗಿತ್ತು ಎಂಬುದಕ್ಕೆ ದೇಗುಲದಲ್ಲಿನ ಕೆಲವು ಕುರುಹುಗಳೇ ಸಾಕ್ಷಿ. ಕಲ್ಲಿನ ಮೇಲೆ ಕಲ್ಲಿರಿಸಿ, ಒಂದಿಷ್ಟೂ ಸಿಮೆಂಟಾಗಲೀ, ಮರಳನ್ನಾಗಲೀ ಬಳಸದೇ 'ಜೈನರು ದೇಗುಲವನ್ನು ನಿರ್ಮಿಸಿದ್ದಾರೆ.


ನಿಜವಾಗಿ ಇಲ್ಲಿ ಮಹಾಕಾಳಿಯೇ ಪ್ರಧಾನ ದೇವರಾಗಬೇಕಿತ್ತು, ಆದರೆ ಬಲ್ಲಾಳರ ದುರುದ್ದೇಶದಿಂದ ಕೂಡಿದ, ಸ್ವಾರ್ಥ ಹಿತಾಸಕ್ತಿಯಿಂದ ಪ್ರೇರಿತ ದೂರದೃಷ್ಟಿಯಿಂದಾಗಿ ಜನಾರ್ದನ ದೇವರನ್ನು ಪ್ರಧಾನ ದೇವರನ್ನಾಗಿ ಮಾಡಲಾಗಿದೆ. ಗ್ರಾಮ ದೇಗುಲವನ್ನು ಕಡೆಗಣಿಸಿ, ನಿರ್ಲಕ್ಷಿಸಿ, ತೆರೆಮರೆಗೆ ಸರಿಸಿ, ಮನೆದೇವರನ್ನು ಮೆರೆಸಲಾಗಿದೆ.

ಕೃಷ್ಣನಿಗೆ ಪರ್ಯಾಯ!

ದೇವರ ವಿಗ್ರಹಗಳು ಸಾಮಾನ್ಯವಾಗಿ ಪೂರ್ವಾಭಿಮುಖವಾಗಿಯೇ ಇರುತ್ತದೆ. ಉಡುಪಿ ಕೃಷ್ಣ ವಿಗ್ರಹ ಮಾತ್ರ ಈ ಸಂಪ್ರದಾಯಕ್ಕೆ ವಿರುದ್ಧವಾಗಿ ಪಶ್ಚಿಮಾಭಿಮುಖವಾಗಿರುವುದು ಎಲ್ಲರಿಗೂ ತಿಳಿದದ್ದೇ. ಇದು ಪರ್ಯಾಯಕ್ಕೂ ಕಾರಣವಾಗಿರುವ ವಿಷಯ. ವಿಶೇಷವೆಂದರೆ, ಅಂಬಲಪಾಡಿಯಲ್ಲಿರುವ ಆರಡಿ ಎತ್ತರದ ಮಹಾಕಾಳಿ ವಿಗ್ರಹ ಸಹ ಪಶ್ಚಿಮಾಭಿಮುಖವಾಗಿಯೇ ಇರುವುದು.

ನಿಡಂಬೂರು ಬೀಡು ಅಣ್ಣಾಜಿ ಬಲ್ಲಾಳರು ದೇಗುಲದ ಅನುವಂಶಿಕ ಧರ್ಮದರ್ಶಿಯಾಗಿದ್ದ ಕಾಲದವರೆಗೆ ಈ ದೇಗುಲಕ್ಕೆ ಯಾವ ಗ್ರಹಚಾರವೂ ಬಡಿದಿರಲಿಲ್ಲ. ಭಕ್ತರೊಂದಿಗೆ ನಂಬಿ, ವಿನಯ, ಸೌಜನ್ಯದಿಂದ ನಡೆದುಕೊಳ್ಳುತ್ತಿದ್ದ ಅಣ್ಣಾಜಿ ಬಲ್ಲಾಳರು ತಮ್ಮ ಅವಧಿಯಲ್ಲಿ ಅಧಿಕೃತವಾಗಿಯೇ ಈ ದೇಗುಲವು ಒಂದು ಗ್ರಾಮ ದೇಗುಲವೆಂಬ ಸತ್ಯವನ್ನು ಒಪ್ಪಿಕೊಂಡವರು. ಲಕ್ಷಾಂತರ ಭಕ್ತರು ಈ ದೇಗುಲಕ್ಕಿದ್ದಾರೆ ಎನ್ನುವುದನ್ನೂ ಅರಿತುಕೊಂಡವರು. ಇದನ್ನೆಲ್ಲ ಅಣ್ಣಾಜಿಯವರೇ ಸ್ವತಃ ದೇಗುಲದ ವೆಬ್‌ಸೈಟ್‌ನಲ್ಲಿ ಹಾಕಿಕೊಂಡಿದ್ದು. (www.ambalpadytemples.org/ s/message.html).

ಅಣ್ಣಾಜಿ ಬಲ್ಲಾಳರು ನಿಧನರಾದ ನಂತರ ದೇಗುಲದ ಅನುವಂಶಿಕ ಧರ್ಮದರ್ಶಿಯಾದ ನಿ.ಬೀ.ವಿಜಯ ಬಲ್ಲಾಳರು ತಂದೆಗೆ ತಕ್ಕ ಮಗನಾಗಲಿಲ್ಲ. ಹಿಂದಿನ ಅನುವಂಶಿಕ ಧರ್ಮದರ್ಶಿಗಳಾದ ನಿ.ಬೀ. ಅಣ್ಣಾಜಿ ಬಲ್ಲಾಳರು 2006ರ ಅಕ್ಟೋಬರ್ 14ರಂದು ನಿಧನರಾದ


ಅಣ್ಣಾಜಿ ಬಲ್ಲಾಳರು

ಉಡುಪಿ : ಅಂಬಲಪಾಡಿ ಗೋಕರ್ಣ ಭಾಗ-2

ಬೆನ್ನಿಗೆ ಕಾನೂನುಬಾಹಿರವಾಗಿ ಅಣ್ಣಾಜಿಯವರ ಮೂರನೇ ಮಗನಾದ ವಿಜಯ ಬಲ್ಲಾಳ ತಾನೇ ದೇಗುಲದ ಅನುವಂಶಿಕ ಧರ್ಮದರ್ಶಿ ಎಂದು ಘೋಷಿಸಿಕೊಂಡು ಬಿಟ್ಟರು.

ನಿಜವಾಗಿ ಅನುವಂಶಿಕ ಧರ್ಮದರ್ಶಿಯಾಗುವ ಅರ್ಹತೆ ಇದ್ದುದು ಅಣ್ಣಾಜಿಯವರ ಹಿರಿಯ ಮಗನಿಗೆ ಮಾತ್ರ. ಅಣ್ಣಾಜಿಯವರ ಹಿರಿಯ ಮಗ ಚಿಂತಕರೂ, ಲೇಖಕರೂ ಆಗಿದ್ದ ಡಾ. ಮುರಾರಿ ಬಲ್ಲಾಳರು. ಇವರು ಇತ್ತೀಚಿನಲ್ಲೇ ನಿಧನರಾಗಿದ್ದುದರಿಂದ ಎರಡನೇ ಮಗನಾದ ಭರತ್ ಬಲ್ಲಾಳ್ ಅನುವಂಶಿಕ ಧರ್ಮದರ್ಶಿ ಆಗಬೇಕಾಗಿತ್ತು, ಇವರು ಮುಂಬೈ ಐಐಟಿಯಲ್ಲಿ ಪ್ರೊಫೆಸರ್. ಇವರನ್ನೆಲ್ಲ ಕತ್ತಲಲ್ಲಿಟ್ಟು ಸ್ವಯಂ ತಾನೇ ಧರ್ಮದರ್ಶಿ ಎಂದು ಘೋಷಿಸಿಕೊಂಡ ಡಾ. ವಿಜಯ ಬಲ್ಲಾಳ್, ಬಳಿಕ ತನ್ನೆಲ್ಲಾ ಸಹೋದರರನ್ನು ಉದ್ದೇಶಪೂರ್ವಕವಾಗಿಯೇ ದೂರ ಮಾಡಿದ.

ಅಣ್ಣಾಜಿ ಇರುವಾಗ ಎಲ್ಲಾ ಮಕ್ಕಳನ್ನು ಸಮಾನವಾಗಿ ಕಾಣುತ್ತಿದ್ದು, ದೇಗುಲದಲ್ಲೂ ಎಲ್ಲರೂ ಸಮಾನವಾಗಿ ಕಾಣಿಸಿಕೊಂಡು, ತೊಡಗಿಸಿಕೊಳ್ಳುತ್ತಿದ್ದರು. ಆದರೆ ಈಗ ಹಾಗಿಲ್ಲ. ವಿಜಯ ಬಲ್ಲಾಳ್ ದೇಗುಲದ ಯಾವುದೇ ಕಾರ್ಯಕ್ರಮಗಳಿಗೂ ತನ್ನ ಇತರ ಸಹೋದರರನ್ನು ಆಹ್ವಾನಿಸುತ್ತಿಲ್ಲ, ಹಾಗಾಗಿ ಎಲ್ಲರೂ ವಿಜಯ ಬಲ್ಲಾಳರಿಂದ ದೂರವಾಗಿದ್ದಾರೆ. ಕುಟುಂಬಸ್ಥರು ಮಾತ್ರವಲ್ಲ; ವಿಜಯ ಬಲ್ಲಾಳರ ದುರಹಂಕಾರದಿಂದ ನೊಂದು ಬೆಂದ ಗ್ರಾಮಸ್ಥರು ಸಹ ಈಗಾಗಲೇ ದೂರವಾಗಿದ್ದಾರೆ.


ಹಿಂದೂ ಧಾರ್ಮಿಕ ದತ್ತಿ ಆಯುಕ್ತರ, ಸಹಾಯಕ ನಿರ್ದೇಶಕರ, ಜಿಲ್ಲಾಧಿಕಾರಿಗಳ ಕಾನೂನುಬದ್ಧ ಆದೇಶವಿಲ್ಲದೆ ಧರ್ಮದರ್ಶಿಯಾಗಿ ಸ್ವಯಂ ಪಟ್ಟಾಭಿಷೇಕ ಮಾಡಿಸಿಕೊಂಡ ವಿಜಯ ಬಲ್ಲಾಳ, ಅನಂತರದಿಂದ ಇಂದಿನವರೆಗೂ ದೇಗುಲದ ಆಯ-ವ್ಯಯದ ಕುರಿತು ರಾಜ್ಯ ಲೆಕ್ಕ ಪತ್ರ ಇಲಾಖಾಧಿಕಾರಿಗಳಿಂದ ಆಡಿಟ್ ಮಾಡಿಸಿದ್ದೇ ಇಲ್ಲ.

ಚಂಡಿಕಾ ಹೋಮ ಒಂದರಲ್ಲೇ ವಾರ್ಷಿಕ ಸುಮಾರು 20 ಲಕ್ಷ. ರೂ.ಗಳನ್ನು ದೇಗುಲಕ್ಕೆ ಜಮಾ ಮಾಡದೆ ಗುಳುಂ ಮಾಡುವ ವಿಜಯ ಬಲ್ಲಾಳ, ಇತರ ಕಾಮಗಾರಿ, ಸೇವೆ ಮುಂತಾದ ಹೆಸರಲ್ಲಿ ವಾರ್ಷಿಕವಾಗಿ ಕಿಸೆಗೆ ಹಾಕುವ ಹಣ ಅಂದಾಜು 30 ಲಕ್ಷಕ್ಕೂ ಅಧಿಕ.

ದೇಗುಲಕ್ಕೆ ಸೇರಿದ ಎಸ್‌ಎಕ್ಸ್-4 ಮಾರುತಿ ಕಾರನ್ನು ಒಂದೇ ಒಂದು ದಿನವೂ ದೇಗುಲದ ಕೆಲಸಕ್ಕೆ ಉಪಯೋಗಿಸದೆ, ಸ್ವಂತ ಕೆಲಸಕ್ಕೆ ಬಳಸಿಕೊಳ್ಳುವ ಬಲ್ಲಾಳ, ಕಾರಿಗೆ ಪೆಟ್ರೋಲ್, ಸರ್ವೀಸ್ ಮುಂತಾದ ಖರ್ಚುಗಳಿಗೆ ವಿನಿಯೋಗಿಸಿರುವುದೂ ದೇವಳದ ಹಣವನ್ನೇ.

ದೇಗುಲಕ್ಕೆ ಬರುವ ಪ್ರತಿಯೊಬ್ಬ ಭಕ್ತನೂ ಮೊಟ್ಟ ಮೊದಲು ತನಗೆ ಸಾಷ್ಟಾಂಗ ಪ್ರಣಾಮ ಮಾಡಬೇಕೆಂದು ಬಯಸುವ ವಿಜಯ ಬಲ್ಲಾಳ ಹೀಗೆ ಮಾಡಿದವರಿಗೆ ಮತ್ತು ತನ್ನನ್ನು ಮುಖ್ಯ ಅತಿಥಿಯಾಗಿ ಕರೆದವರಿಗೆ ಮಾತ್ರ ದೇಗುಲದ ಹಣವನ್ನು ಕೊಟ್ಟು, ಊಟ ಸರಬರಾಜು ಮಾಡುವ ಮಹಾ ಸ್ವಾರ್ಥ ಪ್ರದರ್ಶಿ ಸುತ್ತಾರೆ.

ಹಿಂದೆ ಏಕಾದಶಿ ಮತ್ತು ಶುಕ್ರವಾರ ಹೊರತುಪಡಿಸಿ ಉಳಿದ ದಿನಗಳಲ್ಲಿ ಚಂಡಿಕಾ ಹೋಮ ನಡೀತಿತ್ತು. ಈಗ ವಾರದಲ್ಲಿ ಎರಡು-ಮೂರು ದಿನ ಮಾತ್ರ ನಡೆಯುತ್ತಿದೆ. ಇದರಿಂದಾಗಿ ಭಕ್ತರಿಗೆ ಸಮಸ್ಯೆಯಾಗುವಂತಾಗಿದೆ. ದರ್ಶನ ವ್ಯವಸ್ಥೆಯೂ ಅವ್ಯವಸ್ಥೆಯಿಂದ ಕುಖ್ಯಾತಿಗಳಿಸಿದೆ. ದೂರದೂರಿನಿಂದ ಬಂದ ದರ್ಶನಾ ಸಕ್ತರು ಆಸೆ ಈಡೇರದೇ ಮರಳುವ ಪರಿಸ್ಥಿತಿ ನಿರ್ಮಾಣವಾಗಿದೆ.


ವಿಜಯ್‌ಬಲ್ಲಾಳ

ವಿಜಯ ಬಲ್ಲಾಳ ವೃತ್ತಿಯಲ್ಲಿ ವೈದ್ಯ. ಈತನನ್ನು ನೋಡಬೇಕಾದರೆ ಭಕ್ತರು ಕ್ಲಿನಿಕ್‌ಗೇ ಹೋಗಬೇಕು! ರೋಗಿಯಾಗಿ! ತಪ್ಪಿದರೆ ಈ ವೈದ್ಯ ಕಂಡುಬರುವುದು ಮುಖ್ಯ ಅತಿಥಿಯಾಗಿ. ಭಾರೀ ಪ್ರಚಾರಪ್ರಿಯರಾದ ಬಲ್ಲಾಳ ದೇಗುಲಕ್ಕೆ ಕಾಲಿಡುವುದೇ ಅಪರೂಪ. ಭಕ್ತರ ಬಗ್ಗೆ ಒಂದಿಷ್ಟೂ ಕಾಳಜಿ ಇಲ್ಲದಿರುವ ಬಲ್ಲಾಳರಿಗೆ ದಿನನಿತ್ಯ ತನ್ನ ಫೋಟೋ ಪತ್ರಿಕೆಗಳಲ್ಲಿ ಪ್ರಿಂಟ್ ಆಗ್ತಾ ಇರಬೇಕು ಅಷ್ಟೇ!

ದೇಗುಲದೊಳಗೆ ಧರ್ಮದರ್ಶಿ ಕುಳಿತುಕೊಳ್ಳುವಲ್ಲಿ ಇರುವುದೊಂದೇ ಕುರ್ಚಿ. ಇದು ವಿಜಯ ಬಲ್ಲಾಳರದ್ದು. ಇಲ್ಲಿ ಇನ್ನೊಬ್ಬ ಕುಳಿತುಕೊಳ್ಳಲು ವ್ಯವಸ್ಥೆಯೇ ಇಲ್ಲ. ಯಾರೇ ಇರಲಿ ತನ್ನೆದುರು 'ನಿಂತೇ ಇರಬೇಕು' ಎನ್ನುವುದು ಈತನ ದುರಹಂಕಾರಕ್ಕೆ ಉದಾಹರಣೆ.

ಶ್ರೀಮಂತ ದೇಗುಲ

ವಾರ್ಷಿಕ ಎರಡು ಕೋಟಿಗೂ ಅಧಿಕ ಆದಾಯ ಇರುವ ಅಂಬಲಪಾಡಿ ದೇಗುಲವಿರುವುದು ಸರ್ಕಾರಿ ಭೂಮಿಯಲ್ಲಿ. ಸರ್ವೆ ನಂ.30/4ರಲ್ಲಿ 24 ಸೆಂಟ್ಸ್ ಭೂಮಿಯಲ್ಲಿ ಕೆರೆ, ಸರ್ವೆ ನಂ. 30/2ರಲ್ಲಿ 1.02.000 ಎಕರೆ ಭೂಮಿಯಲ್ಲಿ ದೇಗುಲವಿದೆ. ಒಟ್ಟು ಮೂರೂವರೆ ಎಕರೆ ಸರ್ಕಾರಿ ಭೂಮಿಯಲ್ಲಿರುವ ದೇವಳದ ಚರ-ಸ್ಥಿರಾಸ್ತಿಯ ಮೌಲ್ಯ 60 ಕೋಟಿಗೂ ಹೆಚ್ಚು. ಪ್ರತೀ ವರ್ಷವೂ ಸರ್ಕಾರದಿಂದ ಎರಡು ಪ್ರತ್ಯೇಕ ಹೆಸರಲ್ಲಿ ತಸ್ತೀಕು ಪಡೆಯುವ ದೇಗುಲದ ಅಧೀನದಲ್ಲಿರುವ ಬಾಲವಾಡಿಗೆ ತನ್ನ ಪತ್ನಿ ತ್ರಿಪುರ ಬಲ್ಲಾಳರನ್ನು ಅನಧಿಕೃತವಾಗಿ ಸಂಚಾಲಕಿಯನ್ನಾಗಿ ನೇಮಕ ಮಾಡಿದ್ದು ವಿಜಯ ಬಲ್ಲಾಳರ ಹೊಸ ವರ್ಷದ ಅಧಿಕ ಪ್ರಸಂಗ.

ಎಂಟು ಮೊಗಣೆಗೆ ಸೇರಿದ ಮಹಾಕಾಳಿ ಹಿಂದೆ ಜನಸಾಮಾನ್ಯರಿಂದ ಪೂಜೆ ಸ್ವೀಕರಿಸಿದಾಕೆ. ಕ್ರಮೇಣ ವೈದಿಕ ವಿಧಿವಿಧಾನಗಳ ಚೌಕಟ್ಟಿಗೆ ಸೇರಿ, ಅಂತಿಮವಾಗಿ ಬ್ರಾಹ್ಮಣ ಅರ್ಚಕರ ಅಧೀನಕ್ಕೆ ಒಳಗಾಗಿದೆ.

ಕಂದಾವರ ಮೂಲದ, ಅಂಬಲಪಾಡಿಗೆ ವಲಸೆ ಬಂದ 'ಉಡುಪ' ಕುಟುಂಬ ಮೂಲತಃ ಭಾಗವತ ಸಂಪ್ರದಾಯಕ್ಕೆ ಸೇರಿದವರು. ಜನಾರ್ದನ ವಿಗ್ರಹವನ್ನು ಪ್ರತಿಷ್ಠಾಪಿಸಿದವರು. ಶ್ರೀಧರ ನಿಡಂಬೂರಾಯರು. ಅಂದಿನ ಉಡುಪರಿಗೂ, ಶ್ರೀಧರ ನಿಡಂಬೂರಾಯರಿಗೂ, ಈಗಿನ ಬಲ್ಲಾಳರಿಗೂ ಯಾವ ಸಂಬಂಧ ಎಂಬ ಪ್ರಶ್ನೆ ಉದ್ಭವಿಸಿದೆ. ವಿಜಯ ಬಲ್ಲಾಳರೇ ಉತ್ತರಿಸಬೇಕು. ವಿಜಯ ಬಲ್ಲಾಳ ಈ ದೇಗುಲದ ಅನುವಂಶಿಕ ಧರ್ಮದರ್ಶಿ ಹೇಗಾಗುತ್ತಾರೆ ಎಂಬ ಭಕ್ತರ ಪ್ರಶ್ನೆಗೆ ಧಾರ್ಮಿಕ ದತ್ತಿ ಇಲಾಖೆಯ ಅಧಿಕಾರಿಗಳು ಉತ್ತರಿಸಬಲ್ಲರೇ?

ಮದ್ರಾಸು ಹಿಂದೂ ಧಾರ್ಮಿಕ ದತ್ತಿ ಉಂಬಳಿ ಕಾನೂನು ವಿಧಿ 57 (ಬ) ಅನ್ವಯ ಬಲ್ಲಾಳರನ್ನು ಅನುವಂಶಿಕ ಮೊಕ್ತೇಸರರೆಂದು ಘೋಷಿಸಿರುವ ಬಗ್ಗೆ ದಾಖಲೆ ಇಲ್ಲವೆಂದು ದತ್ತಿ ಇಲಾಖೆಯ ಸಹಾಯಕ ಆಯುಕ್ತರು 21-08-2007ರ ಪತ್ರದಲ್ಲಿ (ಕ್ರ.ಎಡಿಎಂ: ಸಿಆರ್41: 07-08) ಹೇಳಿದ್ದಾರೆ.

ದೇವರ ಖರೀದಿ ಯತ್ನ

ಇಂತಹ ಕೋಟ್ಯಾಧಿಪತಿ ದೇವತೆಯನ್ನು ಖರೀದಿ ಮಾಡುವ ಯತ್ನದಲ್ಲಿ ಸರ್ವನಾಶವಾಗಲು ಹೊರಟಿದ್ದಾರೆ ವಿಜಯ ಬಲ್ಲಾಳ.

ಕಳೆದ ಪಾರ್ಲಿಮೆಂಟ್ ಚುನಾವಣೆ ಸಂದರ್ಭದಲ್ಲಿ ಬಲ್ಲಾಳ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಎಂಎಲ್‌ಎ ರಘುಪತಿ ಭಟ್ ಸಾಥ್ ನೀಡಿದ್ದಾನೆ. ಅಂಬಲಪಾಡಿ ದೇಗುಲವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ವಿನಾಯಿತಿಗೊಳಿಸುವಂತೆ ಸಲ್ಲಿಸಿದ ಪ್ರಸ್ತಾವನೆಗೆ ಕಂದಾಯ ಇಲಾಖೆಯ (ಮುಜರಾಯಿ) ಪೀಠಾಧಿಕಾರಿ ಶ್ರೀಕಂಠಬಾಬು ಸಮರ್ಥ ಕಾರಣಗಳನ್ನು ನೀಡಿ ತಿರಸ್ಕರಿಸಿ ದಿಟ್ಟತನ ಪ್ರದರ್ಶಿಸಿದ್ದಾರೆ (ಸಂಖ್ಯೆ:ಕಂಇ07 ಮುಆಬ 2008).

ಹಾಲಿ ಮುಜರಾಯಿ ಸಚಿವ ಡಾ.ವಿ.ಎಸ್.ಆಚಾರ್ಯ ಹಾಗೂ ಶಾಸಕ ರಘುಪತಿ ಭಟ್‌ರವರ ನಿರಂತರ ಒತ್ತಡಗಳ ಜೊತೆಗೆ ವಿಜಯ ಬಲ್ಲಾಳ ಸುಮಾರು 25ರಿಂದ 50 ಲಕ್ಷ ರೂ. ದಂಬರ್ಳಕ ವರಾಡಿ ಈಗ ದೇಗುಲವನ್ನು ಕೈ ವಶ ಮಾಡಿಕೊಳ್ಳಲು ಸರ್ವಸನ್ನದರಾಗಿದ್ದಾರೆ. ಒಂದಿಬ್ಬರು ಪ್ರಾಮಾಣಿಕ, ನಿಷ್ಠೆಯುಳ್ಳ ಅಧಿಕಾರಿಗಳು ವಿಧಾನಸೌಧ ದಲ್ಲಿರುವುದರಿಂದ ಪ್ರಸ್ತಾವನೆಗೆ ಇನ್ನೂ ಅಂತಿಮ ಸಹಿ ಬಿದ್ದಿಲ್ಲ.

ಈ ನಡುವೆ ದೇಗುಲಕ್ಕೆ ಐಎಎಸ್ ಮಟ್ಟದ ಆಡಳಿತಾಧಿಕಾರಿಯನ್ನು ನೇಮಿಸಿಕೊಳ್ಳಬೇಕೆಂಬ ಒತ್ತಾಯವೂ ಕೇಳಿ ಬರತೊಡಗಿದೆ. ಮಾತ್ರವಲ್ಲ ಹಲವು ಮಂದಿ ಪ್ರಮುಖ ಮತ್ತು ಪ್ರಜ್ಞಾವಂತ ಭಕ್ತರು ಖಾಸಗೀಕರಣದ ವಿರುದ್ಧ, ಬಲ್ಲಾಳರ ಸರ್ವಾಧಿಕಾರಿ ನಡೆಯ ವಿರುದ್ಧ ಬಂಡಾಯ ಎದ್ದು ಬಿಟ್ಟಿದ್ದಾರೆ. ಈ ಬಂಡಾಯವನ್ನು ಎದುರಿಸಿ ನಿಲ್ಲಲು ಬಲ್ಲಾಳರಿಗೆ ಶಕ್ತಿ ಇಲ್ಲದ ಸ್ಥಿತಿ ನಿರ್ಮಾಣಗೊಂಡಿದೆ.

ವಿಜಯನ ಹಿನ್ನೆಲೆ

ಅದಮಾರು ಮಠದ ಹಿಂದಿನ ಸ್ವಾಮೀಜಿ ವಿಭುದೇಶ ತೀರ್ಥರ ಖಾಸಾ ಅಳಿಯ ಈ ವಿಜಯ. ಈತನನ್ನು ತನ್ನ ಮಠದ ಪೂರ್ಣಪ್ರಜ್ಞಾ ಕಾಲೇಜಿಗೆ ಕಾರ್ಯದರ್ಶಿಯನ್ನಾಗಿ ಮಾಡಿದ್ದರು ಮಾವ. ಆದರೆ ಅಂದು ಕಾಲೇಜಿನ ಸಿಬ್ಬಂದಿಗಳು, ಪ್ರಾಧ್ಯಾಪಕರು, ಈತನ ಹಿಂಸೆ ತಾಳಲಾರದೆ ಸ್ವಾಮೀಜಿಗೆ ದೂರು ಕೊಟ್ಟಿದ್ದರು. ಒಂದೋ ನಾವಿರಬೇಕು, ಇಲ್ಲ ಅವನಿರಬೇಕು, ಎರಡರಲ್ಲಿ ಒಂದು ಈಗಲೇ ಆಗಬೇಕು ಎಂದಿದ್ದರು. ಕೊನೆಗೆ ವಿಭುದೇಶರು (ಮಾವ) ಅಳಿಯ ವಿಜಯ್ ಬಲ್ಲಾಳರಿಂದ ರಾಜೀನಾಮೆ ಪಡೆದಿದ್ದರು.

ಇಂತಹ ವಿಜಯ ಬಲ್ಲಾಳ ಈಗ ಶ್ರೀಮಂತ ದೇಗುಲವನ್ನು, ದೇವತೆಯನ್ನು ಖರೀದಿ ಮಾಡಹೊರಟಿದ್ದರಲ್ಲಿ ಆಶ್ಚರ್ಯವಂತೂ ಇಲ್ಲ.

ಮಂಗನ ಕೈಲಿ ಮಾಣಿಕ್ಯ ಕೊಟ್ಟರೆ ಮತ್ತೇನು ತಾನೇ ಆಗಲು ಸಾಧ್ಯ?

● ವರದಿಗಾರ


ಡೆಡ್ಲಿ ಸೋಮನ ಬಂಟ ರಾಜಶೇಖರ್ ಫಿನಿಷ್!





ಸೋಮ


ರಾಜಶೇಖರ್ ಬೆಂಗಳೂರು ಪಾಪಕೂಪಕ್ಕೆ ಹಳಬ. ಡೆಡ್ಲಿ ಸೋಮನ ಪರಮಾಪ್ತರ ಪೈಕಿ ಬದುಕುಳಿದ ಒಬ್ಬನೇ ಒಬ್ಬ. ಸೋಮ ಮತ್ತು ಬಸವ ಇಬ್ಬರನ್ನೂ 1995 ರ ಜುಲೈ 7 ರಂದು ಇನ್ಸ್‌ಪೆಕ್ಟರ್ ಅಬ್ದುಲ್ ಅಜೀಮ್ ಮತ್ತು ಟೈಗರ್ ಅಶೋಕಕುಮಾರ್ ತಂಡ ಅಲಸೂರಿನ ಸ್ಮಶಾನದಲ್ಲಿ ಎನ್‌ಕೌಂಟರ್ ಮಾಡಿ ಮುಗಿಸಿತ್ತು. ಆನಂತರ ಸೋಮನ ಗ್ಯಾಂಗಿನಲ್ಲಿ ಸಕ್ರಿಯರಾಗಿದ್ದ ಬಹುತೇಕರೆಲ್ಲ ತಂತಮ್ಮ ಹಾದಿಹಿಡಿದು ತೆರೆಮರೆಗೆ ಸರಿದರಾದರೂ ಸೋಮನ ಉತ್ತರಾಧಿಕಾರಿ ಅಂತ ಉಳಿದವನು ರಾಜಶೇಖರ ಮಾತ್ರ.



ರಾಜಶೇಖರ

'ಹೊಡೀ ಬ್ಯಾಡೋ ಶಂಕ್ರಾ... ಪ್ಲೀಸ, ನನ ಮಾತು ಕೇಳು; ಶಂಕ್ರಾ.....!' ಎಂದು ಅರಚಾಡುತ್ತಲೇ ಇದ್ದ ರಾಜಶೇಖರನಿಗೆ ಸಾವು ತನ್ನ ಬೇಟೆಗೇ ಬಂದಿದೆಯೆಂಬುದು ಗೊತ್ತಾಗುವ ಹೊತ್ತಿಗೆ ಕಾಲ ಮಿಂಚಿತ್ತು.

ಏಟಿನ ಮೇಲೆ ಮಚ್ಚಿನೇಟು ಬೀಳುತ್ತಲೇ ಇತ್ತು. ತಲೆಗೊಂದು, ಬೆನ್ನಿಗೆ ಮತ್ತೊಂದು, ಹೊಟ್ಟೆಗೊಂದು- ಹೀಗೆ ಒಂದರಮೇಲೊಂದಾಗಿ ಬೀಳುತ್ತಿದ್ದ ಲಾಂಗ್‌ನ ಪೆಟ್ಟುಗಳಿಂದ ಬಚಾವಾಗಲು ಪಕ್ಕದ ಮನೆಯತ್ತ ಓಡಿದ. ಇನ್ನೇನು ಗೇಟು ತೆಗೆದು ಒಳನುಗ್ಗಬೇಕೆನ್ನುವಷ್ಟರಲ್ಲೇ ತಲೆಗೆ ಬಲವಾದ ಮಗದೊಂದು ಪೆಟ್ಟು ಬಿತ್ತು. ಕುಸಿದು ನೆಲಕ್ಕೆ ಬಿದ್ದು ಒದ್ದಾಡುತ್ತಿದ್ದ. ಆರೆಂಟು ಮಂದಿಯಿದ್ದ



ರಾಜಶೇಖರನ ಮನೆ...


ಹಂತಕ ಪಡೆ ಮನಸೋಇಚ್ಛೆ ಲಾಂಗ್ ಬೀಸಿ ಕ್ಷಣಾರ್ಧದಲ್ಲೇ ನಾಪತ್ತೆಯಾಗಿತ್ತು.

ಕರುಳು ಹೊರಬಂದಿತ್ತು. ತಲೆಯಿಂದ ರಕ್ತ ಸೋರುತ್ತಲೇ ಇತ್ತು. ಕಿಮ್ಸ್ ಆಸ್ಪತ್ರೆಯ ವೈದ್ಯರು ಆತನನ್ನು ಬದುಕಿಸಲು ಏನೆಲ್ಲಾ ಹರಸಾಹಸಗೈದರೂ ಪ್ರಯೋಜನವಾಗಲೇ ಇಲ್ಲ. ರಾತ್ರಿ ಎರಡರ ಹೊತ್ತಿಗೆ ನಿಮಾನ್ಸ್‌ಗೆ ಆತನನ್ನು ತರುವ ಹೊತ್ತಿಗಾಗಲೇ ರಾಜಶೇಖರ ಹೆಣವಾಗಿದ್ದ. ಅಲ್ಲಿಗೆ ಪಾತಕ ಪ್ರಪಂಚದ ರಕ್ತಸಿಕ್ತ ಪಟ್ಟಿಯಲ್ಲಿದ್ದ ಹೆಸರೊಂದು ಅಳಿಸಿಹೋಗಿತ್ತು. ಪತ್ನಿ ಜಯಶ್ರೀ ಹಣೆ ಚಚ್ಚಿಕೊಂಡು ಅಳುತ್ತಲೇ ಇದ್ದಳು. ಆಕೆಯ ಪುಟ್ಟಪುಟ್ಟ ಹೆಣ್ಣುಮಕ್ಕಳಿಬ್ಬರಿಗೂ ತಮ್ಮ ತಂದೆಯನ್ನು ಅಂಡರ್‌ವರ್ಲ್ಡ್ ತಿಂದು ಹಾಕಿತೆಂಬುದನ್ನು ವಿವರಿಸಿ ಹೇಳುವವರ್‍ಯಾರು? ಅದು ಹೇಳಿದ ಮಾತ್ರಕ್ಕೇ ಅರ್ಥವಾಗುವ ಗಣಿತವಾ?

ರಾಜಶೇಖರ್ ಬೆಂಗಳೂರು ಪಾಪಕೂಪಕ್ಕೆ ಹಳಬ. ಡೆಡ್ಲಿ ಸೋಮನ ಪರಮಾಪ್ತರ ಪೈಕಿ ಬದುಕುಳಿದ ಒಬ್ಬನೇ ಒಬ್ಬ. ಸೋಮ ಮತ್ತು ಬಸವ ಇಬ್ಬರನ್ನೂ 1995 ರ ಜುಲೈ 7 ರಂದು ಇನ್ಸ್‌ಪೆಕ್ಟರ್ ಅಬ್ದುಲ್ ಅಜೀಮ್ ಮತ್ತು ಟೈಗರ್ ಅಶೋಕಕುಮಾರ್ ತಂಡ ಅಲಸೂರಿನ ಸ್ಮಶಾನದಲ್ಲಿ ಎನ್‌ಕೌಂಟರ್ ಮಾಡಿ ಮುಗಿಸಿತ್ತು. ಅದಕ್ಕೂ ಮುನ್ನ ಬಿದ್ದನನ್ನು ದುಷ್ಮನ್ ಗ್ಯಾಂಗ್ ಕೊಂದು ಹಾಕಿತ್ತು. ಸೋಮನ ಕಾಲಾನಂತರ ಆತನ ಶಿಷ್ಯ ಕವಳ ಮಡಿವಾಳದಲ್ಲಿ ಫೀಲ್ಡಿಗಿಳಿದರೆ, ಚಂದು ಮೈಸೂರಿಗೆ ಹೋಗಿ ಸ್ಥಿರಗೊಂಡ. ವಿಲ್ಸನ್ ಗಾರ್ಡನ್ನಿನ ಗಿರೀಶ, ತಕಾಳಿ ಬಾಬು, ಗೂಚ್, ತಿರುವತ್ತೂರು ಶಂಕ್ರ ಹೀಗೆ ಸೋಮನ ಗ್ಯಾಂಗಿನಲ್ಲಿ ಸಕ್ರಿಯರಾಗಿದ್ದ ಬಹುತೇಕರೆಲ್ಲ ತಂತಮ್ಮ ಹಾದಿಹಿಡಿದು ತೆರೆಮರೆಗೆ ಸರಿದರಾದರೂ ಸೋಮನ ಉತ್ತರಾಧಿಕಾರಿ ಅಂತ ಉಳಿದವನು ರಾಜಶೇಖರ ಮಾತ್ರ.

ಸೋಮನ ನಂತರ ಆತನ ಪತ್ನಿ ಜಯಶ್ರೀಯನ್ನು ತಾನೇ ಮದುವೆಯಾದ ರಾಜಶೇಖರನನ್ನು ಸರಿದಾರಿಗೆ ತರಲೆಂದು ಇನ್ನಿಲ್ಲದಂತೆ ಹೆಣಗಿದ್ದು ಪೊಲೀಸ್ ಅಧಿಕಾರಿ ಟೈಗರ್ ಅಶೋಕ್‌ಕುಮಾರ್. ಸೋಮನ ಎನ್‌ಕೌಂಟರ್ ಹೊತ್ತಿಗೆ ಅಶೋಕ್‌ಕುಮಾರ್ ಜಗಜೀವನರಾಂ ನಗರ ಪೊಲೀಸ್ ಠಾಣೆಗೆ ಇನ್ಸ್‌ಪೆಕ್ಟರ್ ಆಗಿದ್ದರು. ಹೆಚ್ಚೂಕಮ್ಮಿ ಒಂದು ವರ್ಷದ ಕಾಲ ಜೇಜೆನಗರ ಪೊಲೀಸ್ ಠಾಣೆಯಲ್ಲಿ ಬಂದುಹೋಗುವವರಿಗೆ ಕಾಫಿ ಟೀ ಕೊಟ್ಟುಕೊಂಡಿದ್ದ ರಾಜಶೇಖರನನ್ನು ಅಶೋಕ್‌ಕುಮಾರ್ ನರಹಂತಕ ವೀರಪ್ಪನ್ ಶಿಕಾರಿಗೂ ಕರೆದೊಯ್ದಿದ್ದರು.

ಕಾಡಿಗೆ ಹೋದ ಹಾಗೇ ವಾಪಸ್ಸಾದ ಅಶೋಕ್‌ಕುಮಾರ್ ಜೊತೆ ರಾಜಶೇಖರನೂ ವಾಪಸ್ಸು ಬಂದ. ಕೆಲದಿನಗಳ ಕಾಲ ಪೊಲೀಸ್ ಇನ್‌ಫಾರ್ಮೆಂಟ್



ಕೊಲೆ ನಡೆದ ಸ್ಥಳ....

ಜಯಶ್ರೀ ಎಂಬ ಹೆಣ್ಣು ಮಗಳಿಗೆ ಇದೆಂತಹ ಶಿಕ್ಷೆ

ಪ್ರೀತಿಸಿ ಕೈಹಿಡಿದ ಡೆಡ್ಲಿ ಸೋಮ ಪೊಲೀಸರ ಎನ್‌ಕೌಂಟರ್‌ಗೆ ಬಲಿಯಾದ. ಅಲ್ಲಿಗೆ ಬದುಕೇ ಅಂತ್ಯ ವಾಯ್ತೆಂದರೆ ಸೋಮನ ಬಂಟ ರಾಜಶೇಖರ ಕೈಹಿಡಿದಿದ್ದ. ಈಗ ಆತನೂ ಕೊಲೆಯಾಗಿ ಹೋಗಿದ್ದಾನೆ. ಸುಮ್ಮನೇ ಹೋಗಿಲ್ಲ, ಇಬ್ಬರು ಹೆಣ್ಣುಮಕ್ಕಳನ್ನು ಕೈಗಿತ್ತು ಹೋಗಿದ್ದಾನೆ.

ಇದು ಜಯಶ್ರೀ ಎಂಬ ಹೆಣ್ಣುಮಗಳ ದುರಂತಗಾಥೆಯ ಆದಿಯಾ ಅಂತ್ಯವಾ ನಿರ್ಧರಿಸುವವರ್‍ಯಾರು?

ಜಯಶ್ರೀಯದು ಕಲ್ಲರಳಿ ಹೂವಾದರೂ ಬಿಸಿಲೇ ಬೆಂಕಿಯಾದ ಕತೆ. ಹೂವೀಗ ಸುಟ್ಟು ಇದ್ದಿಲಾಗಿದೆ. ಡೆಡ್ಲಿ



ಸೋಮನನ್ನು ಆಕೆ ಬಯಸಿ ಪ್ರೀತಿಸಿರಲಿಲ್ಲ. ಸೋಮನೇ ಆಕೆಯ ಬೆನ್ನಿಗೆ ಬಿದ್ದಿದ್ದ. ವಿಧಿಯಿಲ್ಲದೇ ಆತನಿಗೆ ಒಲಿದ ಜಯಶ್ರೀ ಮದುವೆಯಾಗಿದ್ದೇ ಕೊನೆ; ಪೊಲೀಸರ ಕಿರುಕುಳ, ಸೋಮನ ಜೈಲುವಾಸ, ಪದೇಪದೇ ಭೂಗತವಾಸದಲ್ಲೇ ಶುರುವಾದ ಬದುಕು ಸೋಮನ ಸಾವಿನಲ್ಲೇ ಕೊನೆಯಾಗಿ ಹೋಗಿತ್ತು.

ಅದು ಜಯಶ್ರೀಯ ಬದುಕಿನ ಅತ್ಯಂತ ಕರಾಳ ಘಳಿಗೆ. ಆ ಹೊತ್ತಿಗೆ ಸೋಮ ಸತ್ತು ಆರು ತಿಂಗಳಾಗಿತ್ತು. ಅದೊಂದು ದಿನ ನೇರವಾಗಿ ಜಗಜೀವನರಾಮ್ ನಗರ ಪೊಲೀಸ್ ಠಾಣೆಗೆ ಬಂದ ಜಯಶ್ರೀ ಇನ್ಸ್‌ಪೆಕ್ಟರ್ ಅಶೋಕ್ ಕುಮಾರ್ ಎದುರು ಕೂತು 'ಏನ್ ಸಾರ್, ನನ್ನನ್ನು ವಿಧವೆ ಮಾಡಿಬಿಟ್ರಲ್ಲಾ....?' ಎಂದು ಕಣ್ಣೀರಿಟ್ಟಿದ್ದಳು. ಅಶೋಕ್‌ಕುಮಾರ್‌ಗೆ ಅದೇನೆನ್ನಿಸಿತೋ ಕೊಂಚ ಹೊತ್ತು ಆಕಾಶ ದಿಟ್ಟಿಸಿದ್ದೇ 'ಆಯ್ತಮ್ಮ ಮುಂದಿನವಾರ ಬಂದು ನನ್ನನ್ನು ಕಾಣು' ಎಂದರು.

ಆ ಹೊತ್ತಿಗಾಗಲೇ ರಾಜಶೇಖರ ಜೆಜೆನಗರ ಪೊಲೀಸ್ ಠಾಣೆಯ ಲಾಕಪ್ಪು ಸೇರಿ ಎಂಟು ತಿಂಗಳಾಗಿತ್ತು. ಆತನನ್ನು ಕರೆದು 'ನೋಡಯ್ಯಾ ಯಾವತ್ತಿದ್ದರೂ ನೀನು ಮದುವೆಯಾಗಲೇಬೇಕು. ಸೋಮನ ಬಗ್ಗೆ ನಿನಗೆ ನಿಜಕ್ಕೂ ಪ್ರೀತಿಯಿದ್ದರೆ ಏಕೆ ಜಯಶ್ರೀಗೆ ಬದುಕು ಕೊಡಬಾರದು?' ಎಂದರು ಇನ್ಸ್‌ಪೆಕ್ಟರ್ ಅಶೋಕ್‌ಕುಮಾರ್. ಮೊದಮೊದಲು ಪಾಪವೆಂಬಂತೆ ಬಗೆದ ರಾಜಶೇಖರ ಈ ರೀತಿ ಪದೇಪದೇ ಒತ್ತಾಯಿಸಿದಾಗ ಕೊನೆಗೊಮ್ಮೆ ಅರೆಮನಸ್ಸಿನಿಂದಲೇ ಹೇಳಿಬಿಟ್ಟ: 'ನೋಡಿ ಸಾರ್, ಆಕೆಗೆ ಇಷ್ಟ ಅನ್ನೋದಾದ್ರೆ ನನ್ನದೇನೂ ಅಭ್ಯಂತರವಿಲ್ಲ!'


ಇದಾಗಿ ಎಷ್ಟೋ ದಿನಗಳಾದ ಮೇಲೆ ಅಶೋಕ್ ಕುಮಾರ್ ಇದನ್ನೇ ಜಯಶ್ರೀಗೆ ಕೇಳಿದ್ದಾರೆ. ಜಯಶ್ರೀಯ ಬಾಯಿಂದ ಬಂದದ್ದೂ ಅದೇ ಮಾತಾಗಿತ್ತು. 'ಮೊದಲು ಆತ ಒಪ್ಕೊಳ್ತಾನಾ ಕೇಳಿ ಸಾರ್....!'

ಅಲ್ಲಿಗೆ ರಾಜಶೇಖರನ-ಜಯಶ್ರೀಯರ ಬದುಕಿನ ದಿಕ್ಕೇ ಬದಲಾಗಿತ್ತು. ಸ್ವತಃ ಅಶೋಕ್‌ಕುಮಾರ್ ನಿಂತು ಮದುವೆ ಮಾಡಿದ್ದರು. ಮನೆಗೆ ಬಂದು ಯೋಗಕ್ಷೇಮ ವಿಚಾರಿಸುತ್ತಿದ್ದರು. ಅವರೇ ಸ್ಕಿಲ್‌ಗೇಮ್ ಅಂಗಡಿ ನಡೆಸಲು ನೆರವಾದರು. ಜಯಶ್ರೀ ತನ್ನ ಬದುಕಲ್ಲಿ ನೆಮ್ಮದಿ ಕಾಣುವಂತಾಗಿದ್ದೇ ಈ ಅವಧಿಯಲ್ಲಿ, ಇಬ್ಬರು ಹೆಣ್ಣುಮಕ್ಕಳಾದವು. ಬೆಚ್ಚನೆಯ ಮನೆ, ಓಡಾಡಲು ಕಾರು, ಮುದ್ದಿನ ಮಕ್ಕಳು, ಒಪ್ಪುವ ಪತಿ ಎಲ್ಲವನ್ನೂ ಒಂದೇ ಹೊಡೆತಕ್ಕೆ ವಿಧಿ ಮಣ್ಣುಗೂಡಿಸಿಬಿಟ್ಟಿತ್ತು.

ಯಾವ ತಪ್ಪಿಗೆಂದು ಜಯಶ್ರೀಗೆ ಈ ಶಿಕ್ಷೆ?



ಮೀಟರ್ ಮಹೇಶನ ಮರೆಯಲ್ಲಿ ಕವಳ?



ಇವತ್ತು ರಾಜಶೇಖರನ ಹತ್ಯೆಯಲ್ಲಿ ಕೇಳಿಬರುತ್ತಿರುವ ಮೊದಲ ಹೆಸರೇ ಮೀಟರ್ ಮಹೇಶ!

ಆತ ಡೆಡ್ಲಿ ಸೋಮ ಮತ್ತು ರಾಜಶೇಖರನ ತಂಡದಿಂದ ಕೊಲೆಯಾದ ಕಾಟನ್‌ಪೇಟೆಯ ವಸಂತ ಎಂಬಾತನ ಖಾಸಾ ತಮ್ಮ. ಅದು 1992 ರ ಆಗಸ್ಟ್ 15 ರ ಸ್ವಾತಂತ್ರ್ಯ ದಿನಾಚರಣೆಯ ದಿನ. ಸೋಮ ಮತ್ತು ರಾಜಶೇಖರ ಸೇರಿಕೊಂಡು ಕಾಟನ್‌ಪೇಟೆಯ ನಡುರಸ್ತೆಯಲ್ಲೇ ವಸಂತನನ್ನು ಕತ್ತರಿಸಿ ಹಾಕಿದ್ದರು. ಈ ವಸಂತನಷ್ಟೇ ಅಲ್ಲದೇ ಪರಪ್ಪನ ಗ್ಯಾಂಗಿನ ಫೇಟೆ ನಾಗ, ಕುಳ್ಳ ನಾರಾಯಣ ಕೂಡ ಸೋಮ-ಬಸವರ ಗ್ಯಾಂಗಿಗೆ ಬಲಿಯಾದರು. ಪುಷ್ಪನ ತಮ್ಮ ಸುಬ್ರಹ್ಮಣಿಯನ್ನು ಆತನ ಮನೆಯೆದುರೇ ಹಿಡಿದು ಸೋಮನ ಗ್ಯಾಂಗ್ ಕತ್ತರಿಸಿತ್ತು. ಆದರೆ ಸುಬ್ರಹ್ಮಣಿ ಬದುಕುಳಿದಿದ್ದ.

ಇದು ಡೆಡ್ಲಿ ಸೋಮನ ಆರ್ಭಟವಿದ್ದಾಗಿನ ರಕ್ತಗಾಥೆ. ಇದೆಲ್ಲ ನಡೆದು ಹದಿನೆಂಟು ವರ್ಷಗಳೇ ಕಳೆದುಹೋದವಾದರೂ ಕೊಲೆಯಾದ ವಸಂತನ ಹತ್ಯೆಯ ಬಾಕಿಯಂತೆ ಉಳಿದವನು ಆತನ ತಮ್ಮ ಮೀಟರ್ ಮಹೇಶ. ಇಲ್ಲಿಗೆ ವರ್ಷದ ಹಿಂದಷ್ಟೇ ಇಟ್ಟಮಡುವಿನ ವೆಂಕಿ ಎಂಬ ಸೈಕಲ್ ರವಿಯ ಶಿಷ್ಯನನ್ನು ಕೊಂದು ಜೈಲು ಪಾಲಾದ ಮೀಟರ್ ಮಹೇಶ ಈ ಹೊತ್ತಿಗಾಗಲೇ ಕತ್ತಿಗುಪ್ಪೆ ಲಿಂಗನ ಗ್ಯಾಂಗಿನಲ್ಲಿದ್ದ. ಜೈಲಿಗೆ ಬಂದವನೇ ಮಚ್ಚನ ಶಿಷ್ಯ ಪೆದ್ದಗುಂಡನನ್ನು ಅಟ್ಟಾಡಿಸಿ ಹೊಡೆದ. ಆವತ್ತು ಸೈಲೆಂಟ್ ಸುನೀಲನೂ ಮಹೇಶನಿಗೆ ಸಾತು ಕೊಟ್ಟಿದ್ದ.

ಹೇಗೂ ಮಹೇಶನಿಗೆ ರಾಜಶೇಖರನ ಮೇಲೊಂದು ಕಣ್ಣು ಇದ್ದೇ ಇತ್ತು. ಇದೇ ಹೊತ್ತಿಗೆ ತಿಲಕ್‌ನಗರದ ವಿನಯ್ ಆಳ್ವ ಭಕ್ಷಿ ಗಾರ್ಡನ್ನಿನ ಕುಟ್ಟಿ-ರಾಜರಿಗೆ ಪರಮಾಪ್ತನಾಗಿದ್ದಂತೆ ರಾಜಶೇಖರನಿಗೂ ಶಿಷ್ಯನಾಗಿದ್ದ. ವಿನಯ್ ಕೊಲೆಗೆ ಸಂಬಂಧಪಟ್ಟಂತೆ ರಾಜಶೇಖರನಿಗೂ ಕವಳನಿಗೂ ಮೈಮನಸ್ಯ ಹೆಡೆಯೆತ್ತಿದೆ.

ಜೈಲಿನಲ್ಲಿರುವಾಗಲೇ ಮಹೇಶ ಕವಳನಿಗೆ ಪರಿಚಿತನಾಗಿದ್ದ. ಇತ್ತೀಚೆಗೆ ಯಾವುದೋ ಲ್ಯಾಂಡ್ ಡೀಲಿನಲ್ಲಿ ರಾಜಶೇಖರನಿಗೆ ದುಡ್ಡು ಬಂದಿದ್ದು ಗೊತ್ತಾಗಿದ್ದೇ ಮಹೇಶ ರಾಜಶೇಖರನಿಗೆ ಫೋನ್ ಮಾಡಿ ಎರಡು ಕೋಟಿಗೆ ಡಿಮ್ಯಾಂಡ್ ಇಟ್ಟ. ಅದಕ್ಕೆ ರಾಜಶೇಖರ ಜಗ್ಗಿಲ್ಲ. ಅಲ್ಲಿಗೆ ರಾಜಶೇಖರನಿಗೊಂದು ಮುಹೂರ್ತ ಗೊತ್ತು ಮಾಡಿದ ಮಹೇಶ ಇತ್ತ ಕವಳನ ಶಿಷ್ಯ ವಾಲೀ ಶಂಕ್ರನನ್ನೂ ಅತ್ತ ರಾಜಶೇಖರನಿಂದ ಸಾಲ ಪಡೆದಿದ್ದ ಉಮಾಶಂಕ್ರನನ್ನೂ ಒಟ್ಟೊಟ್ಟಿಗೆ ಫಿಕ್ಸಿಂಗ್ ಮಾಡಿಕೊಂಡಿದ್ದಾನೆ.

ಅಣ್ಣನ ಹತ್ಯೆಯ ಸೇಡೂ ತೀರಿದಂತಾಯ್ತು. ಅದಕ್ಕೆ ಪ್ರತಿಯಾಗಿ ಸಾಲ ಪಡೆದಿದ್ದ ಉಮಾಶಂಕ್ರನಿಂದ ದುಡ್ಡೂ ಬಂದಂತಾಯ್ತು, ಮತ್ತೊಂದೆಡೆ ಕವಳನ ಹಿತಾಸಕ್ತಿಯನ್ನೂ ರಕ್ಷಿಸಿದಂತಾಯ್ತು. ಒಂದೇ ಕಲ್ಲಿನಿಂದ ಮೂರು ಹಕ್ಕಿ ಹೊಡೆಯುವ ಮೀಟರ್ ಮಹೇಶ ತನ್ನ ಅಣ್ಣನನ್ನು ಹೇಗೆ ಸ್ವಾತಂತ್ರ್ಯ ದಿನಾಚರಣೆಯಂದು ಸೋಮನ ಗ್ಯಾಂಗ್ ಮುಗಿಸಿತ್ತೋ ಹಾಗೇ ರಾಜಶೇಖರನನ್ನು ಮುಗಿಸಲು ಗಣರಾಜ್ಯೋತ್ಸವವನ್ನೇ ನಿಗದಿಪಡಿಸಿದ್ದ.

ತಾರಾ ದೊಂಬರಾಟ



ನಟ ತಾರಾ ಅರ್ಜೆಂಟಾಗಿ ಎಮ್ಮೆಲ್ಸಿಯಾಗಲೇ ಬೇಕಂತೆ!

ಅದಕ್ಕಾಗಿ ಬಿಜೆಪಿಯ ಯಾವ ನಾಯಕನ ಕಾಲಿಗೆ ಬೀಳಲಿಕ್ಕೂ ರೆಡಿಯಂತೆ!

ಬಿಜೆಪಿಯ ದೊಣ್ಣೆನಾಯಕ ವೆಂಕಯ್ಯ ನಾಯ್ಡುಗೆ ಒಂದು ಸುತ್ತಿನ ಮಸ್ಕಾ, ಮಹಾರಥಿ ಅನಂತ್‌ಕುಮಾರ್ ಪಾದಾರವಿಂದಕ್ಕೆ ಎರಡು ರೌಂಡ್ ಸಾಷ್ಟಾಂಗ, ಗಾಡ್ ಫಾದರ್ ಕಟ್ಟಾ ಸುಬ್ರಹ್ಮಣ್ಯಂ ನಾಯ್ಡು ಬಾಯಿಗೆ ದಿನಂಪ್ರತಿ ಪ್ರಸಾದ ಮತ್ತು ತನ್ನ ಶ್ರೇಯೋಭಿಲಾಷಿ ಹಲಾಲು ಟೋಪಿ ಕೃಷ್ಣಯ್ಯ ಶೆಟ್ಟಿಯ ಪೂಜೆ ಇತ್ಯಾದಿಯಲ್ಲೇ ಮುಳುಗಿಹೋಗಿರುವ ನಟಿ ತಾರಾ ವಿರುದ್ಧ ಬಿಜೆಪಿಯ ಸಮಸ್ತ ಮಹಿಳಾ ಮಣಿಗಳೆಲ್ಲರೂ ಕೈಜೋಡಿಸಿಬಿಟ್ಟಿದ್ದಾರಂತೆ.





ತಾರಾ ಒಳ್ಳೆಯ ನಟಿಯಿರಬಹುದು, ಹಾಗಂತ ಎಮ್ಮೆಲ್ಸಿಗಿರಿ ಕೊಡೋದು ಯಾವ ನ್ಯಾಯ? ಮುಖ್ಯಮಂತ್ರಿಗಳು ಬೇಕಿದ್ದರೆ ಆಕೆಗೊಂದು ಸೈಟು ಕೊಡಲಿ. ಇನ್ನೂ ತಲೆಕೆಟ್ಟರೆ ಮತ್ತೊಂದು ಪ್ರಶಸ್ತಿ ನೀಡಲಿ. ಆಕೆ ಪಕ್ಷಕ್ಕಾಗಿ ಯಾವ ತ್ಯಾಗ ಮಾಡಿದ್ದಾಳೆ? ಇಡೀ ಬದುಕನ್ನೇ ಪಕ್ಷಕ್ಕಾಗಿ ತೇದ ಎಷ್ಟೊಂದು ಮಹಿಳೆ ನಾಯಕಿಯರು ಬಿಜೆಪಿಯಲ್ಲಿಲ್ಲ? ಕೊಡೋದಿದ್ರೆ ನಮ್ಮ ಪೈಕಿ ಯಾರಿಗಾದರೂ ಒಬ್ಬರಿಗೆ ಎಮ್ಮೆಲ್ಸಿಗಿರಿ ನೀಡಲಿ. ಅದು ಬಿಟ್ಟು ಬಿಜೆಪಿಯ ಸದಸ್ಯೆಯೇ ಅಲ್ಲದ ತಾರಾಗೆ ಮಣೆ ಹಾಕೋದಾದ್ರೆ ನಾವ್ಯಾಕೆ ಹೊಟ್ಟೆಬಟ್ಟೆ ಕಟ್ಟಿ ಪಕ್ಷಕ್ಕಾಗಿ ದುಡಿಯಬೇಕು?



ಇದು ಬಿಜೆಪಿಯ ಅಷ್ಟೂ ಮಹಿಳಾ ನಾಯಕಿಯರ ಕ್ಯಾತೆರಾಗ. ರಾಜ್ಯ ಬಿಜೆಪಿ ಮಹಿಳಾ ಮೋರ್ಛಾ ಅಧ್ಯಕ್ಷೆ ಮಂಗಳಾ ಶ್ರೀಧರ್, ಎಮ್ಮೆಲ್ಸಿ ಭಾರತಿ ಶೆಟ್ಟಿ, ಶಕುಂತಲಾ ನಾದಾಳೆ, ಶ್ರೀಲತಾ ಪೂರ್ಣಚಂದ್ರ, ಮಂಗಳಾ ಬಿದಾರ್, ಪೂರ್ಣಿಮಾ ಪ್ರಕಾಶ್, ಭಾಗ್ಯ ಅಮರೇಶ್ ಇತ್ಯಾದಿ ರಾಜ್ಯ ಬಿಜೆಪಿಯ ಅಧಿನಾಯಕಿಯರಿಂದ ಹಿಡಿದು ವಿಮಲಾಗೌಡ, ಶೋಭಾ ಕರಂದ್ಲಾಜೆಯಂಥವರು ಕೂಡ ತಾರಾ ಎಮ್ಮೆಲ್ಸಿಗಿರಿಯನ್ನು ವಿರೋಧಿಸುತ್ತಿರುವುದಕ್ಕೂ ಕಾರಣವಿದೆ.

ಅದು ಬಿಜೆಪಿಯ ಮಹಿಳಾ ನಾಯಕಿಯರೆಡೆಗಿನ ಪೇಂಟ್‌ಕೇರ್ ಬುದ್ಧಿ ಮತ್ತು ಬಿಜೆಪಿ ನಾಯಕರಿಗೆ ತಾರಾ ಹಾಕುತ್ತಿರುವ ಮಂತ್ರಗಾಳಿ. ತಮ್ಮನ್ನೆಲ್ಲ ಧಿಕ್ಕರಿಸಿ ಬಹುತೇಕ ಬಿಜೆಪಿಯ ನಾಯಕರನ್ನೆಲ್ಲ ತಾರಾ ಬುಟ್ಟಿಗೆ ಹಾಕಿಕೊಂಡಿದ್ದಾರೆಂಬ ಅಸೂಯೆ, ನಿನ್ನೆಮೊನ್ನೆ ಪಕ್ಷಕ್ಕೆ ಬಂದು ಮುಖ್ಯಮಂತ್ರಿಯ ಮನೆಗೆ ಡೈರೆಕ್ಟಾಗಿ ತಾರಾ ಎಂಟ್ರಿ ಪಡೆದಿದ್ದಾಳೆಂದೂ, ಎಂಎಲ್‌ಸಿಗಿರಿಗಾಗಿ ಮತ್ತು ಆಕೆ ನುಗ್ಗುತ್ತಿರುವ ರೀತಿ ಕಂಡೂ ಮಹಿಳಾ ಮೋರ್ಛಾ ತಿರುಗಿಬಿದ್ದಿದೆ. ಹಿರಿಯ ನಟಿ ಜಯಂತಿ ಎಮ್ಮೆಲ್ಸಿಗಿರಿಯ ಲಾಬಿಗಿಳಿದಿದ್ದಾರಾದರೂ ತಾರಾ ಥರ ಕಂಡಕಂಡ ನಾಯಕರ ಕಾಲಿಗೆ ಬಿದ್ದಿಲ್ಲ, ಮತ್ತೊಬ್ಬ ನಟಿ ಮತ್ತು ಫಿಲ್ಮ್ ಛೇಂಬರ್ ಅಧ್ಯಕ್ಷೆ ಜಯಮಾಲಾ ಕೂಡ ಎಮ್ಮೆಲ್ಸಿ ಆಕಾಂಕ್ಷಿಯಾದರೂ ತಾರಾ ಮಟ್ಟಕ್ಕಿಳಿದು ಲಾಬಿಗಿಳಿದಿಲ್ಲ.

ದಯವಿಟ್ಟು ಎಮ್ಮೆಲ್ಸಿಗಿರಿಯನ್ನು ಒಪ್ಪಿಕೊಳ್ಳಿ ಎಂದು ರಾಜ್ಯ ಬಿಜೆಪಿಯ ನಾಯಕರೇ ಮನೆತನಕ ಬಂದು ಕೇಳಿಕೊಂಡರೂ ವಿಷ್ಣು ಪತ್ನಿ ಭಾರತಿಯೇ ಅದನ್ನು ತಿರಸ್ಕರಿಸಿಬಿಟ್ಟರು. ನನ್ನ ಗಂಡನ ಸಾವಿಗೆ ಸಂತಾಪ ಸೂಚಕವಾಗಿ ನೀವು ಎಮ್ಮೆಲ್ಸಿಗಿರಿ ಕೊಡ್ತಾ ಇದ್ದೀರಿ ತಾನೆ? ಅವರ ಸಮಾಧಿ ಮೇಲೆ ಸಿಗುವ ಎಮ್ಮೆಲ್ಸಿಗಿರಿ ನನಗ್ಯಾಕೆ? ಎಂದ ಭಾರತಿಯವರ ವ್ಯಕ್ತಿತ್ವವೆಲ್ಲಿ, ತಾನೊಬ್ಬ ರಾಷ್ಟ್ರಪ್ರಶಸ್ತಿ ವಿಜೇತ ನಟಿ ಎಂಬುದನ್ನೂ ಲೆಕ್ಕಿಸದೇ ಕಟ್ಟಾನಂಥ ಖದೀಮನ ಕಾಲಿಗೆ ಬಿದ್ದು ಎಮ್ಮೆಲ್ಸಿಗಿರಿಯನ್ನು ಬೇಡುತ್ತಿರುವ ತಾರಾ ಎಲ್ಲಿ?

ಶೃತಿ ಯಡವಟ್ಟು ಮಾಡಿಕೊಂಡು ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಗಿರಿಯಿಂದ ಎತ್ತಂಗಡಿಯಾದ ಮರು ಗಳಿಗೆಯಿಂದಲೇ ತಾರಾ ಕಣ್ಣು ಆ ಸ್ಥಾನದ ಮೇಲೆ ಬಿತ್ತು. ಏಕಾಏಕಿ ಜಯನಗರದ ಮಹಿಳಾ ಅಭಿವೃದ್ಧಿ ನಿಗಮದ ಕಚೇರಿಗೆ ಹೋಗಿ ಶೃತಿಯವರ ಛೇಂಬರ್‌ಗೆ ನುಗ್ಗಿದ್ದಾರೆ, ಶೃತಿ ಕೂರುತ್ತಿದ್ದ ಛೇರ್ಮನ್ ಕುರ್ಚಿಯ ಮೇಲೆ ಕೂತು ತಾನೇ ಇಲ್ಲಿಗೆ ಮುಂದಿನ ಅಧ್ಯಕ್ಷೆ ಎಂದು ಕನಸು ಕಂಡಿದ್ದಾರೆ ತಾರಾ.





ವಿಕಟವೆಂದರೆ ತಾರಾ ಏನೆಲ್ಲಾ ಲಗಾಟ ಹೊಡೆದರೂ ಶೃತಿಯ ಉತ್ತರಾಧಿಕಾರಿಯಾಗಲು ಆಗಲೇ ಇಲ್ಲ. ಶೃತಿಗಿಂತ ತಾನೇನು ಕಮ್ಮಿಯೆಂಬ ಹಮ್ಮಿಗೆ ಬಿದ್ದ ತಾರಾ ಬಿಜೆಪಿ ಮತ್ತು ಸಂಘ ಪರಿವಾರದ ಪಡಸಾಲೆಗಳಲ್ಲಿ ಮಾಡಿಕೊಂಡ ಯಡವಟ್ಟು ಒಂದಾ ಎರಡಾ?

ಮೊನ್ನೆ ಇದ್ದಕ್ಕಿದ್ದಂತೆ ರಾಜ್ಯ ಬಿಜೆಪಿ ಕಚೇರಿಗೆ ಹೋದ ತಾರಾ ಅಲ್ಲಿದ್ದ ಎಲ್ಲಾ ಪದಾಧಿಕಾರಿಗಳಿಗೂ ಬಿಟ್ಟೀ ಊಟ ಹಾಕಿಸಿದ್ದಾರೆ. ಕಳೆದೆರಡು ತಿಂಗಳಿಂದ ರೇಸ್‌ಕೋರ್ಸ್ ಎದುರಿನ ಮುಖ್ಯಮಂತ್ರಿ ಗೃಹ ಕಚೇರಿಗೆ ಬೆಳಿಗ್ಗೆ ಒಂಭತ್ತಕ್ಕೆ ಹಾಜರಾಗುತ್ತಿದ್ದಾರೆ. ಹಾಗೇ ಸೀಯೆಮ್ ಮನೆ ಹೊಕ್ಕ ತಾರಾ ಅಲ್ಲಿನ ಕಾವಲು ಸಿಬ್ಬಂದಿಯನ್ನು ಲೆಕ್ಕಿಸದೇ ಏಕಾಏಕಿ ಡೈನಿಂಗ್ ಹಾಲಿಗೆ ನುಗ್ಗುತ್ತಾರೆ. ಅಲ್ಲಿ ಯಡ್ಡಿ ಮಗಳು ಉಮಾದೇವಿಯ ಪೂಸಿ ಹೊಡೆಯುತ್ತಾರೆ. ಮುಖ್ಯಮಂತ್ರಿ ಯಡ್ಡಿಯನ್ನು ಕಂಡಿದ್ದೇ ತಡ "ಅಪ್ಪಾಜೀ... ನಿಮಗೆ ಮನೆಯಿಂದ ಉಪ್ಪಿಟ್ಟು ಮಾಡ್ಕೊಂಡು ಬಂದಿದ್ದೀನಿ, ವಸೀ ಟೇಸ್ಟ್ ನೋಡಿ' ಎಂದು ಮಸ್ಕಾ ಹೊಡೀತಾರೆ.

ಸದ್ಯ ಶೋಭಾ ಕರಂದ್ಲಾಜೆಯ ಬಳಿ ಹೋಗದೇ ತನ್ನ ಬಳಿ ಬರುತ್ತಾಳಲ್ಲ ಎಂಬ ಸಮಾಧಾನ ಉಮಾದೇವಿಯದಾದರೆ ತನ್ನನ್ನು ಬಿಟ್ಟು ನೇರವಾಗಿ ಯಡ್ಡಿಯ ಮನೆಗೇ ನುಗ್ಗುತ್ತಾಳಲ್ಲ ಎಂಬ ಅಸೂಯೆ ಕರಂದ್ಲಾಜೆಗೆ. ಸದ್ಯ ಯಡ್ಡಿಯ ಡಾಲರ್ಸ್ ಕಾಲೋನಿಯ ಮನೆ ಪೂರ್ತಿ ಶೋಭಾ ಹಿಡಿತಕ್ಕೊಳಪಟ್ಟಿರುವುದರಿಂದ ತಾರಾ ಪಾಲಿಗೆ ಉಳಿದಿರುವುದು ರೇಸ್‌ಕೋರ್ಸ್ ಎದುರಿನ ಯಡ್ಡಿಯ ಸರ್ಕಾರಿ ಮನೆ ಮತ್ತು ಮಗಳು ಉಮಾದೇವಿ ಮಾತ್ರ.

ಹಾಗಂತ ಯಡ್ಡಿಯನ್ನಷ್ಟೇ ತಾರಾ ನಂಬಿ ಕೂತಿಲ್ಲ. ಬಿಡುವಾದಾಗಲೆಲ್ಲ ತನ್ನ ಗಾಡ್‌ಫಾದರ್ ಕಟ್ಟಾನಾಯ್ಡು ನಿವಾಸಕ್ಕೆ ಬಂದು ಕಟ್ಟಾ ಪಾದಕ್ಕೆ ಸಾಷ್ಟಾಂಗ ಬೀಳುತ್ತಾರೆ. ಇಲ್ಲಿ ತಾರಾ ಜೊತೆ ಕಂಪೆನಿ ಕೊಡುವವನು ಕಟ್ಟಾ ಬಲಗೈ ಬಂಟ ಚೌಲ್ಟ್ರಿ ಬಾಬು. ಈತನೇ ಅನಂತ್‌ಕುಮಾರ್ ಮನೆಗೂ ಕರೆದೊಯ್ಯುತ್ತಾನೆ.

ಇಲ್ಲಿ ತಾರಾ ಬಳಸುತ್ತಿರುವುದು ತನ್ನ ಜಾತಿಯ ಟ್ರಂಪ್‌ಕಾರ್ಡನ್ನು. ತಾನೂ ಕಮ್ಮಾ ನಾಯ್ಡು ಜಾತಿಯವಳೇ ಎಂದು ಕಟ್ಟಾ, ವೆಂಕಯ್ಯನಂಥವರನ್ನು ಬುಟ್ಟಿಗೆ ಹಾಕಿಕೊಂಡ ತಾರಾ ಪಾಲಿಗೆ ಸದ್ಯ ಆಪದ್ಬಾಂಧವನಂತೆ ಅವತರಿಸಿದವನು ಮಾಜಿ ಮಂತ್ರಿ ಕೃಷ್ಣಯ್ಯ ಶೆಟ್ಟಿ ಎಂಬ ಹಲಾಲುಟೋಪಿ.

ಮಹಿಳಾ ನಾಯಕಿಯರಷ್ಟೇ ತಾರಾ ಎಮ್ಮೆಲ್ಸಿಗಿರಿಯನ್ನು ವಿರೋಧಿಸುತ್ತಿಲ್ಲ, ಜೊತೆಗೆ ಬೆಂಗಳೂರಿನ ಮತ್ತೊಬ್ಬ ಅಧಿಪತಿ ಸಾರಿಗೆ ಸಚಿವ ಆರ್. ಅಶೋಕ್‌ಗೂ ತಾರಾ ತಲೆ ಕಂಡರಾಗುತ್ತಿಲ್ಲ, ಏಕೆಂದರೆ ಅಶೋಕ್ ಈಗಾಗಲೇ ಮತ್ತೊಬ್ಬ ನಟ ಜಗ್ಗೇಶ್‌ನನ್ನು ಎಮ್ಮೆಲ್ಸಿ ಮಾಡುತ್ತೇನೆಂದು ಕಾರ್ಯಾಚರಣೆಗಿಳಿದಾಗಿದೆ. ಅದು ಒಕ್ಕಲಿಗರ ಲಾಬಿ. ಅಶೋಕ್ ಜೊತೆ ಬೆಂಗಳೂರಿನ ಬಹುತೇಕ ಶಾಸಕರೆಲ್ಲ ತಾರಾ ವಿರೋಧಕ್ಕೆ ಕೈಜೋಡಿಸಿದ್ದಾರೆ. ಬಿಜೆಪಿಯ ಆರೆಸ್ಸೆಸ್ ಏಜೆಂಟ್ ಸಂತೋಷ್‌ಜೀ ಬಹಿರಂಗವಾಗೇ ತಾರಾ ವಿರುದ್ಧ ಡಂಗುರ ಹೊಡೆಯುತ್ತಿದ್ದಾನೆ. ಹೀಗಾಗಿ ಮೊನ್ನೆ ಕೇಶವಕೃಪಕ್ಕೆಂದು ಹೋಗಿದ್ದ ತಾರಾಗೆ ಅಲ್ಲಿದ್ದ ಆರೆಸ್ಸೆಸ್ ವಟುಗಳ್ಯಾರೂ ಬಾಗಿಲನ್ನೇ ತೆಗೆದಿಲ್ಲ, ಗೇಟಿನೊಳಕ್ಕೂ ಸೇರಿಸಿಲ್ಲ.


ಇಷ್ಟೆಲ್ಲ ವಿರೋಧವಿದ್ದಾಗ್ಯೂ ಯಡ್ಡಿ ತಾನೇ ಹೇಗೇ ತಾರಾ ಕಟ್ಟಿಕೊಂಡು ಹೆಣಗಲು ಸಾಧ್ಯ? ಲೇಟೆಸ್ಟ್ ಸುದ್ದಿ ಪ್ರಕಾರ ತಾರಾಗೆ ಮಹಿಳಾ ಅಭಿವೃದ್ಧಿ ನಿಗಮ ಕೊಟ್ಟು ಸಾಗ ಹಾಕುವ ಸಾಧ್ಯತೆಗಳೇ ಹೆಚ್ಚು. ಅದನ್ನೂ ಮೀರಿ ಎಮ್ಮೆಲ್ಸಿಗಿರಿ ದಕ್ಕಿತೆಂದರೆ ಅದು ಯಡ್ಡಿಗೆ ಎಡವಟ್ಟೇ!


ರಾಷ್ಟ್ರಮಟ್ಟದ ಶ್ರೇಷ್ಠ ನಟಿ ಪ್ರಶಸ್ತಿ ಪಡೆದ ತಾರಾಗೆ ಕೊನೆಗೆ ಕೃಷ್ಣಯ್ಯ ಶೆಟ್ಟಿ, ಕಟ್ಟಾರಂಥ ದುಬಾಕೋರರ ಮುಂದೆ ಎಂಎಲ್‌ಸಿಗಿರಿಗಾಗಿ ಪೂಸಿ ಹೊಡೆಯುವ ಅಗತ್ಯವೇನಿತ್ತು?

● ರಾ. ಸೋಮನಾಥ್

ಗದಗ ಸಮ್ಮೇಳನ: ಶ್ರೀರಾಮುಲು ಪಲಾಯನ

76ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಎಮರ್ಜೆನ್ಸಿ ವಾರ್ಡಿಗೆ ಸೇರಬೇಕಾದ ಸ್ಥಿತಿ ತಲುಪಿದೆ. ಸಮ್ಮೇಳನಕ್ಕೆ ಬಾಕಿಯಿರುವುದು ಇನ್ನೂ ಇಪ್ಪತ್ತು ದಿನ ಮಾತ್ರ. ಆದರೂ ಇಪ್ಪತ್ತು ಪರ್ಸೆಂಟ್‌ನಷ್ಟು ಅರೆಂಜ್‌ಮೆಂಟ್‌ಗಳು ಆಗಿಲ್ಲ, ಹಣ ಸಂಗ್ರಹವಾಗಲ್ಲ. ...ವ ಏನೆಂದರೆ ಒಂದು ವೇಳೆ ಇವೆಲ್ಲಾ ಹಂಡ್ರೆಡ್ ಪರ್ಸೆಂಟ್ ಆಗೇಬಿಟ್ಟರೂ ಎಪ್ಪತ್ತು ಪರ್ಸೆಂಟ್ ಪ್ರತಿನಿಧಿಗಳಿಗೆ ಗದಗ ಶಹರದೊಳಗೆ ವಸತಿ ವ್ಯವಸ್ಥೆಯೇ ಇಲ್ಲ. ಈ ಎಲ್ಲಾ ಇಲ್ಲಗಳ ...ವೆ ಜಿಲ್ಲಾ ಉಸ್ತುವಾರಿ ಸಚಿವ ಶ್ರೀರಾಮುಲು ಕೂಡಾ ಇಲ್ಲದಿರುವುದು ಈಗ ... ಕಾಣುತ್ತಿದೆ.






ಈ ಮೇಕಪ್ ರಾಮುಡು ಜಿಲ್ಲಾ ಕಸಾಪ ... ಹಿರೇಮಠ ಹಾಗೂ ಕೇಂದ್ರ ಅಧ್ಯಕ್ಷ ನಲ್ಲೂರು ಪ್ರಸಾದರ ಕಣ್ಣಿಗೆ ಬಿದ್ದಿಲ್ಲ. ಕೈಗೂ ...ಲ್ಲ. ಹಾಳಾಗಿ ಹೋಗಲಿ ಎಂದರೆ ಕೊನೆಗೆ ಫೋನಿಗೂ ಸಿಗುತ್ತಿಲ್ಲ. ಒಮ್ಮೆ ಆಕಸ್ಮಾತ್ತಾಗಿ ...ನು 'ನೆಲ್ಲೂರೇ ಪ್ರಸಾದರೆ, ನೀವೇನೂ ...ಚನೆ ಮಾಡಬೇಡಿ, ಅದ್ದೂರಿಯಾಗಿ ಸಮ್ಮೇಳನ ಮಾಡನ...' ಎಂದು ಹೇಳಿ ...ದವನು ಇವತ್ತಿಗೂ ನಾಪತ್ತೆಯಾಗಿದ್ದಾನೆ. ...ಂದೆಡೆ ಜಿಲ್ಲಾಧಿಕಾರಿ ಡಾ.ಎಸ್.ವಿ.ಪ್ರಸಾದ್ ...ರಿಯಲ್ಲಿ ಟೆಂಡರ್ ಕರೆದು ಆಗಬೇಕಾದ ...ಗಳಿಗಂತೂ ಚಾಲನೆ ಕೊಟ್ಟಿದ್ದಾರೆ. ಶಾಮಿಯಾನ, ..., ಮೈಕು, ಆಹ್ವಾನ ಪತ್ರಿಕೆ, ಭಾಷಣಕಾರರ ಪಟ್ಟಿ ...ಸುವ ಕೆಲಸಗಳ ಪೈಕಿ ಕೆಲವು ಮಂದಗತಿಯಲ್ಲೂ ...ದವು ವೇಗವಾಗೂ ಆಗುತ್ತಿವೆ. ಎಲ್ಲಾ ಸಮ್ಮೇಳನ... ಆಗುವಂತೆ ಗದಗದಲ್ಲೂ ಊಟ-ವಸತಿ-ಸಾರಿಗೆ ...ಲಯಗಳ ಅವ್ಯವಸ್ಥೆಯಾಗುವುದು ಗ್ಯಾರಂಟಿಯಾಗಿದೆ. ಆದರೆ ಇದಕ್ಕಿಂಥ ಅಧ್ವಾನವಾಗಿರುವುದು ರಾಜಕಾರಣಿಗಳು ತೋರಿಸುತ್ತಿರುವ ಅಸಡ್ಡೆ ಹಾಗೂ ಅಸಹಕಾರ.

ಕೈಕೊಟ್ಟ ರಾಮುಲು

ಹಾಲಿ ಗದಗ ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿರುವ ಮೇಕಪ್ ರಾಮುಲುಗೆ ಸಾಹಿತ್ಯ-ಸಂಸ್ಕೃತಿಯಿರಲಿ ನೆಟ್ಟಗೆ ಒಂದು ವಾಕ್ಯ ಕನ್ನಡವನ್ನೂ ಮಾತಾಡಲು ಬರುವುದಿಲ್ಲ. ಆದರೂ ಪ್ರೋಟೋಕಾಲ್ ಪ್ರಕಾರ ಈತನೇ ಈಗ ಇಡೀ ಸಮ್ಮೇಳನದ ಉಸ್ತುವಾರಿ ಸಮಿತಿಯ ಮುಖ್ಯಸ್ಥನಾಗಿ ವಕ್ಕರಿಸಿದ್ದಾನೆ. ಸಮ್ಮೇಳನದ ಸ್ಥಳ ಘೋಷಿಸಿದಾಗೊಮ್ಮೆ, ಆ ನಂತರ ಕಳೆದ ವಾರ ಲಾಂಛನ ಬಿಡುಗಡೆಯ ಕಾರ್ಯಕ್ರಮ ಹೊರತುಪಡಿಸಿದರೆ ರಾಮುಲು ಬೇರೆ ಯಾವಾಗಲೂ ಗದಗದತ್ತ ತಲೆ ಹಾಕಿ ನೋಡಿಲ್ಲ. ಕಸಾಪದ ಯಾವ ಪದಾಧಿಕಾರಿಗಳಿಗೂ ಕನಿಷ್ಠ ಫೋನಿನಲ್ಲೂ ರಾಮುಲು ಸಿಗುತ್ತಿಲ್ಲ. ಈ ಅವಿವೇಕಿ ಮಂತ್ರಿ ಹಿಂದೆ ರಾಜ್ಯದಲ್ಲಿ ಹಂದಿಜ್ವರ ಬಾಧಿಸುತ್ತಿದ್ದಾಗಲೂ ಗಣಿಧೂಳು ನೆಕ್ಕುತ್ತಾ ಕುಳಿತ್ತಿದ್ದನೇ ವಿನಃ ಆಸ್ಪತ್ರೆ-ಆಫೀಸು ಎಂದು ಒಂದು ದಿನವೂ ಬಂದು ಹೋಗಿ ಕೆಲಸ ಮಾಡಿರಲಿಲ್ಲ. ಅಂತಹವನು ಈ ಕಸಾಪ ಸಮ್ಮೇಳನ ನೆಟ್ಟಗೆ ನಡೆಸಿಯಾನೇ ಹೇಳಿ?



ಇವನೊಂದಿಗೆ ಗದಗ ಜಿಲ್ಲಾ ಬಿಜೆಪಿ ಶಾಸಕರೂ ತೀರಾ ಬೇಜವಾಬ್ದಾರಿಯಿಂದ ವರ್ತಿಸುತ್ತಿರುವುದು ಎದ್ದು ಕಾಣುತ್ತಿವೆ. ಗದಗದ ಬಿಜೆಪಿ ಶಾಸಕ ಶ್ರೀಶೈಲಪ್ಪ ಬಿದರೂರು ಜಾಲಿಯಾಗಿ ಫಾರಿನ್ ಟ್ರಿಪ್ ಮಾಡಿಕೊಂಡು ಬಂದು 'ನಾನು ಫೆಬ್ರವರಿಲಿ ಸಮ್ಮೇಳನ ಮಾಡೇ ಮಾಡ್ತೀನಿ' ಎನ್ನುತ್ತಾ ಈಗ ತೋಳೇರಿಸಿಕೊಂಡು ನಿಂತಿದ್ದಾನೆ. ಇನ್ನು ರೋಣದ ಬಿಜೆಪಿ ಶಾಸಕ ಕಳಕಪ್ಪ ಬಂಡಿ ಭಿನ್ನಮತ ಹಾಳು ಮೂಳು ಎನ್ನುತ್ತಾ ರೆಸಾರ್ಟ್‌ನಲ್ಲಿ ಮಜಾ ಮಾಡುತ್ತಾ ಈಗ ಊರಿಗೆ ಬಂದು ತಲುಪಿದ್ದಾನೆ. ಶಿರಹಟ್ಟಿಯ ಫಸ್ಟ್ ಟೈಂ ಶಾಸಕ ರಾಮಣ್ಣ ಲಮಾಣಿಗಂತೂ ಕಸಾಪ-ಕನ್ನಡ ಎಂಬುದರ ತಲೆಬುಡವೇ ಗೊತ್ತಾಗಲ್ಲ. ಇನ್ನುಳಿದ ನರಗುಂದ ಶಾಸಕ ಸಿ.ಸಿ. ಪಾಟೀಲ ಸಣ್ಣಪುಟ್ಟ ಕೆಲಸ ಮಾಡುತ್ತಿದ್ದಾರಷ್ಟೇ. ಸರ್ಕಾರದ ಪರವಾಗಿ ಜಿಲ್ಲಾಧಿಕಾರಿ ಎಸ್.ವಿ.ಪ್ರಸಾದ್ ಒಬ್ಬರೇ ಎಲ್ಲಾ ಕೆಲಸಗಳನ್ನು ನಿಭಾಯಿಸುವ ಸರ್ಕಸ್ ಮಾಡುತ್ತಿದ್ದಾರೆ. ಸಮ್ಮೇಳನಕ್ಕೆ ಬೇಕಿರುವ ನಾಲ್ಕು ಕೋಟಿ ರೂಪಾಯಿಗಳ ಪೈಕಿ ಈಗ ಕೈಗೆ ಹತ್ತಿರುವುದು ಒಂದೂ ಮುಕ್ಕಾಲು ಕೋಟಿ ರೂಪಾಯಿ ಮಾತ್ರ. ಹಣ ಕ್ರೋಢೀಕರಿಸಬೇಕಾದ ರಾಜಕಾರಣಿಗಳು ಆಸಕ್ತಿಯೇ ತೋರದ ಕಾರಣ ಹಣ ಹುಟ್ಟುತ್ತಿಲ್ಲ, ಮೂಲಭೂತ ಸೌಕರ್ಯಗಳೇ ಇರದ ಕಾರಣ ಗದಗದಲ್ಲಿ ವ್ಯವಸ್ಥೆಯೂ ಸರಿಹೋಗುತ್ತಿಲ್ಲ. ಇಂತಿರುವಲ್ಲಿ ಸಾಹಿತ್ಯ ತಾನೆ ಹೇಗೆ ಹುಟ್ಟಬೇಕು ಹೇಳಿ?

ಗಣಿ ದಂಧೆ, ಅನಾರೋಗ್ಯ ಮೇಕಪ್, ಕೃಷ್ಣದೇವರಾಯ ಉತ್ಸವವೆಂದು ಕಳೆದುಹೋಗಿರುವ ಸಚಿವ ರಾಮುಲು ಒಬ್ಬ ನೆಟ್ಟಗೆ ಇತ್ತ ಗಮನ ಹರಿಸಿದಿದ್ದರೆ ಗದಗದಲ್ಲಿ ಫೆಬ್ರವರಿ 19ರಿಂದ 21ರ ತನಕ ಸಂಭವಿಸಲಿರುವ ಅನೇಕ ಅವ್ಯವಸ್ಥೆಗಳನ್ನು ಸರಿಪಡಿಸಿಕೊಳ್ಳಬಹುದಿತ್ತೇನೋ?

ಆದರೇನು ಮಾಡುತ್ತೀರಿ. ಈ ರಾಮುಲು ಒಬ್ಬ ಅನಕ್ಷರಸ್ಥ! ●

ಗದಗ ಏನುಂಟು-ಏನಿಲ್ಲ


ಒಂದೂವರೆ ಲಕ್ಷದಷ್ಟು ಜನಸಂಖ್ಯೆಯ ಗದಗ ಶಹರದಲ್ಲಿ ಇರುವುದೇ ಗೀತಾಂಜಲಿ; ಪ್ರಶಾಂತ್ ಇತ್ಯಾದಿ ಲಾಡ್ಜುಗಳು. ಅದರಲ್ಲಿ ಒಂದೆರಡಂತೂ ವೇಶ್ಯಾವಾಟಿಕೆಗೆ ಕುಖ್ಯಾತಿ ಪಡೆದಿರುವಂತಹವು. ಸಮ್ಮೇಳನಕ್ಕೆಂದು ಬರುವ ನಮ್ಮ ಸಾಹಿತಿ ಕಲಾವಿದರೂ ಅಲ್ಲೂ ಹೇಗೋ ಅಡ್ಜೆಸ್ಟ್ ಮಾಡಿಕೊಂಡು ಇರುತ್ತಾರೆಂದುಕೊಂಡು ಲೆಕ್ಕಾ ಹಾಕಿದರೂ ಎಲ್ಲಾ ಸೇರಿ ನೂರೈವತ್ತು ರೂಮುಗಳಷ್ಟೇ ಅಲ್ಲಿ ಲಭ್ಯ. ರೂಮಿಗಿಬ್ಬರೆಂದುಕೊಂಡರೂ ಮುನ್ನೂರು ಜನರಿಗಷ್ಟೇ ಅಲ್ಲಿ ವಸತಿ ಸಾಧ್ಯ. ಇನ್ನು ಮುನ್ಸಿಪಲ್ ಹೈಸ್ಕೂಲು, ತೋಂಟದಾರ್ಯ ಶಾಲೆ, ಪುಟ್ಟರಾಜ ಗವಾಯಿ ಶಾಲೆ, ಲಯೋಲಿನಾ ಕಾನ್ವೆಂಟ್, ಜೆ.ಟಿ.ಕಾಲೇಜು ಕಟ್ಟಡಗಳನ್ನೆಲ್ಲಾ ಬಿಡಿಸಿಕೊಂಡರೂ ಒಂದು ಸಾವಿರ ಜನರಿಗೆ ವಸತಿ ಆಗಬಹುದಷ್ಟೇ. ಹಾಗಾಗಿ ಕಸಾಪದವರು ಹುಬ್ಬಳ್ಳಿ, ಬೆಟಗೇರಿ, ಲಕ್ಷ್ಮೇಶ್ವರ ಹಾಗೂ ಧಾರವಾಡಗಳಲ್ಲಿ ಪ್ರತಿನಿಧಿಗಳನ್ನು ಉಳಿಸಿ ಪ್ರತಿದಿನ ಅಪ್ ಅಂಡ್ ಡೌನ್ ಮಾಡಿಸುವ ಯೋಚನೆ ಮಾಡಲಾಗಿದೆ. ಇದು ಅಸಾಧ್ಯವೇನಲ್ಲ. ಆದರೂ ಗದಗ ಶಹರದಲ್ಲಿ ಕನಿಷ್ಠ ಆರೆಂಟು ಕಡೆ ತಲಾ ನೂರು **make shift** ಶೌಚಾಲಯಗಳನ್ನೂ ನಿರ್ಮಿಸುವ ಬಗ್ಗೆ ಸಂಘಟಕರು ಯೋಚಿಸುವುದೊಳಿತು.

ರಾಜಕಾರಣಿಗಳ ಅಸಹಕಾರ ನೋಡಿ ಬಹಳವಾಗಿ ನೊಂದಿರುವ ಕಸಾಪ ಅಧ್ಯಕ್ಷ ಡಾ. ನಲ್ಲೂರು ಪ್ರಸಾದ್ ಹತಾಶರಾಗಿದ್ದರೂ ತಮ್ಮ ಪ್ರಯತ್ನ ಕೈಬಿಟ್ಟಿಲ್ಲ. ಆದರೂ ಸಮ್ಮೇಳನದಲ್ಲಿ ಏನಾದರೂ ಎಡವಟ್ಟುಗಳಾದಲ್ಲಿ ಶಿಲುಬೆಗೇರುವವರು ಅವರೇ ಆಗಿರುತ್ತಾರೆಂಬುದು ಅವರಿಗೆ ತಿಳಿದಿದ್ದರೆ ಉತ್ತಮ.

ಚಕ್ರೆಯ ಮುಂದೆ ಚಂದಿ ಪಳನಿ ಎನ್ನುವ ಹಂದಿ

ಮಾಜಿ ಕೌನ್ಸಿಲರ್ ಡಿ. ಕ್ರಿಸ್ಟೋಫರ್ ಚಕ್ರವರ್ತಿ ಅಲಿಯಾಸ್ ಚಕ್ರೆ ಹಿಂದೊಮ್ಮೆ ಕೌನ್ಸಿಲರ್ ಆಗಿದ್ದ ರಾಮಚಂದ್ರಪುರ ವಾರ್ಡೀಗ ಓಕಳಿಪುರ ವಾರ್ಡಾಗಿದೆ. ಇವತ್ತಲ್ಲ ನಾಳೆ ಚಕ್ರೆ ಗಾಂಧಿನಗರದ ಎಮ್ಮೆಲ್ಲೇ ಕ್ಯಾಂಡಿಡೇಟಾಗಬಹುದೆಂಬ ಭೀತಿಗೆ ಬಿದ್ದ ದಿನೇಶ್ ಗುಂಡೂ ರಾವ್ ಎತ್ತಿ ಕಟ್ಟಿದ್ದು ಚಂದಿ ಗೋಪಾಲನನ್ನು. ಈತನದು ಚಂದಿ ಚಿಟ್ಟೆ ವ್ಯಾಪಾರವಾದ್ದರಿಂದ ಜನ ಚಂದಿಗೋಪಾಲನೆಂದೇ ಭಯಭಕ್ತಿಯಿಂದ ಕರೆಯುತ್ತಾರೆ. ತನಗೇ ಕಾಂಗ್ರೆಸ್ ಟಿಕೆಟ್ಟೆಂದು ನಂಬಿದ ಚಂದಿಗೋಪಾಲ ಪ್ರತಿ ಸಂಜೆಯಾದರೆ ಪೋರ್ಕಿ ಹುಡುಗರನ್ನು ಕಟ್ಟಿಕೊಂಡು ಎಣ್ಣೆ ಹೊಡೆಸುತ್ತಾನೆ.

ಕುಡಿದು ಚಿತ್ತಾದ ಪೋರ್ಕಿ ಗ್ಯಾಂಗ್ ನಶೆಯಲ್ಲಿ ಕುಡಿಸಿದ ಚಂದಿಗೋಪಾಲನನ್ನೇ ಅಮ್ಮಾ ಅಕ್ಕಾ ಎಂದು ತಮಿಳುಶಾಸ್ತ್ರ ಪಠಿಸುತ್ತಾರೆ. ಹೀಗೆ ಎಣ್ಣೆ ಕಾಸಿಗೆಂದೇ ಲಕ್ಷಾಂತರ ರೂಪಾಯಿ ಬಾರು-ವೈನ್ ಸ್ಟೋರಿಗೆ ಸುರಿದ ಚಂದಿಗೋಪಾಲನಿಗೆ ಕುಡಿಸಿದ ಮಾತ್ರಕ್ಕೆ ಜನ ಓಟು ಕೊಡುವುದಿಲ್ಲ ಎಂಬ ಸತ್ಯ ಗೊತ್ತಿಲ್ಲ. ಕುಡಿಸಿ ಹುಡುಗರನ್ನು ಹಾಳು ಮಾಡುತ್ತಾನೆಂದು ಮನೆಮಂದಿಯಾರೂ ಚಂದಿಗೆ ಶಾಪ ಹಾಕದೇ ಬಿಟ್ಟಿಲ್ಲ.


ಚಕ್ರವರ್ತಿ


ಹೀಗಾಗಿ ಕಾಂಗ್ರೆಸ್ ಟಿಕೆಟ್ ಸಿಕ್ಕದೇ ಹೋದರೂ ಪಕ್ಷೇತರನಾಗಿ ನಿಂತರೂ ಇಲ್ಲಿ ಚಕ್ರೆ ಗೆಲ್ಲುವುದು ಗ್ಯಾರಂಟಿ. ಬಿಜೆಪಿಗೆ ಇಲ್ಲಿ ಕ್ಯಾಂಡಿಡೇಟ್ ಅಂತಿದ್ದ ಶಿವಕುಮಾರ್ ದಲ್ಲು, ನಯಾಪೈಸೆ ಬಿಚ್ಚುವವನಲ್ಲ. ಈಗ ಪಳನಿಕಾಂತ್ ಎಂಬ ಪ್ರಳಯಾಂತಕನೊಬ್ಬ ಬಿಜೆಪಿ ಟಿಕೆಟ್ಟಿಗೆ ಪಕ್ಕರಿಸಿದ್ದಾನೆ. ಆತ ಪಕ್ಕದ ವಾರ್ಡಿಗೆ ನಿಂತೇ ಠೇವಣಿ ಉಳಿಸಿಕೊಂಡಿಲ್ಲ. ಸಾಲದ್ದಕ್ಕೆ ಕನ್ನಡ ಬಾವುಟಕ್ಕೆ ಬೆಂಕಿ ಹಚ್ಚಿದ ಕುಖ್ಯಾತಿಯೂ ಈತನ ಬೆನ್ನಿಗಿದೆ. ಈ ಪಳನೀಕಾಂತ್‌ಗೇನಾದರೂ ಬಿಜೆಪಿ ಟಿಕೆಟ್ ಸಿಕ್ಕಿತೆಂದರೆ ಚಕ್ರೆ ಗೆದ್ದಂತೆಯೇ. ಚಕ್ರೆಯ ಕಡುವೈರಿ ಬಾಂಬ್ ನಾಗ ತನ್ನ ಪತ್ನಿ ಲಕ್ಷ್ಮಿಯನ್ನೇ ಮತ್ತೆ ಕಣಕ್ಕಿಳಿಸುತ್ತಾನಂತೆ. ಕಳೆದ ಬಾರಿ ಇದೇ ವಾರ್ಡಿನಿಂದ ಗೆದ್ದು ಕೌನ್ಸಿಲರ್ ಆಗಿದ್ದ ಲಕ್ಷ್ಮಿ ಹೆಬ್ಬೆಟ್ಟು ಮಾತೆ. ಪತ್ನಿಯನ್ನು ಗೆಲ್ಲಿಸಿ ತಾನೂ ಗೆದ್ದ ಬಾಂಬ್ ನಾಗ ರಾಮಚಂದ್ರಪುರಕ್ಕೆಂದು ಮಂಜೂರಾದ 18 ಕೋಟಿಯಷ್ಟು ದುಡ್ಡನ್ನು ಏನು ಮಾಡಿದನೆಂಬುದು ಯಾರಿಗೂ ಗೊತ್ತಿಲ್ಲ.

ಹಾಗಂತ ಚಕ್ರೆ ಬಿಟ್ಟಿಲ್ಲ. ಮಂಜೂರಾದ 18 ಕೋಟಿ ಏನಾಯಿತು? ಯಾವ್ಯಾವ ಕಾಮಗಾರಿಯ ಹೆಸರಲ್ಲಿ ನಾಗ ಕಳ್ಳಬಿಲ್ಲು ಮಾಡಿ ನುಂಗಿ ಹಾಕಿದ? ಎಷ್ಟು ಕಮಿಷನ್ ಹೊಡೆದ? ಇತ್ಯಾದಿ ಪ್ರತಿಯೊಂದನ್ನೂ ಪತ್ತೆಹಚ್ಚಿ ಜನರ ಮುಂದಿಡುತ್ತಲೇ ಬಂದ. 18 ಕೋಟಿಯ ಕಾಮಗಾರಿ ಕರ್ಮಕಾಂಡ ಮಾಡಿ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದ ಬಾಂಬ್ ನಾಗ ತಾನೇ ನಿಂತರೂ ಅಷ್ಟೇ, ತನ್ನ ಪತ್ನಿಯನ್ನು ನಿಲ್ಲಿಸಿದರೂ ಅಷ್ಟೇ-

ಓಕಳಿಪುರದಲ್ಲಿ ಚಕ್ರೆಯ ಮುಂದೆ ಚಂದಿಯಿರಲಿ, ಹಂದಿಯೇ ಬರಲಿ; ವ್ಯತ್ಯಾಸ ಸೊನ್ನೆಯೇ.

ವಾರ್ಡ್ ವಾರ್ 7 BBM

ಗಾಂಧಿನಗರ



• ರಾ. ಸೋಮನಾಥ್

ಬಾಂಬ್‌ನಾಗನ ಕರಾಮತ್ತು ದಿನೇಶ್ ಗುಂಡೂಗೆ ವಿಪತ್ತು

ಬಿಜೆಪಿಯ ಸಂಸದ ಪಿ.ಸಿ. ಮೋಹನ್ ಮತ್ತು ಹಾಲಿ ಶಾಸಕ ದಿನೇಶ್ ಗುಂಡೂರಾವ್ ಜಟಾಪಟಿಯಲ್ಲಿ ಬಾಂಬ್ ನಾಗನೆಂಬ ಒರಟನಿಗಾಗುವ ಲಾಭ ಎಷ್ಟು?

ಇದು ಗಾಂಧಿನಗರವೆಂಬ ಕೊಂಪೆ ಸದೃಶ ವಿಧಾನಸಭಾ ಕ್ಷೇತ್ರದ ವಾರ್ಡ್‌ವಾರು ಲೆಕ್ಕಾಚಾರದ ಸಂಕ್ಷಿಪ್ತ ರೂಪ. ಎಮ್ಮೆಲ್ಲೇ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ದಿನೇಶ್ ಗುಂಡೂ ರಾವ್ ಗೆದ್ದರೂ ಲೋಕಸಭಾ ಎಲೆಕ್ಷನ್ನಿನ ಹೊತ್ತಿಗೆ ಗಾಂಧಿನಗರದ ಚಿತ್ರಣವೇ ಉಲ್ಟಾಪಲ್ಟಾಯಿಸಿತ್ತು. ಎಂಪಿಯಾಗಿ ಗೆದ್ದ ಪಿ.ಸಿ. ಮೋಹನ್ ಪರವಾಗಿ ಎಲ್ಲಾ ವಾರ್ಡುಗಳಲ್ಲೂ ಬಿಜೆಪಿಗೆ ಲೀಡು ಬಂತು. ಜಮೀರ್ ಅಹ್ಮದ್ ಪರವಾಗಿ ವಿ. ನಾಗರಾಜ್ ಅಲಿಯಾಸ್ ಬಾಂಬ್ ನಾಗ ಹೆಣಗಾಡಿದ್ದರಿಂದಾಗಿ ಕಾಂಗ್ರೆಸ್ಸು ಇಲ್ಲಿ ಮೂರನೇ ಸ್ಥಾನಕ್ಕಿಳಿದದ್ದು ಲೋಕಸಭಾ ಚುನಾವಣೆಯ ವಿಪರ್ಯಾಸ ದಂತಿತ್ತು.


ಇದೇ ಪರಿಸ್ಥಿತಿ ಈಗಲೂ ಮರುಕಳಿಸುತ್ತಾ ಎಂಬುದಷ್ಟೇ ಇತ್ಯರ್ಥವಾಗಬೇಕಿರುವ ಪ್ರಶ್ನೆ. ಎಂಪಿ ಎಲೆಕ್ಷನ್ನಿಗೂ ಅಸೆಂಬ್ಲಿ ಚುನಾವಣೆಗೂ ಮತ್ತು ಪಾಲಿಕೆ ಹಣಾಹಣಿಗೂ ವ್ಯತ್ಯಾಸವಿರುತ್ತದೆ. ಗಾಂಧಿನಗರದ ಏಳು ವಾರ್ಡುಗಳ ಪೈಕಿ ದತ್ತಾತ್ರೇಯ ದೇವಸ್ಥಾನ, ಗಾಂಧಿನಗರ, ಓಕುಳಿಪುರ ಮತ್ತು ಚಿಕ್ಕಪೇಟೆ ವಾರ್ಡುಗಳು ಜನರಲ್ ಕ್ಯಾಟಗರಿಗೊಳಪಟ್ಟಿವೆ. ಸುಭಾಶ್ ನಗರವೊಂದೇ ಇಲ್ಲಿ ಪರಿಶಿಷ್ಟ ಮೀಸಲು. ಮಿಕ್ಕಂತೆ ಕಾಟನ್‌ಪೇಟೆ ಮತ್ತು ಬಿನ್ನಿಪೇಟೆಗಳೆರಡೂ ಬಿಸಿಎಂ-ಎ ವರ್ಗದ ಮಹಿಳಾ ಮೀಸಲಿಗೊಳಪಟ್ಟಿವೆ. ಒಂದಲ್ಲ ಎರಡಲ್ಲ ನಾಲ್ಕು ಜನರಲ್ ವಾರ್ಡುಗಳಿರುವುದೇ ಶಾಸಕ ದಿನೇಶ್ ಪಾಲಿಗೆ ತಲೆನೋವಾದರೆ ಬಿಜೆಪಿಗಿದು ಬಯಸದೇ ಬಂದ ಭಾಗ್ಯ.


ಸುನೀತಾ

ದತ್ತಾತ್ರೇಯ ದೇವಸ್ಥಾನ ವಾರ್ಡು ಈ ಹಿಂದೆ ಮಲ್ಲೇಶ್ವರದಲ್ಲಿತ್ತು. ಮಾಜಿ ಮೇಯರ್ ರಾಮಚಂದ್ರಪ್ಪನವರ ನಂತರ ಇದನ್ನು ಸಾಕಿಬುದ್ಧಾ ಸೀನನೆಂಬ ಹಗಲುಕುಡುಕ ಪ್ರತಿನಿಧಿಸಿದ್ದ. ಹೇಳಿಕೇಳಿ ಇದು ಕಾಂಗ್ರೆಸ್ ಕೋಟೆ. ಈ ಬಾರಿ ತನ್ನ ತಂಗಿ ಮಗ ಜಿ.ಗಿರೀಶ್‌ನನ್ನು ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿಸುವುದು ಮಾಜಿ ಮೇಯರ್ ರಾಮಚಂದ್ರಪ್ಪನವರ ಲೆಕ್ಕಾಚಾರವಾಗಿತ್ತು. ಆದರೆ ಹಿರಿಯ ಕಾಂಗ್ರೆಸ್ ಕಾರ್ಯಕರ್ತ ನರಸಿಂಗರಾವ್‌ಗಾಗಿ ಈ ಬಾರಿ ದತ್ತಾತ್ರೇಯ ವಾರ್ಡನ್ನು ಮೀಸಲಿಡಲೇಬೇಕು.

ದುಡ್ಡೂಕಾಸಿನ ವಿಷಯದಲ್ಲಿ ವೀಕು ಎಂಬುದನ್ನು ಬಿಟ್ಟರೆ ನರಸಿಂಗರಾವ್ ಮಿಕ್ಕೆಲ್ಲರಿಗಿಂತಲೂ ಒಂದು ಕೈ ಮುಂದೆ. ಬಿ.ಕೆ. ಹರಿಪ್ರಸಾದ್ ಸಮಕಾಲೀನ. ಬದುಕಿನ ಅರ್ಧ ಆಯುಸ್ಸನ್ನು ಕಾಂಗ್ರೆಸ್ಸಿಗೆಂದೇ ಕಳೆದ ನರಸಿಂಗರಾವ್ ಎಂಥಾ ವೇಳೆಯಲ್ಲೂ ಹರಿಪ್ರಸಾದ್ ನಿಷ್ಠೆ ಬಿಡಲಿಲ್ಲ. ಹಾಗೇ ತನ್ನ ಜನಪರ ಚಿಂತನೆಯನ್ನೂ ಬಲಿಕೊಡಲಿಲ್ಲ. ನರಸಿಂಗರಾವ್ ಮನಸ್ಸು ಮಾಡಿದರೆಂದರೆ ರಾಮಚಂದ್ರಪ್ಪ ಆದಿಯಾಗಿ ಸಾಕಿಬುದ್ಧನ ತನಕ ಪ್ರತಿಯೊಬ್ಬ ಕಾಂಗ್ರೆಸ್ ಕಾರ್ಯಕರ್ತನೂ ಚಳಿ ಬಿಟ್ಟು ಪ್ರಚಾರಕ್ಕಿಳಿಯುತ್ತಾರೆ.

ಎಲ್ಲಕ್ಕೂ ಮಿಗಿಲಾಗಿ ನರಸಿಂಗರಾವ್ ಗೆಲ್ಲುವುದು ಹರಿಪ್ರಸಾದ್‌ರ ಪ್ರತಿಷ್ಠೆಯಾಗುತ್ತದೆ. ಆದರೆ ಸಮಸ್ಯೆಯಿರುವುದು ಗಂಧರ್ವ ಶ್ರೀನಿವಾಸ್ ಎಂಬ ಜೆಡಿಎಸ್ ಅಭ್ಯರ್ಥಿಯಿಂದ. ಈತ ಓಟು ಕಿತ್ತಷ್ಟೂ ಬಿಜೆಪಿಗೆ ಲಾಭ. ಬಿಜೆಪಿಯಿಂದ ಈ ಬಾರಿ ನಗರ ವಕ್ತಾರ ಕಂಪ್ಲಿ ಪ್ರಕಾಶ್ ನಿಲ್ಲುವುದು ಶತಸ್ಸಿದ್ಧ. ಕಳೆದ ಎಮ್ಮೆಲ್ಲೇ ಎಲೆಕ್ಷನ್ನಿನಲ್ಲಿ ಬಿಜೆಪಿಗಿಲ್ಲಿ ಸಾವಿರ ಓಟುಗಳ ಲೀಡು ಬಂದಿತ್ತು. ಅದೇ ಕಾರಣಕ್ಕೆ ತನಗೆ ಅನುಕೂಲವಾಗಲೆಂದೇ ಜನರಲ್ ಕ್ಯಾಟಗರಿ ಮಾಡಿಸಿಕೊಂಡ ಪ್ರಕಾಶ್ ಸಕಲಕಲಾ ಪ್ರವೀಣ ಮತ್ತು ಜಾತಿಯಲ್ಲಿ ಬ್ರಾಹ್ಮಣ. ಹೇಗಿದ್ದರೂ ತಾನೇ ಗೆದ್ದುಬಿಡುತ್ತೇನೆಂಬುದು ಆತನ ಹುನ್ನಾರ.



ನರಸಿಂಗರಾವ್


ಆದರೆ ಕಾಂಗ್ರೆಸ್ಸಿನಿಂದ ನರಸಿಂಗರಾವ್ ನಿಂತರೆಂದರೆ ಬಿಜೆಪಿಯ ಪ್ರಕಾಶ್ ಪಾಲಿನ ಬ್ರಾಹ್ಮಣ ಮತಬ್ಯಾಂಕ್ ಚೂರಾಗುತ್ತದೆ. ಬ್ರಾಹ್ಮಣರಷ್ಟೇ ಇರುವ ಒಕ್ಕಲಿಗರು, ಕುರುಬರು ಮತ್ತು ತಮಿಳರು ಆವತ್ತಿನಿಂದಲೂ ಕಾಂಗ್ರೆಸ್ಸನ್ನೇ ಬೆಂಬಲಿಸಿದ್ದಾರೆ. ಬ್ರಾಹ್ಮಣರ ನರಸಿಂಗ್‌ರಾವ್ ಅಥವಾ ಒಕ್ಕಲಿಗರ ಗಿರೀಶ್ ಪೈಕಿ ಯಾರೇ ನಿಂತರೂ ಬಿಜೆಪಿಯ ಪ್ರಕಾಶ್ ನೀರು ಕುಡಿಯಲೇಬೇಕು. ಆದರೆ ಪ್ರಕಾಶ್ ದುಡ್ಡಿನ ತಾಕತ್ತಿನ ಮುಂದೆ ಕಾಂಗ್ರೆಸ್ ತಾನೇ ಏನು ಮಾಡಲು ಸಾಧ್ಯ?

ಹಿಂದೆ ಸೇವಾಶ್ರಮವಾಗಿದ್ದ ವಾರ್ಡೀಗ ಸುಭಾಶ್ ನಗರವಾಗಿ ಪರಿಶಿಷ್ಟ ಮೀಸಲಿಗೊಳಪಟ್ಟಿದ್ದರಿಂದ ಮಾಜಿ ಕೌನ್ಸಿಲರ್ ಕಾಂಗ್ರೆಸ್ಸಿನ ಎಲ್. ಗೋವಿಂದ ರಾಜುಗೆ ಅದೃಷ್ಟ ಖುಲಾಯಿಸಿದೆ. ಬಾಂಬ್‌ನಾಗನ ಹಾವಳಿಯಿಂದಾಗಿ ರಾಜಕೀಯದ ಅಜ್ಞಾತವಾಸ ಕಂಡ ಗೋವಿಂದರಾಜು ವಿರುದ್ಧ ಬಿಜೆಪಿ ಅಭ್ಯರ್ಥಿಯಾಗ ಹೊರಟ ಮಹೇಂದ್ರ ಪ್ರಸಾದ್ ನಿನ್ನೆಮೊನ್ನೆಯ ತನಕ ಕಾಂಗ್ರೆಸ್ಸಿನಲ್ಲಿದ್ದ. ದಿನೇಶ್ ಗುಂಡೂರಾವ್ ತನ್ನನ್ನು ನಿರ್ಲಕ್ಷಿಸಿ ಮೂಲೆಗುಂಪು ಮಾಡಿದ್ದಕ್ಕೆ ಪ್ರತೀಕಾರ ಹೇಳಲು ಆತನಿಗಿದು ಸೂಕ್ತ ಸಮಯ.

ಗೋವಿಂದರಾಜು ವಿರುದ್ಧ ಕಾಂಗ್ರೆಸ್ ಟಿಕೆಟ್ಟಿಗಾಗಿ ಸೆಣಸಾಟಕ್ಕಿಳಿದ ಎ.ಎಸ್. ಮೂರ್ತಿ ಕಳೆದ ನಲವತ್ತು ವರ್ಷಗಳಿಂದ ಪಕ್ಷಕ್ಕಾಗಿ ದುಡಿದಾತ. ನಿನ್ನೆ ಮೊನ್ನೆ ಬಂದ ಗೋವಿಂದರಾಜುಗೆ ಮಣೆ ಹಾಕದಂತೆ ಮಲ್ಲೇಶ್ ಎಂಬ ಮತ್ತೊಬ್ಬ ಕಾಂಗ್ರೆಸ್ ನಾಯಕನೂ ಟಿಕೆಟ್ಟಿಗಾಗಿ ಹಠ ಹಿಡಿದಿದ್ದಾನೆ. ಕಾಂಗ್ರೆಸ್ಸಿನಿಂದ ಯಾರೇ ನಿಂತರೂ ಇಲ್ಲಿ ಬಾಂಬ್ ನಾಗನದೇ ನಿರ್ಧಾರಕ ಶಕ್ತಿ. ಇಲ್ಲಿ ನಾಗ ಬೆಂಬಲಿಸುತ್ತಿರುವುದು ಜೆಡಿಎಸ್ ಅಭ್ಯರ್ಥಿ ಮುರುಗನ್ ಆರ್ಟ್ಸ್‌ನ ಮುರುಗನ್ ಅನ್ನು.


ಈ ಮುರುಗನ್ ಬಾಂಬ್ ನಾಗನಷ್ಟೇ ಚಾಲಾಕಿ. ಕಳೆದ ಪಾಲಿಕೆ ಚುನಾವಣೆಯಲ್ಲೇ ಗೆಲುವಿನ ಸಮೀಪ ಬಂದುಬಿಟ್ಟಿದ್ದ ಮುರುಗನ್ ವಿರುದ್ಧ ಸ್ವತಃ ದಿನೇಶ್


ಎಲ್.ಗೋವಿಂದರಾಜ್



ಬಿಟಿಎಸ್ ನಾಗರಾಜ್


ಮುದ್ದಯ್ಯ


ಅಶೋಕ್ ದಾನಿ



ಪ್ರಮೋದ್


ವೆಂಕಟೇಶ್


ಪುಟ್ಟಸ್ವಾಮಿ

ರಘುನಾಥ್ ಎಂಬ ಕಾಂಗ್ರೆಸ್ ನಿಷ್ಠನ ಕಣ್ಣೀರು

ಪಕ್ಷನಿಷ್ಠೆಗೆ ಕಾಂಗ್ರೆಸ್ಸಿನಲ್ಲಿ ಎಂಥಾ ಗತಿಯಾಗುತ್ತದೆ ಎಂಬುದಕ್ಕೆ ಉದಾಹರಣೆಯಂತಿದ್ದಾರೆ ಅದು ಬಿ.ಆರ್. ರಘುನಾಥ್. ವಯಸ್ಸೀಗಾಗಲೇ ಅರವತ್ತನ್ನೂ ದಾಟಿದೆ. ಯಾವತ್ತೋ ಕೌನ್ಸಿಲರ್ ಆಗಬೇಕಿತ್ತು, ಮನಸ್ಸು ಮಾಡಿದ್ದರೆ ಹತ್ತು ವರ್ಷದ ಹಿಂದೆಯೇ ರಘುನಾಥ್ ಗಾಂಧಿನಗರಕ್ಕೆ ಶಾಸಕರಾಗುತ್ತಿದ್ದರು. ಆದರೆ ಪಕ್ಷ ನಿಷ್ಠೆಯಿದೆಯಲ್ಲ, ಅದಕ್ಕೆ ಕಟ್ಟುಬಿದ್ದು ದಯಾನಂದ್‌ರಾವ್‌ಗಾಗಿ ಎಮ್ಮೆಲ್ಲೇ ಕನಸನ್ನೂ ಅಶೋಕ್‌ದಾನಿಗಾಗಿ ಕೌನ್ಸಿಲರ್‌ಗಿರಿಯನ್ನೂ ತ್ಯಾಗ ಮಾಡಿಕೊಂಡೇ ಬಂದರು.


ರಘುನಾಥ್


1989 ರಿಂದ 2002ರತನಕ ಅಂದರೆ ನಿರಂತರ ಹನ್ನೆರಡು ವರ್ಷಗಳ ಕಾಲ ಗಾಂಧಿನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ರಘುನಾಥ್ ಅದೃಷ್ಟವೋ ಎಂಬಂತೆ ಈ ಬಾರಿ ಗಾಂಧಿನಗರ ವಾರ್ಡು ಜನರಲ್ ಕ್ಯಾಟಗರಿಗೊಳಪಟ್ಟಿದೆ. ಈ ಹಿಂದೆ ಮಹಿಳಾ ವಾರ್ಡಾಗಿದ್ದರಿಂದ ಇದೇ ರಘು ನಾಥ್ ಇತ್ಯಾದಿ ಹಿರಿಯ ಕಾಂಗ್ರೆಸ್ಸಿಗರೆಲ್ಲ ನಿಂತು ವಸಂತಕುಮಾರಿಯನ್ನು ಗೆಲ್ಲಿಸಿ ಕೊಟ್ಟರು. ಗೆದ್ದ ವಸಂತಕುಮಾರಿ ರಸ್ತೆ, ಟಾರು, ಫುಟ್‌ಪಾತ್, ಮೋರಿಯನ್ನು ಬಿಡದೇ ದೋಚಿದ್ದು ಬಿಟ್ಟರೆ ಯಾವೊಬ್ಬ ಕಾಂಗ್ರೆಸ್ ಕಾರ್ಯಕರ್ತನಿಗೂ ಅರ್ಧ ಕಪ್ ಕಾಫಿ ಕೊಟ್ಟವಳಲ್ಲ.

ಕನಿಷ್ಠ ಈ ಚುನಾವಣೆಯಲ್ಲಾದರೂ ತನಗೆ ಅವಕಾಶ ಸಿಕ್ಕೇ ಸಿಗುತ್ತದೆಯೆಂಬುದು ರಘುನಾಥ್ ನಿರೀಕ್ಷೆ. ಏಕೆಂದರೆ ಸೀನಿಯಾರಿಟಿ ಪ್ರಕಾರ ತನ್ನ ಹೆಸರೇ ಮೊದಲಿತ್ತಲ್ಲ. ಅಶೋಕ್‌ದಾನಿ ಒಂದಲ್ಲ ಎರಡು ಬಾರಿ ಕೌನ್ಸಿಲರ್ ಆಗಿದ್ದು ಮತ್ತೊಬ್ಬ ಹಳೇ ಕಾಂಗ್ರೆಸ್ ಕೇಡರ್ ಪಾಲಾಕ್ಷಯ್ಯ ಈಗಾಗಲೇ ನಾಮಿನೇಟೆಡ್ ಕೌನ್ಸಿಲರ್ ಆಗಿದ್ದರಿಂದಾಗಿ ಏನೇನೂ ಆಗದ ತನಗೆ ಅವಕಾಶ ಸಿಕ್ಕೇಸಿಗುತ್ತದೆ ಎಂಬುದು ರಘುನಾಥ್ ನಿರೀಕ್ಷೆ. ಸದ್ಯ ಪಿಸಿಸಿಗೆ ತಾನು ಸದಸ್ಯ ಬೇರೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಗುರು ಹರಿಪ್ರಸಾದ್‌ಗೆ ಗಾಂಧಿನಗರವೊಂದರಿಂದಲೇ 31 ಸಾವಿರಕ್ಕೂ ಅಧಿಕ ಮತ ಕೊಡಿಸಿದ ಸಾಧನೆಯಿತ್ತಲ್ಲ; ಕನಿಷ್ಠ ಈ ಕಾರಣಕ್ಕಾದರೂ ಪಕ್ಷ ತನ್ನ ಕೈಹಿಡಿಯುತ್ತದೆ ಎಂಬುದು ರಘು ನಿರೀಕ್ಷೆಯಾಗಿದೆ.

ಪಕ್ಷದ ವರಿಷ್ಠರನ್ನೆಲ್ಲ ಕಂಡು ದುಃಖ ತೋಡಿಕೊಂಡರು. ಇನ್ನು ಐದು ವರ್ಷಬಿಟ್ಟು ಬರುವ ಪಾಲಿಕೆ ಚುನಾವಣೆ ಹೊತ್ತಿಗೆ ತಾನು ಬದುಕಿರುತ್ತೇನೋ ಇಲ್ಲವೋ ಯಾರಿಗೆ ಗೊತ್ತು? ಹಾಗೊಮ್ಮೆ ಬದುಕಿದ್ದರೂ ಈಗಿನಂತೆ ಗಾಂಧಿನಗರ ಜನರಲ್ ಕ್ಯಾಟಗರಿಯಾಗಿರುತ್ತಾ? ಕೊಟ್ಟರೆ ಈ ಬಾರಿಯೇ ಕೊಡಿ. ಪಕ್ಷ ನಿಷ್ಠೆಗೆ ಬೆಲೆಯಿಲ್ಲ ಅನ್ನುವುದಾದರೆ ಒಂದಿಷ್ಟು ವಿಷ ಕೊಡಿ..... ಎಂಬುದು ರಘುನಾಥ್ ಅಳಲು.

ಆದರೆ ಕಾಂಗ್ರೆಸ್ ಅಧಿಪತಿಗಳಿಗಿದು ಅರ್ಥವಾಗಬೇಕಲ್ಲ. ಪಕ್ಷನಿಷ್ಠೆಗಿಂತಲೂ ನಾಯಕರ ಚಮಚಾಗಿರಿ, ಮನೆ ಚಾಕರಿ, ಮಸ್ಸಾಗಿರಿಗೇ ಬೆಲೆ ಹೆಚ್ಚು. ಹೀಗಾಗಿ ನಟರಾಜ್ ಎಂಬಾತ ತಾನೇ ದಿನೇಶ್ ಗುಂಡೂರಾಯರ ನಂಬಿಕಸ್ತ ಬಂಟನೆಂದೂ ತನಗೇ ಗಾಂಧಿನಗರದ ಟಿಕೆಟ್ಟೆಂದೂ ಹಠಕ್ಕೆ ಬಿದ್ದಿದ್ದಾನೆ. ರಘುನಾಥ್ ಹಿರಿಯನಿಗೆ ಅವಕಾಶವಾಗುವುದಾದರೆ ತ್ಯಾಗಕ್ಕೆ ತಾವೂ ಸಿದ್ಧ ಎಂದು ಅಶೋಕ್ ದಾನಿ, ಪಾಲಾಕ್ಷಯ್ಯನಂಥವರೇ ಔದಾರ್ಯ ತೋರಿರುವಾಗ ನಟರಾಜ್ ಮಾತ್ರ ಹಠಕ್ಕೆ ಬಿದ್ದಿದ್ದಾನೆ. ಅಷ್ಟಕ್ಕೂ ಈ ನಟರಾಜ್ ಗಾಂಧಿನಗರದ ಮೂಲ ನಿವಾಸಿಯಲ್ಲ, ಪಕ್ಕದ ಮಲ್ಲೇಶ್ವರದ ವಾಸಿ. ಈಗಾಗಲೇ ಕೊಳಚೆ ಮಂಡಳಿಗೆ ನಿರ್ದೇಶಕನಾಗಿ ಕಾಂಗ್ರೆಸ್ ಋಣ ಉಂಡಾಗಿದೆ. ಹೋಗಲಿ, ಎಮ್ಮೆಲ್ಲೇ ದಿನೇಶ್ ಗುಂಡೂರಾವ್‌ಗಾದರೂ

...ಂಡೂ ರಾವ್ ಫೀಲ್ಡಿಗಿಳಿದರೂ ಕಾಂಗ್ರೆಸ್ಸಿಗೂ ಸಲೀಸಲ್ಲ ...ಜೆಪಿಗೂ ಪ್ರಯೋಜನವಿಲ್ಲ.


ಹರಿಪ್ರಸಾದ್

ಚಿಕ್ಕಪೇಟೆ ವಾರ್ಡು ಬಿಜೆಪಿಯ ಮಾಜಿ ಕೌನ್ಸಿಲರ್ ರಾಮಚಂದ್ರನಿಗಾಗೇ ಜನರಲ್ ಕ್ಯಾಟಗರಿಗೊಳ ಪಟ್ಟಿರುವಂತಿದೆ. ಆ ಕಾಲದಿಂದಲೂ ಕೌನ್ಸಿಲರ್‌ಗಿರಿಯನ್ನು ...ನುಭವಿಸುತ್ತಲೇ ಬಂದ ರಾಮಚಂದ್ರನ ...ದ್ರಕೋಟೆಯಿದು. ಕಾಂಗ್ರೆಸ್ಸಿನಿಂದ ಪ್ರಮೋದ್ ...ಂಬ ಮಂತ್ರವಾದಿಯೂ ಸ್ಕೂಲ್ ಪಳನಿ ಎಂಬ ...ನ್ವೆಂಟ್ ಧಣಿಯೂ ಟಿಕೆಟ್ಟು ಕೇಳುತ್ತಿದ್ದಾರಾದರೂ ...ಾಮಚಂದ್ರನ ಮುಂದೆ ಯಾವ ಲೆಕ್ಕ?

ಹಾಗೊಮ್ಮೆ ಬಿಜೆಪಿಯ ರಾಮಚಂದ್ರನನ್ನು ...ಣಿಸಬೇಕೆಂದರೆ ಕಾಂಗ್ರೆಸ್ ಇಲ್ಲಿ ಪಟ್ಟೇಗಾರರ ಅಭ್ಯರ್ಥಿ ...ಯನ್ನು ಹಾಕಬೇಕು. ಏಕೆಂದರೆ ಇಲ್ಲಿ ಪಟ್ಟೇಗಾರರದ್ದೇ ...ಳು ಸಾವಿರದಷ್ಟು ಓಟಿದೆ. ಕಾಟನ್‌ಪೇಟೆ ಬಿಸಿಎಂ-ಎ ...ಹಿಳಾ ವಾರ್ಡಾದ್ದರಿಂದ ಇಲ್ಲಿಗೂ ಮಂತ್ರವಾದಿ ...ಮೋದ್ ತನ್ನ ಪತ್ನಿಯನ್ನು ನಿಲ್ಲಿಸಬಹುದು. ಸ್ಕೂಲ್ ...ಳನಿ ಕೂಡ ತನ್ನ ಪತ್ನಿಯನ್ನು ನಿಲ್ಲಿಸುತ್ತಾನಂತೆ. ಬಾಂಬ್ ...ಾಗ ಇಲ್ಲಿ ತನ್ನ ಮನೆ ಕೆಲಸದಾಕೆ ಸೌಂದರಿ ...ಂಬಾಕೆಯನ್ನು ನಿಲ್ಲಿಸುತ್ತಾನಂತೆ. ಬಿಜೆಪಿಯಿಂದ ಚಿತ್ರನಟ ...ಾಲೆಟ್ ಪ್ರಕಾಶ್ ತನ್ನ ತಾಯಿಯನ್ನು ನಿಲ್ಲಿಸುತ್ತಾನಂತೆ. ...ಾರೇ ನಿಂತರೂ ಕಾಸು ಬಿಚ್ಚಲೇಬೇಕು.

ಪಕ್ಕದ ಬಿನ್ನಿಪೇಟೆ ವಾರ್ಡಿನದು ವಿಚಿತ್ರ ಕತೆ. ನಿನ್ನೆ ...ೊನ್ನೆಯ ತನಕ ಸೋಮಣ್ಣನ ಕ್ಷೇತ್ರದಲ್ಲಿದ್ದ ಈ ವಾರ್ಡನ್ನು ...ಂಧಿನಗರಕ್ಕೆ ಸೇರಿಸಿದ್ದು ಮೊದಲ ದುರಂತವಾದರೆ ...ಸಿಎಂ-ಎ ಮಹಿಳಾ ಕ್ಯಾಟಗರಿಗೊಳಪಡಿಸಿದ್ದು ಎರಡನೇ ...ರಂತ. ಬಹುಶಃ ತನ್ನ ವಿರುದ್ಧ ತಿರುಗಿಬಿದ್ದ ಮಾಜಿ ...ನ್ಸಿಲರ್ ಬಿಟಿಎಸ್ ನಾಗರಾಜನನ್ನು ತುಳಿಯಲೆಂದೇ ...ೋಮಣ್ಣ ಮಾಡಿದ ಕುತಂತ್ರವಿರಬೇಕು.

ಹಾಗಂತ ಬಿಟಿಎಸ್ ನಾಗಣ್ಣ ತಲೆಬಗ್ಗಿಸಿಲ್ಲ. ಕಳೆದ ...ಲಿಕೆ ಚುನಾವಣೆಯಲ್ಲಿ ತನ್ನ ಪತ್ನಿ ಮಾದೇವಮ್ಮನನ್ನು ...ು ಸಾವಿರದಷ್ಟು ಮತಗಳಿಂದ ಗೆಲ್ಲಿಸಿಕೊಂಡ ಬಿಟಿಎಸ್ ...ಗರಾಜ್ ಬಿದ್ದ ಒಂಭತ್ತು ಸಾವಿರದಷ್ಟು ಮತಗಳಲ್ಲಿ ...ನೇ ಏಳು ಸಾವಿರ ಮತಗಿಟ್ಟಿಸಿದ್ದ. ಆ ಕಾಲದಿಂದಲೂ ...ಪಾದಿಸಿದ ಜನಬೆಂಬಲವನ್ನು ಈಗೇಕೆ ಬಿಡಬೇಕೆಂದೇ ...್ಕ ಪರಮಾಪ್ತ ಮಗಳು ಯೋಗಲಕ್ಷ್ಮಿ ಎಂಬ ಕಾಲೇಜು ...್ಯಾರ್ಥಿನಿಯನ್ನು ನಾಗಣ್ಣ ಬೆಂಬಲಿಸುತ್ತಿದ್ದಾನೆ. ಬಿಜೆಪಿ ...ಂದ ಆರ್‌ಟಿಓ ಬ್ರೋಕರ್ ಶ್ರೀನಿವಾಸ್, ಕರುಣಾಕರ್ ...ಾದವ್, ನರಸಿಂಹ ಇತ್ಯಾದಿಗಳಲ್ಲಿ ಯಾರಾದರೂ ...ಮ್ಮ ಪತ್ನಿಯರನ್ನು ನಿಲ್ಲಿಸಬಹುದು. ಜೆಡಿಎಸ್‌ನಿಂದ ...ೀಮತಿ ದೇವರಾಜ್ ಎಂಬ ಲಾಯರ್ ಪತ್ನಿ ...ಲ್ಲುವುದು ಗ್ಯಾರಂಟಿ.

ಯಾರೇ ನಿಂತರೂ ಕಳೆದ ಬಾರಿ ಏಳು ಸಾವಿರದಷ್ಟು ...ಟು ಗಿಟ್ಟಿಸಿದ ಬಿಟಿಎಸ್ ನಾಗನ ಮುಂದೆ ಸಾವಿರ ...ಥವಾ ಒಂದೂವರೆ ಸಾವಿರ ಮತಗಳಿಸಿದರೆ ಅದೇ ...ತ್ತು ಅಥವಾ ನಾಗ ಗಳಿಸಿದ ಆ ಪಾಟಿ ಓಟು ...ೋಮಣ್ಣನ ಕೈ ಚಳಕವಾಗಿದ್ದರೆ ನಾಗನೋ ...ೋಮಣ್ಣನೋ ಎಂಬುದೂ ನಿರ್ಧಾರವಾಗುತ್ತದೆ. ●

...ಮಾಣಿಕವಾಗಿ ನಿಷ್ಠನಾ ಎಂದರೆ ಅದೂ ಇಲ್ಲ. ಈತನ ...ದೆ ತಮಿಳುನಾಡಿನಲ್ಲಿ ಅಣ್ಣಾಡಿಎಂಕೆಯ ಪುಢಾರಿ! ... ಕಳೆದ ಚುನಾವಣೆಯಲ್ಲಿ ದಿನೇಶ್ ಜೊತೆಗಿದ್ದೇ ...ಚಲು ಕೊಟ್ಟಿದ್ದ ಸೀರೆ, ಡ್ರಿಂಕ್ಸು ಇತ್ಯಾದಿಗಳನ್ನೆಲ್ಲ ...ಟ್ಟು ಅದನ್ನೆಲ್ಲ ಅಪ್ಪನ ಅಣ್ಣಾಡಿಎಂಕೆ ಸ್ಪರ್ಧೆಗೆಂದು ...ಳುನಾಡಿಗೆ ಸಾಗಿಸಿದ ಇದೇ ನಟರಾಜ್ ಈಗ ...ಗ್ರೆಸ್ ಟಿಕೆಟ್ಟು ಕೇಳುತ್ತಿದ್ದಾನೆ. ಈತನ ಕಾಂಗ್ರೆಸ್ ...್ಠ ಬೆಂಗಳೂರಿಗಷ್ಟೇ. ತಮಿಳುನಾಡಿಗೆ ಕಾಲಿಟ್ಟನೆಂದರೆ ...ತನದು ಅಣ್ಣಾಡಿಎಂಕೆ!

... ಜೊತೆಗಿದ್ದೇ ಬೆನ್ನಿಗಿರಿಯುವ ಇಂಥವರ ಪರ ...ಸುವ ಬದಲು ದಿನೇಶ್ ಗುಂಡೂರಾವ್ ರಘುನಾಥ್ ...ಗೆ ನಿಲ್ಲಬೇಕಿತ್ತಲ್ಲವೆ? ದುರಂತವೆಂದರೆ ಜಾತಿಯ ...ಣ ಕ್ಕಾದರೂ ಬೆಂಬಲಿಸಬಲ್ಲ ಯಾವೊಬ್ಬ ಒಕ್ಕಲಿಗ ...ಯಕರೂ ರಘುನಾಥ ಬೆನ್ನಿಗಿಲ್ಲ. ಬೆಂಬಲಿಸಿದರೆ ಬಿ.ಕೆ. ...ಪ್ರಸಾದ್ ಬೆಂಬಲಿಸಬೇಕಷ್ಟೇ. ಯಾಕೆಂದರೆ ಪಕ್ಷ ...ಗೆ ಚೆಲಿ ಕೊಡುವ ಏಕೈಕ ಕಾಂಗ್ರೆಸ್ ನಾಯಕ ...ಇದ್ದರೆ ಅದು ಹರಿಪ್ರಸಾದ್ ಮಾತ್ರ. ●

ಪಾತಾಳ ತಲುಪಿದ 'ಪದ್ಮ' ಪ್ರಶಸ್ತಿಗಳು

'ಪದ್ಮ' ಪ್ರಶಸ್ತಿಗಳು ಮತ್ತೆ ಭರ್ಜರಿ ಸ್ಕೋರ್ ಮಾಡಿವೆ. ಈ ಸಲ ನೂರಾಮೂವತ್ತು. ಕಳೆದ ಸಲಕ್ಕಿಂತ ಮೂರು ಮಾತ್ರ ಕಡಿಮೆ.

ಭಾರತದ ಅತ್ಯುನ್ನತ ಪ್ರಶಸ್ತಿಗಳೆಂಬ ಟ್ಯಾಗ್ ಹೊಂದಿರುವ ಇವು ವರ್ಷದಿಂದ ವರ್ಷಕ್ಕೆ ತಮ್ಮ ಮೌಲ್ಯಗಳನ್ನು ಕಳೆದುಕೊಳ್ಳುತ್ತಿವೆ. ಪ್ರತಿವರ್ಷದ ಪಟ್ಟಿಯಲ್ಲಿ ಸುಮಾರು ಅರ್ಧ ಜನ ಅರ್ಹರಿದ್ದರೆ, ಉಳಿದವರು ಯಾವುದೋ ಪಕ್ಷದ ಅಥವಾ ಯಾರೋ ರಾಜಕಾರಣಿಯ ಬೆಂಬಲಿಗರಾಗಿರುತ್ತಾರೆ.

ನ್ಯೂಯಾರ್ಕಿನಲ್ಲಿ ಭಾರಿ ಪ್ರಮಾಣದ ಹೋಟೆಲ್ ನಡೆಸುವ ಎನ್‌ಆರ್‌ಐ ಸಂತಾಸಿಂಗ್‌ನಿಗೆ ಈ ಬಾರಿ ಅದ್ಯಾವ ಸೇವೆಗೆಂದು ಪದ್ಮಭೂಷಣ ನೀಡಿದ್ದಾರೊ? ಈ ಬಂಡವಾಳಶಾಹಿ ಮಹಾಶಯ, ಅಲ್ಲಿ ಒಂಭತ್ತು ಬಿಲಿಯನ್ ಡಾಲರ್‌ಗಳನ್ನು ಬ್ಯಾಂಕೊಂದಕ್ಕೆ ವಂಚಿಸಿದ ಆರೋಪ ಹೊತ್ತಿದ್ದಾನೆ. ಇತ್ತೀಚೆಗೊಮ್ಮೆ ಈತನ ಬಂಧನವಾಗಿ ಬಿಡುಗಡೆಯಾಗಿದೆ. ಈತನ ಆಯ್ಕೆಯನ್ನು ಬಿಜೆಪಿ ವಿರೋಧಿಸಿದರೂ, ವಿರೋಧ ಪಕ್ಷದ ಉಪನಾಯಕ ಗೋಪಿನಾಥ್ ಮುಂಡೆ 'ಪದ್ಮ'ಪಟ್ಟಿಯಿಂದ ಸಂತಾಸಿಂಗ್‌ನ ಹೆಸರು ಕೈಬಿಡಿ ಎಂದು ಪ್ರಧಾನಿ, ರಾಷ್ಟ್ರಪತಿಗಳಿಗೆ ಪತ್ರ ಬರೆದರೂ ವ್ಯಾಪಾರಿ 'ಸಂತ'ನಿಗೆ ಪದ್ಮಭೂಷಣ ಸಿಕ್ಕೇಬಿಟ್ಟಿದೆ.


ಥಾಪರ್

ಕರ್ನಾಟಕದ ಪೈಕಿ ಪುಟ್ಟರಾಜ ಗವಾಯಿಗಳು ಪದ್ಮವಿಭೂಷಣಕ್ಕೆ ಅರ್ಹರು. ಪದ್ಮಶ್ರೀ ಪಡೆದ ರಂಗಕರ್ಮಿ ಅರುಂಧತಿ ನಾಗ್ ಮತ್ತು ಇನ್ನಿಬ್ಬರು ವಿಜ್ಞಾನಿಗಳ ಆಯ್ಕೆ ಕೂಡಾ ಸರಿಯಾಗಿಯೇ ಇದೆ. ಆದರೆ ಈ ಬಾಲಗಂಗಾಧರನಾಥ ಸ್ವಾಮಿ ಅಂತಾ ವಿಶೇಷ ಸಾಧನೆ ಏನು ಮಾಡಿದ್ದಾರೆ? ಪಕ್ಕಾ ಜಾತಿವಾದಿಯಾಗಿರುವ ಬಾಲಗಂಗಾಧರರು ಉನ್ನತ ಶಿಕ್ಷಣವನ್ನು ವ್ಯಾಪಾರೀಕರಣಗೊಳಿಸಿದವರು. ನೂರಾರು ಎಕರೆ ಭೂಮಿಯನ್ನು 'ಒಳಗೆ' ಹಾಕಿಕೊಂಡ ಮಹಾಶಯರು. ಇಂಥವರು ಪದ್ಮವಿಭೂಷಣಕ್ಕೆ ಅರ್ಹರೇ?

ಗೋಪಿನಾಥ್ ಎಂಬ ಬೆಂಗಳೂರಿನ ವೈದ್ಯನಿಗೂ ಪದ್ಮಶ್ರೀ ಸಿಕ್ಕಿದೆ? ಈತ ಯಾರು ಗೊತ್ತೇ? ಸಿನಿಮಾ ಪತ್ರಕರ್ತೆ ತುಂಗರೇಣುಕರನ್ನು ಸಾವಿನಂಚಿಗೆ ದೂಡಿದ್ದ, ವ್ಯಂಗ್ಯ ಚಿತ್ರಕಾರ ಪಿ.ಮಹಮ್ಮದ್‌ರವರ ಪತ್ನಿ ಖತೀಜಾ ಸೇರಿದಂತೆ ಹತ್ತಾರು ಜನರನ್ನು 'ಕೊಂದ' ನರಹಂತಕ ವೈದ್ಯ (ಬಾಕ್ಸ್ ನೋಡಿ).

ಪ್ರಭುತ್ವಕ್ಕೆ ಶರಣಾದವರು?

ದೇಶದಲ್ಲಿ ವಿಶೇಷ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡಿದವರಿಗೆ, ಸಮಾಜಸೇವೆಯಲ್ಲಿ ತೊಡಗಿದವರಿಗೆ ಗೌರವಿಸಲೆಂದು ಈ ಪದ್ಮ ಪ್ರಶಸ್ತಿಗಳನ್ನು 1954 ರಲ್ಲಿ ಆರಂಭಿಸಲಾಯಿತು. 'ಭಾರತರತ್ನ'ದ ನಂತರದ ಸ್ಥಾನ ಈ ಪ್ರಶಸ್ತಿಗಳಿಗಿದೆ. ಆರಂಭವಾದ ವರ್ಷದಲ್ಲಿ 18 ಪದ್ಮಶ್ರೀ, 23 ಪದ್ಮಭೂಷಣ, 6 ಪದ್ಮವಿಭೂಷಣಗಳನ್ನಷ್ಟೇ ನೀಡಲಾಗಿತ್ತು. ಇತ್ತೀಚಿನ 20 ವರ್ಷಗಳಲ್ಲಿ 'ಪದ್ಮ' ಪ್ರಿಯರ ಸಂಖ್ಯೆ ಹೆಚ್ಚುತ್ತಿರುವುದರಿಂದ ಪದ್ಮಪ್ರಶಸ್ತಿಗಳು ಸೆಂಚುರಿ ಬಾರಿಸತೊಡಗಿವೆ. 1954 ರಿಂದ ಇಲ್ಲಿವರೆಗೆ 'ಪದ್ಮ' ಪಾತ್ರರ ಸಂಖ್ಯೆ ಎಷ್ಟು ಗೊತ್ತೆ? 2282! ಈ ಮಧ್ಯೆ 14 ಭಾರತರತ್ನಗಳ ಪೈಕಿ ಹಲವು 'ರತ್ನ'ಗಳು ವಿವಾದಕ್ಕೆ ಕಾರಣವಾಗಿವೆ.

ವಸಾಹತುಶಾಹಿ ಕಾಲದಲ್ಲಿ ಬ್ರಿಟಿಷ್ ಆಡಳಿತ ಮತ್ತು ರಾಜಪ್ರಭುತ್ವಗಳು ಕೆಲವು 'ಗಣ್ಯ'ರಿಗೆ ಪ್ರಶಸ್ತಿಗಳನ್ನು ಕೊಡುತ್ತಿದ್ದವು. ಈ 'ಗಣ್ಯ' ಮಹಾಶಯರು ವಸಾಹತುಶಾಹಿ ಮತ್ತು ಫ್ಯೂಡಲ್‌ಶಾಹಿಯ ಗುಲಾಮರಾಗಿರುತ್ತಿದ್ದರಷ್ಟೇ. ಸ್ವಾತಂತ್ರ್ಯಾನಂತರ ಇದನ್ನು ಸರಿಪಡಿಸಲು ಈ ಪದ್ಮ ಪ್ರಶಸ್ತಿಗಳನ್ನು ಸ್ಥಾಪಿಸಲಾಯಿತು. ಆದರೆ ಇವು ಕೂಡಾ ಬರುಬರುತ್ತ ರಾಜಕೀಕರಣಗೊಳ್ಳುತ್ತಾ ಹೋಗುತ್ತಿವೆ. ಪ್ರಭುತ್ವದ ದೋಷಗಳನ್ನೆಲ್ಲ ಒಪ್ಪಿಕೊಂಡವರಿಗೆ ಇವು ಆರಾಮಾಗಿ ಸಿಗುತ್ತಿವೆ.

'ಪದ್ಮ' ಪ್ರಶಸ್ತಿಗಳ ವಿಷಯದಲ್ಲಿ ಒಂದು ಮೂಲಭೂತ ಪ್ರಶ್ನೆಯಿದೆ. ವ್ಯಕ್ತಿಯೋರ್ವರು ಒಂದು ನಿರ್ದಿಷ್ಟ ಸೃಜನಶೀಲ ಪ್ರಕಾರದಲ್ಲಿ ಮಾಡಿದ ಸಾಧನೆಯ ಶ್ರೇಷ್ಠತೆಯು ಮಾನದಂಡವೋ ಅಥವಾ ದೇಶದ ಅಭಿವೃದ್ಧಿಗೆ (ವಿಜ್ಞಾನ, ವೈದ್ಯಕೀಯ ಇತ್ಯಾದಿ) ನೀಡಿದ ಕೊಡುಗೆಯೋ? ಮೊದಲನೆಯದೇ ಮಾನದಂಡವಾಗಿದ್ದರೆ, ಈ ಪ್ರಶಸ್ತಿಗಳನ್ನು ನಿರ್ಣಯಿಸುವ ಅಧಿಕಾರ ಸರಕಾರಕ್ಕಿಲ್ಲ. ಅಧಿಕಾರಿಗಳು, ವಿಜ್ಞಾನಿಗಳು, ಕಲಾವಿದರು, ರಾಜಕಾರಣಿಗಳಿರುವ ಒಂದು ಕಮಿಟಿ ಇಬ್ಬರು ಶ್ರೇಷ್ಠ ಸಂಗೀತಗಾರರ ನಡುವಿನ ಶ್ರೇಷ್ಠತೆಯನ್ನು ಅದ್ಹೇಗೆ ತುಲನೆ ಮಾಡಲು ಸಾಧ್ಯ? ಯಾರಿಗೆ ಪದ್ಮವಿಭೂಷಣ, ಯಾರಿಗೆ ಪದ್ಮಭೂಷಣ, ಯಾರಿಗೆ ಪದ್ಮಶ್ರೀ ಕೊಡಬೇಕೆಂಬುದನ್ನು ಯಾವ ಮಾನದಂಡದಲ್ಲಿ ತೀರ್ಮಾನಿಸಲಾಗುತ್ತದೆ?


ಸಂತಾಸಿಂಗ್

ಇಂತಹ ಮೂಲಭೂತ ಪ್ರಶ್ನೆಗಳನ್ನೇ ಸಂಗೀತ ದಿಗ್ಗಜ ವಿಲಾಯತ್ ಖಾನ್ ಎತ್ತಿದ್ದರು. ಆದರೆ ಅದು ಅವರ ಪ್ರತಿಸ್ಪರ್ಧಿ ರವಿಶಂಕರರ ವಿರುದ್ಧದ ಪ್ರಶ್ನೆ ಎಂಬಂತೆ ಮಾಧ್ಯಮಗಳು ಬಿಂಬಿಸಿಬಿಟ್ಟವು. 2005 ರಲ್ಲಿ ಇತಿಹಾಸಗಾರ್ತಿ ರೋಮಿಲಾ ಥಾಪರ್ ಪದ್ಮಭೂಷಣವನ್ನು ನಿರಾಕರಿಸಿದ್ದರು. "ತನ್ನ ಸಾಧನೆಯನ್ನು ತನ್ನ ಕ್ಷೇತ್ರದ ಹಿರಿಯರು, ಸಮಕಾಲೀನರು ಗುರುತಿಸಿದರೆ ಅಂತಹದನ್ನು ಮಾತ್ರ ನಾನು ಸ್ವೀಕರಿಸುತ್ತೇನೆ. ಪ್ರಭುತ್ವ ನೀಡುವ ಅಂತಹ ಗೌರವ ಸ್ವೀಕರಿಸಲು ನನಗೆ ಹಿಂಜರಿಕೆ" ಎಂತು ಥಾಪರ್ ಅರ್ಥಪೂರ್ಣವಾಗಿ ಹೇಳಿದ್ದರು. ರೋಮಿಲಾ ಥಾಪರ್ ಒಬ್ಬ ಒಳ್ಳೆಯ ಇತಿಹಾಸಗಾರ್ತಿ ಹೌದೋ ಅಲ್ಲವೋ ಎಂಬುದನ್ನು ಗುರುತಿಸುವ ಸಾಮರ್ಥ್ಯ ಪ್ರಭುತ್ವಕ್ಕಿದೆಯೆ? ಥಾಪರ್ ಪ್ರಶಸ್ತಿ ಸ್ವೀಕರಿಸಿದ್ದರೆ, ಅವರು ಪ್ರಭುತ್ವದೊಂದಿಗೆ ಕಾಂಪ್ರೊಮೈಸ್ ಆದಂತಾಗಿ, ಒಬ್ಬ ಸ್ವತಂತ್ರ ತಜ್ಞರಾಗಿ ಕೆಲಸ ಮಾಡುವುದೇ ಕಷ್ಟವಾಗುತ್ತಿತ್ತು.

ಇನ್ನು ಎರಡನೇ ಮಾನದಂಡಕ್ಕೆ ಬರೋಣ. ವ್ಯಕ್ತಿಗಳು ಅವರವರ ಕ್ಷೇತ್ರಗಳಲ್ಲಿ ಮಾಡಿದ ಸಾಧನೆ (ಉದಾ: ವೈದ್ಯಕೀಯ, ಇಂಜಿನಿಯರಿಂಗ್)ಯನ್ನು ಮಾನದಂಡವನ್ನಾಗಿ ಬಳಸುತ್ತಾರೆ ಎನ್ನುವುದಾದರೆ, ಅಂತಹ ಆಯ್ಕೆ ಮಾಡಲು ಆಯಾ ಕ್ಷೇತ್ರದ ತಜ್ಞ ಸಂಸ್ಥೆಗಳಿಗೆ ಸಾಮರ್ಥ್ಯವಿದೆಯೇ ಹೊರತು ಪ್ರಭುತ್ವ ಅಥವಾ ಸರ್ಕಾರದ ಕಮಿಟಿಗಲ್ಲ.

ಶಿಕ್ಷಣ ಮಂತ್ರಿಯಾಗಿದ್ದಾಗ ತಮಗೆ ಬಂದ 'ಭಾರತ ರತ್ನ'ವನ್ನು ಅಬ್ದುಲ್ ಕಲಾಮ್ ಆಜಾದ್ ನಿರಾಕರಿಸಿದ್ದರು. ಆದರೀಗ ಸರ್ಕಾರಿ ಸೇವೆಯಿಂದ ನಿವೃತ್ತರಾದ ಅಧಿಕಾರಿಗಳಿಗೂ 'ಪದ್ಮ' ಪ್ರಶಸ್ತಿ ನೀಡುತ್ತಿದ್ದಾರೆ. ಪ್ರಶಸ್ತಿ ಸ್ವೀಕರಿಸುವುದರಿಂದ ಪ್ರಭುತ್ವದೊಂದಿಗೆ ಹೊಂದಾಣಿಕೆಯಾದಂತಾಗಿ, ತಮಗೆ ನಿಷ್ಪಕ್ಷಪಾತವಾಗಿ ಕೆಲಸ ಮಾಡುವುದು ಕಷ್ಟಕರ ಎಂದು ಪತ್ರಕರ್ತ ನಿಖಿಲ್ ಚಕ್ರವರ್ತಿ ಮತ್ತು ಅಧಿಕಾರಿ ಕೆ. ಸುಬ್ರಮಣ್ಯಂ 'ಪದ್ಮ'ಗಳನ್ನು ನಿರಾಕರಿಸಿದ್ದರು. ಇಂದಿರಾ ಗಾಂಧಿ ಹತ್ಯೆಯ ನಂತರ ದೆಹಲಿಯಲ್ಲಿ ನಡೆದ ಸಿಖ್ಖರ ಮಾರಣಹೋಮ ವಿರೋಧಿಸಿ ಲೇಖಕ ಖುಷವಂತ್‌ಸಿಂಗ್ ಪದ್ಮಭೂಷಣವನ್ನು ವಾಪಸ್ ಮಾಡಿ ಪ್ರತಿಭಟಿಸಿದರು. 2001 ರಲ್ಲಿ ನಾಗಾ ಚಳವಳಿ ಶಾಂತಿ ಪ್ರಕ್ರಿಯೆಯಲ್ಲಿ ಭಿನ್ನಾಭಿಪ್ರಾಯ ಬಂದುದಕ್ಕೆ, ಮಣಿಪುರದ ಖ್ಯಾತ ರಂಗಕರ್ಮಿ ರತನ್ ಥಿಯಮ್ ಕೂಡಾ ಪದ್ಮಶ್ರೀಯನ್ನು ವಾಪಸ್ ಮಾಡಿದ್ದರು.

ಪ್ರಭುತ್ವದಿಂದ ದೂರ ಇದ್ದು, ಅದನ್ನು ವಿಮರ್ಶೆಗೊಳಪಡಿಸುವುದು ಪ್ರತಿ ನಾಗರಿಕನ ಕರ್ತವ್ಯ. ವ್ಯಕ್ತಿಯೋರ್ವನ ಸಾಧನೆಯ ಶ್ರೇಷ್ಠತೆಯನ್ನು ಗುರುತಿಸುವುದಕ್ಕೆ ಪ್ರಭುತ್ವ ಸೂಕ್ತ ಅಥಾರಿಟಿಯೇ ಅಲ್ಲ. ಸಂಬಂಧಿಸಿದ ಕ್ಷೇತ್ರದ ತಜ್ಞ ಸಂಸ್ಥೆಗಳು ಅದನ್ನು ಮಾಡಬೇಕೆ ಹೊರತು ಸರ್ಕಾರವಲ್ಲ. ಹೀಗೆ ನೂರಾಮೂವತ್ತು, ನೂರಾ ಐವತ್ತು ಪ್ರಶಸ್ತಿಗಳನ್ನು ಕೊಡುತ್ತ ಹೋದರೆ 'ಪದ್ಮ' ಪ್ರಶಸ್ತಿಗಳೂ ನಮ್ಮ ರಾಜ್ಯೋತ್ಸವ ಪ್ರಶಸ್ತಿ ಲೆವಲ್‌ಗೆ ಬರುತ್ತವೆ ಅಷ್ಟೇ.

● ಪಿ.ಕೆ. ಮಲ್ಲನಗೌಡರ್

ನರಹಂತಕ ವೈದ್ಯನಿಗೂ ಪದ್ಮಶ್ರೀ!

ದಂಡುಪಾಳ್ಯದ ಹಂತಕರಿಗೂ, ಈ ಗೋಪಿನಾಥ್ ಎಂಬ ವೈದ್ಯನಿಗೂ ಒಂಚೂರು ವ್ಯತ್ಯಾಸವಿಲ್ಲ. ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಜಿ ಎಂಬ ಕ್ಯಾನ್ಸರ್ ಆಸ್ಪತ್ರೆ (ಅಂಗಡಿ) ತೆರೆದಿರುವ ಈ ದುರುಳ ಹಣದಾಸೆಗಾಗಿ ರೋಗಿಗಳ ಜೀವದ ಜೊತೆ ಚೆಲ್ಲಾಟವಾಡುತ್ತಾ, ಹತ್ತಾರು ಜೀವಗಳನ್ನು ಕೊಂದು ಹಾಕಿದ್ದಾನೆ. ಈ ರಕ್ಕಸ ವೈದ್ಯನ ಪೈಶಾಚಿಕ ಆಪರೇಷನ್ ಕುರಿತು 'ಲಂಕೇಶ್' ಜನವರಿ 30, 2008ರ ಸಂಚಿಕೆಯಲ್ಲಿ ವಿವರವಾಗಿ ಬರೆದಿತ್ತು. ಇಂತಹ ದುರುಳನಿಗೆ ಪದ್ಮಶ್ರೀ ಸಿಗುತ್ತದೆಂದರೆ 'ಪದ್ಮ' ಪ್ರಶಸ್ತಿಗಳು ಮಾರಾಟಕ್ಕಿವೆ ಎಂದೇ ಅರ್ಥ...

2006ರ ಡಿಸೆಂಬರ್ ಹೊತ್ತಿಗೆ ಚಲನಚಿತ್ರ ಪತ್ರಕರ್ತೆ ತುಂಗರೇಣುಕಾರಿಗೆ ಸ್ತನದ ಕ್ಯಾನ್ಸರ್ ಪತ್ತೆಯಾಗಿದೆ. ಪ್ರಾಥಮಿಕ ಹಂತದಲ್ಲದು ಚಿಕ್ಕದೊಂದು ಗೋಲಿಗಾತ್ರದ ಗಡ್ಡೆಯಾಗಿತ್ತು. ಯಾರೇ ತಜ್ಞ ಕ್ಯಾನ್ಸರ್ ವೈದ್ಯರಾಗಿದ್ದರೂ, ಒಂದು ಸಣ್ಣ ಆಪರೇಷನ್ ಮೂಲಕ ಗಡ್ಡೆಯನ್ನು ತೆಗೆದುಹಾಕಿ ವಾಸಿ ಮಾಡುತ್ತಿದ್ದರು. ತುಂಗರೇಣುಕರಿಗೆ ಅದ್ಯಾರು ಸಲಹೆಯಿತ್ತರೋ ಏನೋ ಅವರು ಗೋಪಿ ನಾಥನ ನರಕಾಸ್ಪತ್ರೆಗೆ ಹೋಗಿಬಿಟ್ಟರು. ಸಣ್ಣ ಗಡ್ಡೆಯಿದ್ದ ಎಡಸ್ತನವನ್ನೇ ಕತ್ತರಿಸಿದ ಗೋಪಿನಾಥ ತನ್ನ ಮಿತ್ರ ಇನ್ನೊಬ್ಬ ಕೊಲೆಗಡುಕ ಡಾ.ಆನಂದನನ್ನು ಕರೆಸಿ ಕೃತಕ ಸ್ತನ ಸರ್ಜರಿ ಮಾಡಿಸಿದ. ಬೆರಳುದ್ದ ಹೊಟ್ಟೆಯನ್ನು ಓಪನ್ ಮಾಡಿ ಅಲ್ಲಿನ ಚರ್ಮವನ್ನು ಎದೆಗೆ ಕಸಿ ಮಾಡಬೇಕಿತ್ತು. ಆದರೆ ಈ ದುಷ್ಟರು ಇದೊಂದು ಭಾರೀ ಆಪರೇಷನ್ ಎಂದು ತೋರಿಸಲು ಲಕ್ಷ ಲಕ್ಷ ದೋಚಲು ಅರ್ಧ ಅಡಿ ಹೊಟ್ಟೆಯನ್ನೇ ಕುಯ್ದು ಅಲ್ಲಿನ ಚರ್ಮವನ್ನು ಎದೆಗೆ ಕಸಿ ಮಾಡಿ ಕೃತಕ ಸ್ತನ ಜೋಡಿಸಿ, ಒಂದೂವರೆ ಲಕ್ಷ ಕಿತ್ತುಕೊಂಡು ತುಂಗರೇಣುಕರನ್ನು ಮನೆಗೆ ಸಾಗಿಹಾಕಿಬಿಟ್ಟರು.



ಈ ಧನಪಿಶಾಚಿಗಳ ಆಪರೇಷನ್ ಎಷ್ಟೊಂದು ಅಧ್ವಾನವಾಗಿತ್ತೆಂದರೆ, ಮೂರು ತಿಂಗಳಿಗೆ ಪ್ಲಾಸ್ಟಿಕ್ ಸರ್ಜರಿ ಮಾಡಿದ್ದ ಕೃತಕ ಸ್ತನ ಕೊಳೆಯಲಾರಂಭಿಸಿತ್ತು. ಡಾ.ಚಂದ್ರಶೇಖರ್ ಎಂಬುವವರು ಈ ಕೊಳೆತ ಕೃತಕ ಸ್ತನವನ್ನು ಆಪರೇಷನ್ ಮಾಡಿ ತೆಗೆಯದೇ ಹೋಗಿದ್ದರೆ ತುಂಗರೇಣುಕ ಆವತ್ತೇ ಇಹಲೋಕ ತ್ಯಜಿಸಿರುತ್ತಿದ್ದರು.

ಇಲ್ಲಿ ಪ್ಲಾಸ್ಟಿಕ್ ಸರ್ಜರಿಯ ಅಗತ್ಯವೇ ಇರಲಿಲ್ಲ. ತನ್ನ ಮಿತ್ರ ಡಾ.ಆನಂದನಿಗೆ ಗಿರಾಕಿ ಒದಗಿಸಲೆಂದೆ ಡಾ.ಗೋಪಿನಾಥ್ ಈ ಅಧ್ವಾನ ಮಾಡಿದ್ದ.

'ಪ್ರಜಾವಾಣಿ'ಯ ವ್ಯಂಗ್ಯ ಚಿತ್ರಕಾರ ಪಿ.ಮಹಮ್ಮದ್‌ರ ಪತ್ನಿ ಖತೀಜಾರಿಗೂ ಪ್ಲಾಸ್ಟಿಕ್ ಸರ್ಜರಿ ಮಾಡಿ ಕೊಂದೇಬಿಟ್ಟ. ಖತೀಜಾರಿಗೆ ಬಲಕಿವಿಯ ಬಳಿ ಸಣ್ಣದೊಂದು ಗುಳ್ಳೆ ಕಾಣಿಸಿಕೊಂಡಿತ್ತು. ಆಗವರು ಮಲ್ಯ ಆಸ್ಪತ್ರೆಯಲ್ಲಿ ಪಾರ್ಟ್ ಟೈಮ್ ಕೆಲಸ ಮಾಡುವ ಇದೇ ಗೋಪಿನಾಥನನ್ನು ಕಂಡಿದ್ದಾರೆ. 'ಮಲ್ಯದಲ್ಲಾದರೆ ಲಕ್ಷಕ್ಕೂ ಅಧಿಕ ದುಡ್ಡಾಗುತ್ತದೆ. ಬನ್ನಿ ನನ್ನ ಬೆಂಗಳೂರು ಆಂಕಾಲಜಿ ಆಸ್ಪತ್ರೆಗೆ, ನಲ್ವತ್ತು ಸಾವಿರದಲ್ಲಿ ಆಪರೇಷನ್ ಸಕ್ಸಸ್' ಎಂದು ನಂಬಿಸಿದ ಗೋಪಿನಾಥ್ ಗುಳ್ಳೆ ತೆಗೆದ ನಂತರ ಇಲ್ಲೂ ಅನಗತ್ಯವಾಗಿ ಪ್ಲಾಸ್ಟಿಕ್ ಸರ್ಜರಿ ಮಾಡಿಸಿದ. ಮತ್ತದೇ ಧನದಾಹಿ ಡಾ. ಆನಂದನೇ ಆ ಪ್ಲಾಸ್ಟಿಕ್ ಸರ್ಜರಿ ಮಾಡಿದ್ದ. ಈ ಪುಣ್ಯಾತ್ಮರು ಮುಖಕ್ಕೆ ಹಾಕಿದ್ದ ತೇಪೆ ಬಿಗಿಯತೊಡಗಿ, ಉಸಿರಾಡುವುದು ಕಷ್ಟವಾದಾಗ ಖತೀಜಾ ಮತ್ತು ಪಿ.ಮಹಮ್ಮದ್ ಮತ್ತೆ ಗೋಪಿನಾಥನನ್ನು ಕಂಡರು.

ಇನ್ನೊಂದು ಆಪರೇಷನ್‌ಗೆ ಕೈ ಹಾಕಿದ ಗೋಪಿನಾಥ್ ದಿನಕ್ಕೊಂದು ಬಾಟಲಿ ರಕ್ತ ಬೇಕೆಂದ. ಅದೂ ತನ್ನ ಆಸ್ಪತ್ರೆಯಲ್ಲೇ ಕೊಳ್ಳಬೇಕೆಂದ. ಪಿ. ಮಹಮ್ಮದ್ ಬೇರೆ ಕಡೆಯಿಂದ ರಿಯಾಯಿತಿ ದರದಲ್ಲಿ ತಂದರೆ ಸಿಟ್ಟಾದ. ಹೊರಗಿನಿಂದ ತಂದ ರಕ್ತ ಕೊಡಬೇಕೋ, ಬೇಡವೋ ಎಂದು ಪರೀಕ್ಷಿಸುವುದು ವೈದ್ಯಶಾಸ್ತ್ರದ ಪ್ರಾಥಮಿಕ ಪಾಠ. ಆದರೆ ದುಷ್ಟ ಗೋಪಿನಾಥ್ ಖತೀಜಾರ ದೇಹಕ್ಕೆ ಆ ರಕ್ತವನ್ನು ಪೂರಣ ಮಾಡಿದ. ಖತೀಜಾರ ರಕ್ತಕ್ಕೂ, ಪೂರಣವಾದ ರಕ್ತಕ್ಕೂ ಮ್ಯಾಚ್ ಆಗದೆ ಖತೀಜಾರ ಕಿಡ್ನಿಯೇ ವಿಫಲಗೊಂಡಿತ್ತು. ರಕ್ತದೊತ್ತಡ ಕ್ಷೀಣಿಸುತ್ತಾ ಹೋಗಿ ಖತೀಜಾ ವಿಲಿವಿಲಿ ಒದ್ದಾಡುವಾಗ ಯಾವ ವೈದ್ಯನೂ ನೆರವಿಗೆ ಬರಲಿಲ್ಲ. ಅಪಾರ ಯಾತನೆಯಲ್ಲೇ ಖತೀಜಾ ಸಾವನ್ನಪ್ಪಿದರು.


ಹೀಗೆ ಡಾ.ಗೋಪಿನಾಥ್ ಮತ್ತು ಡಾ.ಆನಂದ್ ಎಂಬ ನರಹಂತಕ ವೈದ್ಯರಿಗೆ ಏನಿಲ್ಲವೆಂದರೂ 20ಕ್ಕೂ ಹೆಚ್ಚು ಜನ ಬಲಿಯಾಗಿದ್ದಾರೆ.

ಇಂತಹ ಕೊಲೆಗಡುಕ ಗೋಪಿನಾಥನ ಹೆಸರನ್ನು ಕೇಂದ್ರಕ್ಕೆ ಯಡಿಯೂರಪ್ಪನ ಸರ್ಕಾರ ಶಿಫಾರಸ್ಸು ಮಾಡಿದೆ. ಮೂರ್ಖ ಕೇಂದ್ರ ಸರ್ಕಾರ ಪದ್ಮಶ್ರೀ ನೀಡಿಯೇ ಬಿಟ್ಟಿದೆ. ಅಲ್ಲಿಗೆ ಪದ್ಮಶ್ರೀ ಗಬ್ಬೆದ್ದು ಹಾಳಾದಂತಾಗಿದೆ. ●

ಹೇತ್ಲಾಂಡಿ ಯಡ್ಡಿ ನರಸತ್ತ ಆಚಾರಿ!

ಕರ್ನಾಟಕದ ಜನ ಅದ್ಯಾವ ಪುಣ್ಯ ಮಾಡಿದ್ದರೋ ಏನೋ, ಅಂತೂ ಅವರಿಗೆ ಯಡಿಯೂರಪ್ಪನಂತಹ ಯಡಿಯೂರಪ್ಪ ಮುಖ್ಯಮಂತ್ರಿಯಾಗಿಯೂ, ಆಚಾರ್ಯ ನಂಥ ಆಚಾರ್ಯ ಗೃಹ ಸಚಿವನಾಗಿಯೂ ಸಿಕ್ಕಿದ್ದಾರೆ. ಮೊದಲನೆಯವನು ಹೇತ್ಲಾಂಡಿಯಂತಿದ್ದರೆ, ಎರಡನೇಯವನು ನರಸತ್ತ ನಾಮರ್ಧನಂತಿದ್ದಾನೆ.

ಕಪಿಸೈನಿಕರು ಅರ್ಥಾತ್ ಮಂಗಗಳು ಮತ್ತೆ ಬೀದಿಗಿಳಿದು ಚರ್ಚುಗಳ ಮೇಲೆ ದಾಳಿ ನಡೆಸುತ್ತಿವೆ; ಏಸುಕ್ರಿಸ್ತನ ಪ್ರತಿಮೆ, ಶಿಲುಬೆಗಳನ್ನು ನಾಶ ಮಾಡುತ್ತಿವೆ. ಅವುಗಳನ್ನು ಖುದ್ದು ಭಜರಂಗದಳ, ಶ್ರೀರಾಮಸೇನೆಯಂಥ ಹಿಂದೂ ಮತಾಂಧ ಮಂಗಗಳೇ ಮಾಡುತ್ತಿವೆ ಎಂಬುದು ಹಾಗೂ ಬಿಜೆಪಿಯೊಳಗೇ ಕೆಲವರು ಅದಕ್ಕೆ ಬೆಂಗಾವಲಾಗಿ ನಿಂತಿದ್ದಾರೆಂಬುದು ಯಡ್ಡಿಗೂ ಗೊತ್ತು ಆಚಾರಿಗೂ ಗೊತ್ತು. ಆದರೆ ಇಬ್ಬರಿಗೂ ಅದನ್ನು ನಿಗ್ರಹಿಸುವ ತಾಕತ್ತಿಲ್ಲ.



ಯಡ್ಡಿಯಂತೂ ಉಳವಿಯಲ್ಲಿ ಮಾತನಾಡುತ್ತಾ 'ಸರ್ಕಾರ ಅಭಿವೃದ್ಧಿಯ ಪಥದತ್ತ ಹೋಗುತ್ತಿದೆ. ಆದರೆ, ನಮ್ಮ ಪಕ್ಷದವರೇ ಕಾಲೆಳೆಯುತ್ತಿದ್ದಾರೆ. ನಾನು ಅವರ ಹೆಸರನ್ನು ಹೇಳುವುದಿಲ್ಲ' ಎಂದು ಬಹಿರಂಗವಾಗಿ ಹೇಳಿದ್ದಾರೆಂದರೆ ಅವರಿಗೆ ಪಕ್ಷದ ಮೇಲೆ ಎಷ್ಟೊಂದು ಹಿಡಿತ ಇದೆ ಎಂದು ಅರ್ಥವಾಗುತ್ತದೆ. ಪಕ್ಷದವರನ್ನೇ ನಿಯಂತ್ರಿಸಲಾರದ ನಾಮರ್ಧರು ಇಡೀ ರಾಜ್ಯವನ್ನು ಹೇಗೆ ಆಳಬಲ್ಲರು? ಭಜರಂಗದಳ, ಶ್ರೀರಾಮಸೇನೆಯ ಮಂಗಗಳು ಚರ್ಚುಗಳ ಮೇಲೆ ದಾಳಿ ಮಾಡಿದರೆ 'ಅದು ವಿರೋಧ ಪಕ್ಷದವರ ಪಿತೂರಿ', 'ಚಿಕ್ಕ ದಾಳಿಯನ್ನೇ ದೊಡ್ಡದು ಮಾಡಿ ಸರ್ಕಾರ ಉರುಳಿಸುವ ಯತ್ನ ನಡೆಸಲಾಗುತ್ತಿದೆ' ಎಂತೆಲ್ಲಾ ಅರಚಿಕೊಳ್ಳುತ್ತಿದ್ದಾರೆ. ತಾನು ಇಂಥ ದಾಳಿಗಳನ್ನು ಸಹಿಸುವುದಿಲ್ಲ ಎಂಬ ಫೋಜು ಕೊಡುವುದಕ್ಕಾಗಿ 'ಧಾರ್ಮಿಕ ಕ್ಷೇತ್ರಗಳ ಮೇಲೆ ದಾಳಿ ಮಾಡುವವರ ಕೈ ಕತ್ತರಿಸಿ' ಎಂದು ಭಾವಾವೇಶದಿಂದಲೂ ಕೂಗಿಕೊಳ್ಳುತ್ತಾರೆ. ಯಡ್ಡಿಯಂಥ ಕೈಲಾಗದ ಸಿಎಂ ಇದಕ್ಕಿಂತ ಹೆಚ್ಚೇನು ಮಾಡಲು ಸಾಧ್ಯ ಹೇಳಿ? ದಾಳಿ ಮಾಡಿದವರನ್ನು ಒದ್ದು ಕಂಬಿಗಳ ಹಿಂದೆ ದೂಡಿದರೆ ಸಿಎಂ ಕುರ್ಚಿಯಿಂದ ಕೆಳಗಿಳಿಯುವಂತೆ ಕೇಶವಕೃಪದಿಂದ ಆರ್ಡರ್ ಬರುತ್ತೆ! ಅತ್ತ ಸಂಘಪರಿವಾರಿಗಳನ್ನೂ ಎದುರು ಹಾಕಿಕೊಳ್ಳದೇ, ಇತ್ತ ವಿರೋಧ ಪಕ್ಷ ಮತ್ತು ಜನರ ವಿರೋಧವನ್ನೂ ಕಟ್ಟಿಕೊಳ್ಳದೇ, ಸ್ವಂತ ಬಿಜೆಪಿ ಪಕ್ಷದವರನ್ನೂ ಕಡೆಗಣಿಸದೇ ತಂತಿಯ ಮೇಲೆ ಸರ್ಕಸ್ ಮಾಡುತ್ತಾ ನಡೆಯಬೇಕಿರುವ ಹೀನಾಯ ಪರಿಸ್ಥಿತಿ ಯಡ್ಡಿಯದ್ದು. ಇಂಥ ಹೇತ್ಲಾಂಡಿ ಮುಖ್ಯಮಂತ್ರಿಯನ್ನು ಸಹಿಸಿಕೊಂಡಿರಬೇಕಾದ ದುರ್ದೈವ ಈ ನಾಡಿನ ಜನರದ್ದು.

ಇನ್ನು ಆಚಾರಿ ನೀಡುವ ಹೇಳಿಕೆಗಳನ್ನು ನೋಡಿದರೆ ಈತ ರಾಜ್ಯದ ಕಾನೂನು ಸುವ್ಯವಸ್ಥೆಯ ಮಹತ್ವಪೂರ್ಣ ಜವಾಬ್ದಾರಿ ಹೊತ್ತ ಗೃಹಮಂತ್ರಿಯೋ ಅಥವ ನರಸತ್ತ ನಾರಾಯಣನೋ ಅನ್ನುವ ಅನುಮಾನ ಬರುತ್ತದೆ. ಪ್ರಸ್ತುತ ಚರ್ಚ್ ದಾಳಿಯ ಉದಾಹರಣೆಯನ್ನೇ ತೆಗೆದುಕೊಳ್ಳಿ. ಮೊದಲು ಚರ್ಚಿನಲ್ಲಿರುವ ಹುಂಡಿ ಹಣಕ್ಕಾಗಿ ಯಾರೋ ಕಳ್ಳರು, ಕಿಡಿಗೇಡಿಗಳು ಮಾಡಿರುವ ಕೃತ್ಯ ಅಂತ ಹೇಳಿದ. ಅತ್ತ ದಾಳಿ ನಡೆಸಿದ ಶ್ರೀರಾಮ ಸೇನೆಯ ಕಪಿನಾಯಕರೇ ಖುದ್ದಾಗಿ ಟಿವಿ ಎದುರು ನಿಂತು ಆಸ್ಟ್ರೇಲಿಯದಲ್ಲಿ ಭಾರತೀಯರ ಮೇಲೆ ದಾಳಿ ಮಾಡಿದ್ದರಿಂದ ಅದಕ್ಕೆ ಪ್ರತೀಕಾರವಾಗಿ ನಾವಿಲ್ಲಿ ಚರ್ಚುಗಳ ಮೇಲೆ ದಾಳಿ ಮಾಡಿದ್ದೇವೆ ಎಂದು ಒಪ್ಪಿಕೊಂಡರೂ ಗೃಹ ಮಂತ್ರಿ ಆಚಾರಿ ಒಪ್ಪಲು ಸಿದ್ಧವಿಲ್ಲ! ರಾಜ್ಯ ಗೃಹಮಂತ್ರಿಯೊಬ್ಬ ಇಷ್ಟೊಂದು ಕೀಳುಮಟ್ಟದ ಹೇಳಿಕೆ ನೀಡುವುದಕ್ಕೆ ಧೈರ್ಯ ಮಾಡುತ್ತಾನೆಂದರೆ ಇಡೀ ರಾಜ್ಯದ ಜನತೆ ಕಿವಿಯಲ್ಲಿ ಹೂವು ಇಟ್ಟುಕೊಂಡಿದ್ದಾರೆಂದೇ ಆತ ಭಾವಿಸಿರಬೇಕು. ಹಾಗೇ ನೋಡಿದರೆ ಚರ್ಚುಗಳ ಹುಂಡಿಯಲ್ಲಿರುವ ಹಣಕ್ಕಿಂತ ಎಷ್ಟೋ ಪಾಲು ಹೆಚ್ಚು ಹಣ ದೇವಸ್ಥಾನಗಳ ಹುಂಡಿಯಲ್ಲಿರುತ್ತದೆ. ಏಕೆಂದರೆ, ಮೊದಲನೆಯದಾಗಿ ಹುಂಡಿಗೆ ದುಡ್ಡು ಹಾಕುವ ಪರಂಪರೆ ಚರ್ಚುಗಳಲ್ಲಿ ದೇವಸ್ಥಾನಗಳಲ್ಲಿದ್ದಷ್ಟು ಇಲ್ಲ. ಇಲ್ಲಿನ ಕ್ರಿಶ್ಚಿಯನ್ನರಲ್ಲಿ ಬಹುತೇಕರು ಹಿಂದೂ ಧರ್ಮದ ಅಸ್ಪೃಶ್ಯತೆ, ಜಾತೀಯತೆ, ಕಂದಾಚಾರಗಳ ಶೋಷಣೆಯನ್ನು ತಾಳಲಾರದೇ ಕ್ರಿಶ್ಚಿಯನ್ ಧರ್ಮವನ್ನು ಅಪ್ಪಿಕೊಂಡಿರುವ ದಲಿತರು ಮತ್ತು ಹಿಂದುಳಿದವರೇ ಆಗಿದ್ದಾರೆ. ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಸಮಾಜದ ಅತ್ಯಂತ ತಳಸ್ತರಕ್ಕೆ ಸೇರಿದ ಆ ಸಮುದಾಯಗಳಿಗೆ ತಾವು ತಿನ್ನುವುದಕ್ಕೆ ದುಡ್ಡಿರುವುದಿಲ್ಲ, ಇನ್ನು ಏಸುಕ್ರಿಸ್ತನ ಹುಂಡಿಗೆಲ್ಲಿಂದ ಹಾಕುತ್ತಾರೆ. ಹಾಗಂತ ಚರ್ಚುಗಳು ತೀರ ಬಡತನದಲ್ಲಿವೆ ಎಂದೇನೂ ಅಲ್ಲ, ಪಾಶ್ಚಿಮಾತ್ಯ ರಾಷ್ಟ್ರಗಳಿಂದ ಅವುಗಳಿಗೆ ಬೇಕಾದಷ್ಟು ದುಡ್ಡು ಹರಿದುಬರುತ್ತದೆ. ಆದರೆ, ಅದು ನೇರವಾಗಿ ಬ್ಯಾಂಕ್ ಅಕೌಂಟಿಗೆ ಹೋಗುತ್ತದೆಯೇ ಹೊರತು ಚರ್ಚುಗಳಲ್ಲಿನ ಹುಂಡಿಗೆ ಬಂದು ಬೀಳುವುದಿಲ್ಲ. ಹೀಗಾಗಿ ಹುಂಡಿ ದುಡ್ಡು ಕಳ್ಳತನ ಮಾಡಬೇಕೆಂಬ ಇಚ್ಛೆಯುಳ್ಳವರು ದೇವಸ್ಥಾನಗಳಿಗೆ ಕನ್ನ ಹಾಕುತ್ತಾರೆಯೇ ಹೊರತು ಚರ್ಚುಗಳಿಗಲ್ಲ. ನಮ್ಮ ದೇಶದಲ್ಲಿ ಕಳ್ಳರು ಎಲ್ಲಿ ಕಳ್ಳತನ ಮಾಡಿದರೆ ಜಾಸ್ತಿ ದುಡ್ಡು ಸಿಗುತ್ತದೆ ಎಂಬುದೂ ಅರ್ಥವಾಗದಷ್ಟು ದಡ್ಡರೇನಲ್ಲ. ಹಾಗಾಗಿ, ಆಚಾರಿ ನಮ್ಮ ಕಿವಿಗಳಿಗೆ ಹೂವು ಇಡುವುದನ್ನು ನಿಲ್ಲಿಸಿದರೆ ಒಳ್ಳೆಯದು.



ಇದಾದ ಎರಡೇ ದಿನಕ್ಕೆ ಇದೇ ಗೃಹಮಂತ್ರಿ ಆಚಾರಿ ಇನ್ನೊಂದು ಹೇಳಿಕೆಯನ್ನು ನೀಡಿ ಇದನ್ನೆಲ್ಲಾ ದಾಳಿ ಎನ್ನಲಾಗದು ಎಂದಿದ್ದಾರೆ. ಚರ್ಚುಗಳ ಮುಂದೆ ಏಸುಕ್ರಿಸ್ತ ಶಿಲುಬೆಗಳ ಪ್ರತಿಮೆಗಳನ್ನು ನಾಶಪಡಿಸಲಾಗಿದೆಯಷ್ಟೆ, ಅದನ್ನೇ ಚರ್ಚುಗಳ ಮೇಲಿನ ದಾಳಿ ಎಂದರೆ ಹೇಗೆ ಎಂದು ನಮ್ಮನ್ನೇ ಪ್ರಶ್ನಿಸುತ್ತಾರೆ! ಯಾರಾದರೂ ಯಾವುದಾದರೂ ಗಣಪತಿ ದೇವಸ್ಥಾನಕ್ಕೆ ನುಗ್ಗಿ ಗಣಪತಿಯ ಕೈಯನ್ನು ಕತ್ತರಿಸಿದ್ದರೆ ಆಚಾರಿ ಇದೇ ರೀತಿ ಪ್ರತಿಕ್ರಿಯಿಸುತ್ತಿದ್ದರಾ? ಇದನ್ನು ದಾಳಿ ಎನ್ನಲಾಗುವುದಿಲ್ಲ ಎಂತಾದರೆ ದಾಳಿ ಎನ್ನುವುದಕ್ಕೆ ಹತ್ತಾರು ಜನ ಸಾಯಲೇ ಬೇಕಾ?

ಆಚಾರಿಯ ಭಂಡತನ ನೋಡಿ. ರಾಜ್ಯದಲ್ಲಿರುವ ಎಲ್ಲಾ ದೇವಸ್ಥಾನಗಳಿಗೂ, ಚರ್ಚುಗಳಿಗೂ, ಮಸೀದಿಗಳಿಗೂ ಭದ್ರತೆ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಘೋಷಿಸಿದ್ದಾರೆ. ರಾಜ್ಯದಲ್ಲಿ 43 ಸಾವಿರ ದೇವಾಲಯಗಳಿವೆ, ಮೂರು ಸಾವಿರಕ್ಕೂ ಹೆಚ್ಚು ಚರ್ಚ್‌ಗಳಿವೆ, ಸಾಕಷ್ಟು ಸಂಖ್ಯೆಯಲ್ಲಿ ಮಸೀದಿಗಳಿವೆ, ನಮ್ಮಲ್ಲಿರುವುದು 75 ಸಾವಿರದಿಂದ ಒಂದು ಲಕ್ಷದಷ್ಟು ಪೊಲೀಸರು ಮಾತ್ರ ಇದ್ದಾರೆ, ಎಲ್ಲರಿಗೂ ರಕ್ಷಣೆ ಎಲ್ಲಿಂದ ಕೊಡಲಿ ಎಂದು ಕೇಳಿದ್ದಾರೆ. ನಿಜ, ಬೇರೆಲ್ಲಾ ಕಾನೂನು ಸುವ್ಯವಸ್ಥೆಯ ಕೆಲಸವನ್ನು ಬದಿಗಿಟ್ಟು ಇರೋ ಎಲ್ಲಾ ಪೊಲೀಸರನ್ನು ಈ ಧಾರ್ಮಿಕ ಕ್ಷೇತ್ರಗಳ ಭದ್ರತೆಗೆ ನಿಯೋಜಿಸಿದರೂ ಸಾಕಾಗುವುದಿಲ್ಲ, ಅದು ಪರಿಹಾರವೂ ಅಲ್ಲ. ಚರ್ಚಿಗೋ, ಮಸೀದಿಗೋ, ಮಂದಿರಕ್ಕೂ ನಾಲ್ಕು ಜನ ಪೊಲೀ ಸರನ್ನು ಹಾಕಿ ನಾಲ್ಕು ದಿನ ಕಾವಲು ಕಾಯಿಸಿದಾಕ್ಷಣ ಸಮಸ್ಯೆ ಬಗೆಹರಿ ಯುವುದೂ ಇಲ್ಲ. ಅದು ಸಮಸ್ಯೆ ಯನ್ನು ಪರಿಹರಿಸುವ ವಿಧಾನವೂ ಅಲ್ಲ. ನಮ್ಮ ಆಚಾರಿ ಎಷ್ಟು ಸಾವಿರ ದೇವಾಲಯಗಳಿವೆ, ಎಷ್ಟು ಸಾವಿರ ಮಸೀದಿ-ಚರ್ಚುಗಳಿವೆ, ನಮ್ಮಲ್ಲಿ ರುವ ಪೊಲೀಸರೆಷ್ಟು ಎಂದು ಲೆಕ್ಕಾ ಹಾಕುವ ಬದಲು ರಾಜ್ಯದಲ್ಲಿ ಭಜ ರಂಗದಳ, ಶ್ರೀರಾಮಸೇನೆಯ ಮಂದ ರೆಷ್ಟು ಇದ್ದಾರೆ, ಅವರಲ್ಲಿ ದಾಳಿಮಾಡ ಬಲ್ಲ, ದಾಳಿಗೆ ನೇತೃತ್ವ ಕೊಡಬಲ್ಲ ನಾಯಕ ಮಂಗಗಳೆಷ್ಟು, ಅವರನ್ನು ನಿಗ್ರಹಿಸುವುದಕ್ಕೆ ಎಷ್ಟು ಪೊಲೀಸರ ಅವಶ್ಯಕತೆಯಿದೆ, ಅವರನ್ನು ಕೂಡಿಡುವುದಕ್ಕೆ ಎಷ್ಟು ಜೈಲುಗಳ ಆವಶ್ಯಕತೆಯಿದೆ ಎಂದು ಲೆಕ್ಕಾ ಹಾಕಿದ್ದರೆ ಸಮಸ್ಯೆಗೆ ಸರಳ ಪರಿಹಾರ ಸಿಗುತ್ತಿತ್ತು; ಆದರೆ, ಆ ರೀತಿ ಲೆಕ್ಕ ಹಾಕುವುದಕ್ಕೆ ಧೈರ್ಯ ಬೇಕು; ಅದನ್ನು ಕಾರ್ಯಗತ ಗೊಳಿಸುವುದಕ್ಕೆ ತಾಕತ್ತು ಬೇಕು. ಮೊದಲೇ ಕೇಶವ ಕೃಪಾದ ಕೃಪಾಕಟಾಕ್ಷದಿಂದ ಅಚಾನಕ್ಕಾಗಿ ಗೃಹಮಂತ್ರಿಯ ಕುರ್ಚಿಯಲ್ಲಿ ಪ್ರತ್ಯಕ್ಷನಾದವನು ಈ ಆಚಾರಿ. ಆತ ಈ ರೀತಿಯೇನಾದರೂ ಲೆಕ್ಕಾ ಹಾಕುತ್ತಿರುವ ವಿಚಾರದ ವಾಸನೆಯೂ ಕೇಶವಕೃಪಾ ಬಡಿದರೆ ಅಂದೇ ಆತ ಕುರ್ಚಿಯಿಂದ ದೊಪ್ಪನೆ ನೆಲಕ್ಕೆ ಬೀಳುವುದು ಗ್ಯಾರಂಟಿ. ಹಾಗಾಗಿ, ಸಾಧ್ಯವಾದಷ್ಟು ದಿನ ಮೊದಲಿನ ರೀತಿಯಲ್ಲೇ ಲೆಕ್ಕಾ ಹಾಕುತ್ತಾ, ರಾಜ್ಯದ ಜನರ ಕಿವಿಗಳಲ್ಲಿ ಹೂವು ಇಡುತ್ತಾ ಕಾಲ ತಳ್ಳುತ್ತಿದ್ದಾನೆ.

ನಿಜ ಹೇಳಬೇಕೆಂದರೆ ಇಂಥ ಹೇತ್ಲಾಂಡಿ ಮುಖ್ಯಮಂತ್ರಿ ಹಾಗೂ ನಾಮರ್ಧ ಗೃಹಮಂತ್ರಿಯನ್ನು ಪಡೆದಿರುವ ಕರ್ನಾಟಕದ ಜನ ನಿಜಕ್ಕೂ ಪುಣ್ಯವಂತರು.

ಉತ್ತರ ಕನ್ನಡ: ಕಪಿ ಸೇನೆಯಿಂದ ಚರ್ಚ್ ದಾಳಿ








ಭಟ್ಕಳಕ್ಕೆ ಬೆಂಕಿ ಇಕ್ಕಿ ಮತ್ತೆ ಮೈ ಕಾಯಿಸಿಕೊಳ್ಳಲು ಸಂಘ ಪರಿವಾರದ ಸೈತಾನರು ಸಿದ್ಧರಾಗಿದ್ದಾರಾ? ಇಂಥದೊಂದು ಅನುಮಾನ-ಆತಂಕವನ್ನು ಸಂಸದ ಅನಂತ್ಮಾಣಿಯ ಹರಾಮಿ ಹಿಂಬಾಲಕರು ಮೇಲಿಂದ ಮೇಲೆ ಮಾಡುತ್ತಿರುವ ಮತಾಂಧ ಮಸಲತ್ತು ಹುಟ್ಟುಹಾಕಿದೆ....

ಸಂಸದ ಅನಂತ್ಮಾಣಿ ಯಾನೆ ಅನಂತಕುಮಾರ್ ಹೆಗಡೆ ಭಟ್ಕಳದಲ್ಲಿ ಕಳೆದುಕೊಂಡಿರುವ ಕಿಮ್ಮತ್ತನ್ನು ಮತ್ತೆ ಗಳಿಸಿಕೊಳ್ಳಲು ಅನಾಹುತಕಾರಿ ಕಿತಾಪತಿಗೆ ಕೈಹಾಕಿದ್ದಾರೆ. ಹೀಗಾಗಿ ಭಟ್ಕಳದಲ್ಲಿ ಒಂದಿಲ್ಲೊಂದು ಕೋಮು ಕಿರಿಕಿರಿ ಆಗುತ್ತಿದೆ. 1990 ರ ದಶಕದಲ್ಲಿ ಭಟ್ಕಳ ತನ್ನ 'ಕರ್ಮಭೂಮಿ' ಮಾಡಿಕೊಂಡಿದ್ದ ಅನಂತ್ಮಾಣಿ ಅಲ್ಲಾಗ ಹಿಂದೂ ಹೀರೋ ಆಗಿಹೋಗಿದ್ದ. ಕೋಮು ಪಾತಕದ ಫಲದಿಂದಾತ ಸಂಸತ್ತಿನಂಥ ಅತ್ಯುನ್ನತ-ಪವಿತ್ರ ಜನತಾಂತ್ರಿಕ ಸಂಸ್ಥೆಯ ಸದಸ್ಯನೂ ಆಗಿಹೋದ. ಇದು ಪ್ರಜಾಪ್ರಭುತ್ವದ ಪವಾಡ, ಬಿಡಿ. ಆದರೆ 2000 ದಶಕದಲ್ಲಿ ಅನಂತ್ಮಾಣಿಯ ಬಣ್ಣ ಬಯಲಾಗಿ ಭಟ್ಕಳಿಗರು ಛೀ.... ಥೂ.... ಅನ್ನತೊಡಗಿದರು.

ಅನಂತ್ಮಾಣಿ ಅನಾಹುತ

ಇದೇ ಹೊತ್ತಿಗೆ ಗುರು-ಶಿಷ್ಯರಂತಿದ್ದ ಅನಂತ್ಮಾಣಿ ಮತ್ತು ಮಾಜಿ ಮಂತ್ರಿ ಶಿವಾನಂದ ನಾಯ್ಕ ಕಾಗೆಗಳಂತೆ ಕಚ್ಚಾಡಲಾರಂಭಿಸಿದ್ದರು. ಹೀಗಾಗಿ ಅನಂತ್ಮಾಣಿಗೆ ಭಟ್ಕಳದಲ್ಲಿ ಮೂರು ಕಾಸಿನ ಬೆಲೆ ಇಲ್ಲದಂತಾಗಿಹೋಯ್ತು. ಭಟ್ಕಳದಲ್ಲೇ ಆತನಿಗೆ ಅತೀ ಕಡಿಮೆ ಮತ ಬೀಳಹತ್ತಿತ್ತು. ಈಗ ಈ ನಾಲಾಯಕ್ ಸಂಸದ ಭಟ್ಕಳದಲ್ಲಿ ಅಳಿದಿರುವ ವರ್ಚಸ್ಸನ್ನು ಕೋಮು ಕರ್ಮಕಾಂಡದಿಂದ ವೃದ್ಧಿಸಿಕೊಳ್ಳಲು ಪೂರ್ವಾಶ್ರಮದ ಕಸರತ್ತು ಶುರು ಹಚ್ಚಿಕೊಂಡಿದ್ದಾನೆ. ಹಿಂದೂತ್ವದ ಅಮಲೇರಿಸಿ ಇಟ್ಟುಕೊಂಡಿರುವ ಒಂದಿಷ್ಟು ಹುಂಬ ಹುಡುಗರ ಕೈಗೆ ಒಮ್ಮೆ ಭಜರಂಗದಳ, ಮತ್ತೊಮ್ಮೆ ಹಿಂಜಾವೇ, ಇನ್ನೊಮ್ಮೆ ಬಿಜೆಪಿ, ಕಡೆಗೊಮ್ಮೆ ರಾಮ ಸೇನೆಯ ಬ್ಯಾನರ್ ಕೊಟ್ಟು ಭಾವನಾತ್ಮಕ ಭಾನ್ಗಡಿ ಮಾಡಿಸಿ ಅನಂತ್ಮಾಣಿ ಬೇಳೆ ಬೇಯಿಸಿಕೊಳ್ಳುತ್ತಿದ್ದಾನೆ!!

ಮುಸ್ಲಿಮ್, ಕ್ರಿಶ್ಚಿಯನ್ನರನ್ನು ಧಾರ್ಮಿಕ-ಸಾಮಾಜಿಕವಾಗಿ ಕೆಣಕಿ ಕೇಕೆ ಹಾಕುವುದು, ಕಾಸು ಮಾಡುವುದೇ ಅನಂತ್ಮಾಣಿಯ ಅಡ್ಡ ಕಸುಬಿಗಳ ಠೋಳಿಯ "ನಿತ್ಯ ಕರ್ಮ"! ಅನಂತ್ಮಾಣಿಯಿಂದ ಹಿಂದೂತ್ವದ ದೀಕ್ಷೆ ಪಡೆದು ನೋಟೆಡ್ ನಟೋರಿಯಸ್ ಅನ್ನಿಸಿಕೊಂಡಿರುವ ಹಿಂಜಾವೇಯ ಉತ್ತರ ಪ್ರಾಂತ್ಯ ಸಂಚಾಲಕ ಗೋವಿಂದ ನಾಯ್ಕ, ಜಿಲ್ಲಾ ಸಂಚಾಲಕ ದಿನೇಶ್ ನಾಯ್ಕ ಮತ್ತು ತಾಲ್ಲೂಕಾ ಸಂಚಾಲಕ ವಿವೇಕ್ ಭಟ್ಟ ಬಾಸ್‌ನ ಸ್ಕೆಚ್‌ನಂತೆ ಅಮಾಯಕ ಹಿಂದೂ ಹುಡುಗರನ್ನು ಅನ್ಯಧರ್ಮೀಯರ ಮೇಲೆ ಛೂಬಿಟ್ಟು ಚಂದ ನೋಡುತ್ತಿದ್ದಾರೆ; ನಂತರ ಡೀಲು ಕುದುರಿಸಿ ದುಡ್ಡೂ ಮಾಡುತ್ತಿದ್ದಾರೆ!



ಈ ಖತರ್‌ನಾಕ್ ತ್ರಿಮೂರ್ತಿಗಳು ಇತ್ತೀಚಿನ ದಿನಗಳಲ್ಲಿ ಗುರುವಿನಂತೆ ತೆರೆಮರೆಯಲ್ಲಿ ಕುಳಿತು ಸೂತ್ರ ಆಡಿಸುತ್ತಿದ್ದಾರೆ. ಹಿಂದೂತ್ವದ ಮದದಿಂದ ಸೈಕೋನಂತಾಡುವ ಚಿಂತನಿಯ ಶಂಕರ ನಾಯ್ಕನೆಂಬ ಹುಡುಗನೇ ಈಗಿವರ "ಅಸ್ತ್ರ"ವಾಗಿದ್ದಾನೆ. ಒಂದಿಷ್ಟು ಕಾಲೇಜು ಹುಡುಗರ ಹಾದಿ ತಪ್ಪಿಸಿ ತಂಡ ಕಟ್ಟಿಕೊಂಡಿರುವ ಈ ಪುಂಡ ಶಂಕರ ನಾಯ್ಕ ಪ್ರಸಿದ್ಧಿಗೆ ಏನು ಮಾಡಲಿಕ್ಕೂ ಹೇಸುವುದಿಲ್ಲ. ಹಿಂದೂತ್ವದ 'ರಕ್ಷಣೆ'ಗೆ ಈತ ಹಿಂದೂಗೇ ಬಡಿಯುತ್ತಾನೆ; ಮುಸ್ಲಿಮನಿಗೆ ಕಡಿಯುತ್ತಾನೆ. ಹಿಂದೂ-ಮುಸ್ಲಿಮ್ ಪುರುಷರು ಮಾತಾಡಿಕೊಂಡರೂ ಈ ಪಾಪಿ ಪೋರನಿಗೆ ಸಹಿಸಲಾಗುವುದಿಲ್ಲ. ಹಿಂದೂ ಹುಡುಗಿ ಮುಸ್ಲಿಂ ಹುಡುಗ ಮಾತಾಡಿದರಂತೂ ಕತೆ ಮುಗಿದೇಹೋಯ್ತು!


ಕೋಮು ಕಲಹದಿಂದ ಈ ಶಂಕರ ನಾಯ್ಕ ಅದೆಂಥ ಪಿರ್ಕೀಸ್ ಆಗಿದ್ದಾನೆಂದರೆ, ಹಿಂದೂವೇ ತನ್ನ ಆಕಳನ್ನು ಮನೆಗೆ ಒಡಿಸಿಕೊಂಡು ಹೋಗುತ್ತಿದ್ದರೂ ಅದವನಿಗೆ ಜಾನುವಾರು ಕಳ್ಳ ಸಾಗಾಣಿಕೆಯಂತೆ ಭಾಸವಾಗುತ್ತದೆ. ಆಗ ಆತ ಹಿಂದೂಗೆ ಥಳಿಸಿ ಗೋ-ರಕ್ಷಣೆಗೆ ಇಳಿಯುತ್ತಾನೆ! ಮುಸ್ಲಿಮ್ ಒಬ್ಬನಿಗೆ ಕಡಿದು, ಸ್ಕೂಟರ್‌ಗಳಿಗೆ ಬೆಂಕಿ ಹಾಕಿ, ಕೋಮು ದೊಂಬಿ ನಡೆಸಿ ಕೇಸುಗಳ ಮೇಲೆ ಕೇಸು ಮೈಮೇಲೆಳೆದುಕೊಂಡಿರುವ ಶಂಕರ ನಾಯ್ಕ ಹೀಗೇ ಹಿಂದೂತ್ವದ ಹೆಸರಲ್ಲಿ ಪಾತಕ ಮಾಡಿದರೆ ಅನಂತ್ಮಾಣಿ ಮತ್ತು ಶಿವಾನಂದ ನಾಯ್ಕಗಳಿಗೆ ದಿವಂಗತ ಚಿತ್ತರಂಜನ್‌ರಂತೆ ತಾವು "ಲಾಭದಾಯಕ ಹುದ್ದೆಯ" ಹಿಂದೂ ಲೀಡರ್ ಆಗಿರಬಹುದೆಂಬ ತೆವಲು!!

ಸೈಕೋಪಾತ್ ಶಂಕರ್!

ಸಾಕ್ಷಾತ್ ಸಂಸದ ಅನಂತ್ಮಾಣಿಯ ಕೃಪಾಶೀರ್ವಾದ ಇರುವುದರಿಂದ ಶಂಕರ ನಾಯ್ಕ ಸೈತಾನನಂತಾಗಿ ಹೋಗಿದ್ದಾನೆ! ಪೊಲೀಸ್ ಸ್ಟೇಷನ್‌ನಲ್ಲಿ ಈ ಭಾನ್ಗಡಿ ಭೂಪನಿಗೆ ರಾಜಮರ್ಯಾದೆ! ಜಾನುವಾರು ಪ್ರಕರಣದಲ್ಲೀತನೇ ಮರ್ಯಾದಸ್ಥ ಮಧ್ಯಸ್ಥದಾರ. ಪೊಲೀಸರೆದುರೇ ಈ ಹಿಂದೂ ಹರಾಮಿ ಸಾಬಿಯೊಬ್ಬನ ಕೊರಳ ಪಟ್ಟಿ ಹಿಡಿದು ರಮ್ಜಾಪೇಟೆಯಲ್ಲಿ ಬಾಡಿಗೆ

▶▶▶ 12

ಮಂಗಳೂರು ವಿ.ವಿ. ಉಮೇಶ್ಚಂದ್ರ ಪ್ರಕರಣ ಮತ್ತು ಹಿಂದೂತ್ವದ ನಂಜು



ಉಮೇಶ್ಚಂದ್ರ

ಉಮೇಶ್ಚಂದ್ರರ ವಿರುದ್ಧದ ಪ್ರತಿಭಟನೆಗೆ ಫ್ಯಾಸಿಸ್ಟ್ ವಿದ್ಯಾರ್ಥಿ ಸಂಘಟನೆ ನೀಡುತ್ತಿರುವ ಕಾರಣ ಅವರು ತರಗತಿಯಲ್ಲಿ ಜಾತಿವಾದವನ್ನು ಬೋಧಿಸುತ್ತಾರೆ, ವಿದ್ಯಾರ್ಥಿಗಳಿಗೆ ಸರಿಯಾಗಿ ಹಾಜರಿ ನೀಡುವುದಿಲ್ಲ, ಅಸೈನ್‌ಮೆಂಟ್‌ಗಳನ್ನು ತಿರಸ್ಕರಿಸುತ್ತಾರೆ, ಇತ್ಯಾದಿಗಳು. ಆದರೆ ಈ ಆರೋಪಗಳಲ್ಲಿ ಎಷ್ಟು ಹುರುಳಿದೆಯೆಂದು ನೋಡುವುದಕ್ಕಿಂತಲೂ ಮುಂಚೆ ಇದರ ಹಿಂದೆ ಕೆಲಸ ಮಾಡಿರುವ ಕಾಣದ ಕೈಗಳು ಯಾವುವು ಮತ್ತು ಯಾಕೆ ಎಂಬುವುದನ್ನು ತಿಳಿಯಬೇಕಾದುದು ಬಹು ಅಗತ್ಯ.

● ಇಸ್ಮತ್ ಪಜೀರ್

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರಗತಿಪರ [illegible]ರಧಾರೆಯ ಉಪನ್ಯಾಸಕರ ವಿರುದ್ಧ ಫ್ಯಾಸಿಸ್ಟ್ ವಿದ್ಯಾರ್ಥಿ [illegible]ಟನೆಗಳು ಪ್ರತಿಭಟನೆ ನಡೆಸಿರುವುದು ಇದೇ [illegible]ದಲೇನಲ್ಲ. ಮಂಗಳೂರು ವಿ.ವಿ. ಕಾಲೇಜಿನ ಆಂಗ್ಲ [illegible]ನ್ಯಾಸಕ ಪಟ್ಟಾಭಿರಾಮ ಸೋಮಯಾಜಿಯವರ ವಿರುದ್ಧ [illegible]ತಹ ಫ್ಯಾಸ್ಟ್ ಷಡ್ಯಂತ್ರದ ಮುಂದುವರಿದ ಭಾಗವೇ [illegible]ಗ ಉಮೇಶ್ಚಂದ್ರರ ವಿರುದ್ಧ ನಡೆಯುತ್ತಿರುವ ಪ್ರತಿಭಟನೆ. [illegible]ರನೋಟಕ್ಕೆ ಪಟ್ಟಾಭಿ ಮತ್ತು ಉಮೇಶ್ಚಂದ್ರರ ವಿರುದ್ಧದ [illegible]ಭಟನೆಯ ಕಾರಣಗಳು ಬೇರೆಬೇರೆಯೇ ಆಗಿದ್ದರೂ [illegible]ದಲ್ಲಿ ಇವೆರಡೂ ಪ್ರತಿಭಟನೆಗಳು ಫ್ಯಾಸಿಸಂನ ನಂಜಿನ [illegible]ಯೆಯೇ ಆಗಿದೆ.

ಉಮೇಶ್ಚಂದ್ರರ ವಿರುದ್ಧದ ಪ್ರತಿಭಟನೆಗೆ ಫ್ಯಾಸಿಸ್ಟ್ [illegible]ರ್ಥಿ ಸಂಘಟನೆ ನೀಡುತ್ತಿರುವ ಕಾರಣ ಅವರು [illegible]ತಿಯಲ್ಲಿ ಜಾತಿವಾದವನ್ನು ಬೋಧಿಸುತ್ತಾರೆ, [illegible]ರ್ಥಿಗಳಿಗೆ ಸರಿಯಾಗಿ ಹಾಜರಿ ನೀಡುವುದಿಲ್ಲ, [illegible]ನ್‌ಮೆಂಟ್‌ಗಳನ್ನು ತಿರಸ್ಕರಿಸುತ್ತಾರೆ, ಇತ್ಯಾದಿಗಳು. [illegible] ಈ ಆರೋಪಗಳಲ್ಲಿ ಎಷ್ಟು ಹುರುಳಿದೆಯೆಂದು [illegible]ಡುವುದಕ್ಕಿಂತಲೂ ಮುಂಚೆ ಇದರ ಹಿಂದೆ ಕೆಲಸ [illegible]ರುವ ಕಾಣದ ಕೈಗಳು ಯಾವುವು ಮತ್ತು ಯಾಕೆ [illegible]ಬುವುದನ್ನು ತಿಳಿಯಬೇಕಾದುದು ಬಹು ಅಗತ್ಯ.

[illegible]ಖರ ಅಂಬೇಡ್ಕರ್‌ವಾದಿಯಾದ ಉಮೇಶ್ಚಂದ್ರರ [illegible]ರಧಾರೆಗಳು ಬ್ರಾಹ್ಮಣ್ಯವನ್ನೇ ಉಸಿರಾಡುತ್ತಿರುವ [illegible]ನ್ಯಾಸಕರಿಗೆ, ಬ್ರಾಹ್ಮಣಶಾಹಿಗಳ ಬಾಲಬಡುಕರಾದ [illegible]ು ಕೆಲವು ಉನ್ನತ ಉದ್ಯೋಗಸ್ಥರಿಗೆ, ಹಿಂದೂತ್ವದ [illegible]ನ್ನು ಲೇಖನಿಯಲ್ಲಿ ಮಸಿಯಾಗಿ ತುಂಬಿಸಿಕೊಂಡು [illegible]ಸುವ ಕೆಲವು ಮಾಧ್ಯಮ ಪ್ರಭೃತಿಗಳಿಗೆ ಬಹಳಷ್ಟು [illegible]ಯುಂಟುಮಾಡಿವೆ. ಕಳೆದ ಮಾರ್ಚ್‌ನಲ್ಲಿ ವಿ.ವಿ.ಯ [illegible]ೋದ್ಯಮ ವಿಭಾಗದಲ್ಲಿ ನಡೆಯಲಿದ್ದ ಕಾರ್ಯಾಗಾರಕ್ಕೆ [illegible]ು ಕರ್ನಾಟಕದ ವಿಶ್ವೇಶ್ವರ ಭಟ್ಟರನ್ನು ಕರೆಸಿ ಉಪನ್ಯಾಸ [illegible]ಸುವ ಪ್ರಸ್ತಾಪವನ್ನು ಹಿರಿಯ ಉಪನ್ಯಾಸಕ ಕೆ.ವಿ. [illegible]ಾಜ್ ಮತ್ತು ವಿಭಾಗ ಮುಖ್ಯಸ್ಥ ಜೆ.ಪಿ. ಶಿವರಾಂ [illegible]ುಲ್ಲಿ ಮಾಡಿದ್ದರು. ಅದನ್ನು ಖಂಡತುಂಡವಾಗಿ [illegible]ೀಧಿಸಿದ ಉಮೇಶ್ಚಂದ್ರರು ಎನ್.ರಾಂ ಅಥವಾ ಬಿ.ವಿ. [illegible]ರಾಂರನ್ನು ಕರೆಸುವ ಪ್ರಸ್ತಾಪವಿಟ್ಟಿದ್ದರು.

[illegible] ಬಳಿಕ ಮಂಗಳೂರಿನ ಮಾನವಹಕ್ಕುಗಳ [illegible]ರಾಟಗಾರ ವಕೀಲ ನೌಶಾದ್ ಕಾಶಿಂಜಿಯವರ [illegible]ನ್ನು ಖಂಡಿಸಿ ನಡೆದಂತಹ ಬೃಹತ್ ಪ್ರತಿಭಟನಾ [illegible]ಲ್ಲಿ ಭಾಷಣ ಮಾಡಿದ ಉಮೇಶ್ಚಂದ್ರರ ವಿರುದ್ಧ [illegible]ವ ಹಕ್ಕುಗಳಿಗೆ ಕವಡೆ ಕಾಸಿನ ಕಿಮ್ಮತ್ತು ಕೊಡದ [illegible]ಮತ್ತಷ್ಟು ಕೆಂಡಾಮಂಡಲವಾಗಿತ್ತು. ಹಿಂದೂತ್ವವಾದಿ [illegible] ತುತ್ತೂರಿಯಾದ ವಿ.ಕ. ಉಮೇಶ್ಚಂದ್ರರ ವಿರುದ್ಧ [illegible]ಸೆಯುಲಾರಂಭಿಸಿತು. ನೇರಾ ನೇರಾ ಕಾಳಗಕ್ಕಿಳಿಯುವ [illegible]ವಿಲ್ಲದ ವಿ.ಕ.ದ ದುಷ್ಟಕೂಟ ಉಮೇಶ್ಚಂದ್ರರ [illegible]ರ್ಥಿಗಳನ್ನೇ ಅವರ ವಿರುದ್ಧ ಎತ್ತಿ ಕಟ್ಟಿತು. ಅದರ [illegible] ಭಾಗವಾಗಿ ಶ್ರೀಶ ಪುಣಚ ಎಂಬಾತನ ದಲಿತ [illegible]ಸೆಯ ಲೇಖನವನ್ನು ಪ್ರಕಟಿಸಿತು. ಅದರಲ್ಲಿ ಉಮೇಶ್ಚಂದ್ರರನ್ನು ಅತ್ಯಂತ ನೀಚನನ್ನಾಗಿ ಚಿತ್ರಿಸಿ ವಿದ್ಯಾರ್ಥಿಗಳು ಅವರ ವಿರುದ್ಧ ತಪ್ಪು ಅಭಿಪ್ರಾಯ ತಾಳುವಂತೆ ಮಾಡಿತು. ಉಮೇಶ್ಚಂದ್ರರು ಅಟ್ರಾಸಿಟಿ ಕೇಸು ಹಾಕಿದ್ದನ್ನು ಗೇಲಿ ಮಾಡಿ ಅವರ ಕಾನೂನಿನ ಹಕ್ಕನ್ನು ಕೇವಲವಾಗಿ ಚಿತ್ರಿಸಲಾಯಿತು. ಮತ್ತೆ ಮುಖಪುಟದಲ್ಲೇ ಉಮೇಶ್ಚಂದ್ರರ ಮೇಲೆ ಮಾನಹಾನಿಕರವಾದಂತಹ, ಜಾತಿನಿಂದನಾತ್ಮಕ ಬರಹವನ್ನು ಪ್ರಕಟಿಸಿತು.

ಪ್ರಸ್ತುತ ಎಬಿವಿಪಿ ನೇತೃತ್ವದಲ್ಲಿ ಉಮೇಶ್ಚಂದ್ರರ ವಿರುದ್ಧ ಪ್ರತಿಭಟನಾನಿರತರು ಮಾಡುತ್ತಿರುವಂತಹ ಆರೋಪಗಳು ಬಹಳ ಬಾಲಿಶವಾಗಿವೆ. ಮಂಗಳೂರು ವಿ.ವಿ.ಯಲ್ಲಿ ಕೆಲವು ಉಪನ್ಯಾಸಕರು ತರಗತಿಗೆ ಹಾಜರಾಗದ ವಿದ್ಯಾರ್ಥಿಗಳಿಗೂ ಹಾಜರಿ ನೀಡುವ ಪರಿಪಾಠವನ್ನು ಬಹಳ ಹಿಂದಿನಿಂದಲೇ ಮಾಡುತ್ತಾ ಬಂದಿದ್ದಾರೆ. ಅವರಿಗೆ ವಿದ್ಯಾರ್ಥಿಗಳ ಭವಿಷ್ಯದ ಬಗೆಗೆ ಯಾವುದೇ ವಿಧದ ಕಾಳಜಿಯೂ ಇರಲಿಲ್ಲ. ಇಂತಹ ಹಾಜರಿ ನೀಡುವ ಪರಿಪಾಠವನ್ನು ಮಂಗಳೂರು ವಿ.ವಿ.ಯಲ್ಲಿ ಬೆಳೆಸಿದ್ದು ವಿವಿಯ ಪತ್ರಿಕೋದ್ಯಮ ವಿಭಾಗದ



ಒಂದಿಬ್ಬರು ಉಪನ್ಯಾಸಕರು. (ತರಗತಿಗೆ ಹಾಜರಾಗದೇ ಹಾಕಿಸಿಕೊಳ್ಳುತ್ತಿದ್ದ ಕೆಟಗರಿಯಲ್ಲಿ ವಿ.ಕ.ದ 'ಅಂಕಲಾ ಕೋರ'ನೊಬ್ಬನೂ ಇದ್ದ ಎಂಬುದು ವಿ.ವಿ.ಯಲ್ಲಿ ಪ್ರಸ್ತುತ ಗಲಾಟೆಯ ಮಧ್ಯೆ ಕೆಲವು ಉಪನ್ಯಾಸಕರಿಂದ ಕೇಳಿ ಬರುತ್ತಿರುವ ಮಾತು): ಉಮೇಶ್ಚಂದ್ರರು ಹಾಜರಿಯ ವಿಷಯದಲ್ಲಿ ಕಟ್ಟುನಿಟ್ಟಾದ ನಿಯಮ ಪಾಲಿಸುತ್ತಿರುವುದು ಎಬಿವಿಪಿಯ ಅಪಾಪೋಲಿ ವಿದ್ಯಾರ್ಥಿಗಳಿಗೆ ದೊಡ್ಡ ತಲೆನೋವಾಗಿಬಿಟ್ಟಿತ್ತು.

ಇಂಗ್ಲಿಷ್‌ನಲ್ಲಿ ನಾಲಕ್ಷರ ನೆಟ್ಟಗೆ ಬರೆಯಲೂ ಗೊತ್ತಿರದ ವಿದ್ಯಾರ್ಥಿಗಳು ತಮ್ಮ ಅಸೈನ್‌ಮೆಂಟ್‌ಗಳನ್ನು ಹೈಫೈ ಇಂಗ್ಲಿಷ್‌ನಲ್ಲಿ ಬರೆದು ತರುತ್ತಿದ್ದರು. ಉಮೇಶ್ಚಂದ್ರರು ಅವರಲ್ಲಿ ಅದರ ಅರ್ಥ ಕೇಳಿದರೆ ಉಮೇಶ್ಚಂದ್ರರ ವಿರುದ್ಧ ದಂಗೆಯೇಳುವ ಬೆದರಿಕೆ ಹಾಕುತ್ತಿದ್ದರು. ಉಮೇಶ್ಚಂದ್ರ ಅದಕ್ಕೆ ಸೊಪ್ಪು ಹಾಕುತ್ತಿರಲಿಲ್ಲ. ನಯಾಪೈಸೆಯ ಪರಿಶ್ರಮ ಪಡದೇ, ಸ್ವಲ್ಪವೂ ಅಧ್ಯಯನ ಮಾಡದೇ ಅಂತರ್ಜಾಲದಿಂದ ಕಟ್ ಎಂಡ್ ಪೇಸ್ಟ್ ಮಾಡಿದ ಅಸೈನ್‌ಮೆಂಟ್‌ಗಳನ್ನು ಉಮೇಶ್ಚಂದ್ರ ಯಾವ ಮುಲಾಜೂ ಇಲ್ಲದೇ ತಿರಸ್ಕರಿಸುತ್ತಿದ್ದರು. ವಿದ್ಯಾರ್ಥಿಗಳ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಕಟ್ಟುನಿಟ್ಟಾಗಿ ನಿಯಮ ಪಾಲಿಸಿದ ಉಮೇಶ್ಚಂದ್ರರನ್ನು ವಿದ್ಯಾರ್ಥಿಗಳ ಶತ್ರು ಎಂದು ಬಿಂಬಿಸುವುದರಲ್ಲಿ ಮನುವಾದಿ ಉಪನ್ಯಾಸಕರ ಕೈವಾಡವಿರುವುದು ಈಗಾಗಲೇ ಬಹಿರಂಗಗೊಂಡಿದೆ.


ಉಮೇಶ್ಚಂದ್ರರು ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಭೋದಿಸುತ್ತಿದ್ದಂತಹ ಕಟುಸತ್ಯಗಳು ಸಂಘಪರಿವಾರದ ಹಿಡನ್ ಅಜೆಂಡಾವನ್ನು ಬಯಲುಗೊಳಿಸುತ್ತದೆಯೆಂಬುವುದು ಎಬಿವಿಪಿಯ ಪುಂಡರನ್ನು ಕೆಂಗೆಡಿಸಿದೆ. ಹಲವು ಸ್ಯಾಂಪಲ್‌ಗಳು:

* ನರೇಂದ್ರ ಮೋದಿ ನಡೆಸಿದ ಹತ್ಯಾಕಾಂಡಗಳು
* ಸಂಘ ಪರಿವಾರವು ತನ್ನ ಕಾರ್ಯಸಾಧನೆಗಾಗಿ ದಲಿತರನ್ನು ಮತ್ತು ಶೂದ್ರರನ್ನು ಬಳಸಿದ ಉದಾಹರಣೆಗಳು
* ಗುಜರಾತ್‌ನಲ್ಲಿ ದಲಿತರನ್ನು ಮುಸಲ್ಮಾನರ ವಿರುದ್ಧ ಎತ್ತಿ ಕಟ್ಟಿದ್ದು
* ಒರಿಸ್ಸಾದಲ್ಲಿ ಕ್ರಿಶ್ಚಿಯನ್ನರ ವಿರುದ್ಧ ಆದಿವಾಸಿಗಳನ್ನು ಎತ್ತಿ ಕಟ್ಟಿದ್ದು
* ಅಂತಿಮವಾಗಿ ಯಾವುದೇ ಕೋಮುಗಲಭೆಗಳಲ್ಲಿ ಕಷ್ಟ ನಷ್ಟ ಅನುಭವಿಸುವುದು, ಕೊಲೆಗೀಡಾಗುವುದು ಇಲ್ಲಿನ ಶೋಷಿತವರ್ಗಗಳೇ ಆಗಿವೆ ಎಂಬ ವಿಚಾರಗಳವು

ಉಮೇಶ್ಚಂದ್ರರು ತನ್ನ ತರಗತಿಯಲ್ಲಿ ಫ್ಯಾಸಿಸಂನ ಅಪಾಯದ ಕುರಿತು ವಿದ್ಯಾರ್ಥಿಗಳಿಗೆ ತಿಳಿ ಹೇಳುತ್ತಿದ್ದರು. ಹಲವು ಸ್ಯಾಂಪಲ್‌ಗಳು:

* ಯಾವುದೇ ಧರ್ಮದಲ್ಲಿನ ಹಿಪಾಕ್ರಸಿಯನ್ನು ಧೈರ್ಯವಾಗಿ ವಿರೋಧಿಸಿ
* ತೊಗಾಡಿಯಾ, ಗೋಲ್ವಾಲ್ಕರ್‌ನಂತಹ ನಂಜುಪ್ರಾಣಿಗಳು ಭೋದಿಸುವ ಹಿಂದೂ ಧರ್ಮವನ್ನು ಅನುಸರಿಸಬೇಡಿ
* ಸ್ವಾಮಿ ವಿವೇಕಾನಂದ ರಾಜಾರಾಮ್ ಮೋಹನ್ ರಾಯ್ ರವರಂತಹವರ ಪುರೋಗಾಮಿ ಚಿಂತನೆಯ ಹಿಂದೂ ಧರ್ಮವನ್ನು ಪಾಲಿಸಿರಿ

ಬಾಬಾ ಸಾಹೇಬ್ ಅಂಬೇಡ್ಕರ್ ಅವರು ತನ್ನ ಬದುಕಿನುದ್ದಕ್ಕೂ ಕೆಲವು ಬ್ರಾಹ್ಮಣರನ್ನು ಕೃತಜ್ಞಾಪೂರ್ವಕವಾಗಿ ಸ್ಮರಿಸುತ್ತಿದ್ದರು. ಬ್ರಾಹ್ಮಣರು ಕೆಟ್ಟವರಲ್ಲ, ಬ್ರಾಹ್ಮಣ್ಯ ಕೆಟ್ಟದು. ಅದನ್ನು ಯಾವ ಮುಲಾಜೂ ಇಲ್ಲದೇ ಖಂಡಿಸಿ



ಪ್ರತಿಭಟನಾ ನಿರತ ವಿದ್ಯಾರ್ಥಿಗಳು...

ಎನ್ನುತ್ತಿದ್ದ ಉಮೇಶ್ಚಂದ್ರರು ತನ್ನ ಪ್ರಗತಿಪರ ಚಿಂತನೆಗಳನ್ನು ದಲಿತ-ಅಲ್ಪಸಂಖ್ಯಾತ, ಹಿಂದುಳಿದ ವಿದ್ಯಾರ್ಥಿಗಳನ್ನು ಪ್ರಭಾವಿತಗೊಳಿಸಲು ಬಳಸುತ್ತಿದ್ದರು. ಬ್ರಾಹ್ಮಣ-ಮೇಲ್ಜಾತಿ ವಿದ್ಯಾರ್ಥಿಗಳಲ್ಲೂ ಪುರೋಗಾಮಿ ಚಿಂತನೆಗಳು ಮೊಳಕೆಯೊಡೆಯಬೇಕೆಂದು ಶ್ರಮಿಸುತ್ತಿದ್ದರು.

ಯಾವುದೇ ಸಮಾಜ ವಿಜ್ಞಾನದ ಸ್ನಾತಕೋತ್ತರ ಅಧ್ಯಯನದಲ್ಲಿ ಪ್ರಚಲಿತ ವಿದ್ಯಮಾನಗಳ ಕುರಿತು ಚರ್ಚೆ ಮಾಡುವುದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಉತ್ತಮ. ಆದರೆ ಇದನ್ನೇ ಸಂಘಪಾರಿಗಳು ತಪ್ಪು ಎನ್ನುತ್ತಿದ್ದಾರೆ.

ಉಮೇಶ್ಚಂದ್ರರ ವಿರುದ್ಧ ಈ ಫ್ಯಾಸಿಸ್ಟ್ ಷಡ್ಯಂತ್ರಕ್ಕೆ ಇನ್ನೊಂದು ಮುಖ್ಯ ಕಾರಣ ಇದೆ. ಉಮೇಶ್ಚಂದ್ರರು ವಿ.ವಿ.ಯ ಪಠ್ಯ ಪರಿಷ್ಕರಣಾ ಸಮಿತಿಯ ಸದಸ್ಯರು. ಮುಂದಿನ ಹೊಸ ಪಠ್ಯಗಳಲ್ಲಿ ಅಂಬೇಡ್ಕರ್, ಬುದ್ಧ ಬಸವ, ಜ್ಯೋತಿಬಾಫುಲೆ, ಶಾಹುಮಹಾರಾಜ್, ಪೆರಿಯಾರ್ ಮುಂತಾದ ಮಹಾನ್ ದಾರ್ಶನಿಕರನ್ನು ಕುರಿತಂತೆ ಪಠ್ಯ ರಚಿಸಬೇಕು ಎಂದು ಉಮೇಶ್ಚಂದ್ರ ಬಲವಾಗಿ ವಾದ ಮಂಡಿಸಿದ್ದರು. ಫ್ಯಾಸಿಸಂನ ಕಟ್ಟಾ ವಿರೋಧಿಗಳ ಚಿಂತನೆಗಳನ್ನು ಪಠ್ಯದಲ್ಲಿ ಅಳವಡಿಸುವುದನ್ನು ಮನುವಾದಿಗಳು ಹೇಗೆ ತಾನೇ ಸಹಿಸುತ್ತಾರೆ? ಉಮೇಶ್ಚಂದ್ರರ ವಿರುದ್ಧ ನಡೆಯುತ್ತಿರುವ ಈ ಗಲಾಟೆ ಹಿಂದೂತ್ವದ ನಂಜಲ್ಲದೇ ಮತ್ತೇನು? ●

ಉಮೇಶ್ಚಂದ್ರ ಅರ್ಥಮಾಡಿಕೊಳ್ಳಬೇಕಾದ್ದು

ಉಮೇಶ್ಚಂದ್ರ ಇವತ್ತು ಸಂಘ ಪರಿವಾರಿಗಳು ಹಾಗೂ ವಿಜಯ ಕರ್ನಾಟಕ ಆರೋಪಿಸುತ್ತಿರುವಂತೆ ಕೆಟ್ಟವರೇನಲ್ಲ, ಆದರೆ ಅವರೊಳಗೆ ಒಬ್ಬ ಸಂಯಮವಿರದ ಬಂಡುಕೋರನಿದ್ದಾನೆ. ಶತಮಾನಗಳ ಸಿಟ್ಟು ಆಕ್ರೋಶಗಳನ್ನೆಲ್ಲಾ ಒಂದೇ ಬಾರಿಗೆ ಕಾರಿಕೊಳ್ಳುವಂತೆ ಉಮೇಶ್‌ಚಂದ್ರ ಯುನಿವರ್ಸಿಟಿಯೊಳಗೆ ವರ್ತಿಸಿರುವ ಉದಾಹರಣೆಗಳಿವೆ. ಆದರಿಂದಾಗಿ ವಿದ್ಯಾರ್ಥಿಗಳೊಂದಿಗೆ ಜಗಳ ಸಹೋದ್ಯೋಗಿಗಳೊಂದಿಗೆ ವೈಮನಸ್ಸು, ಅಟ್ರಾಸಿಟಿ ಕೇಸು...! ಉಮೇಶ್ಚಂದ್ರ ಸರಿಯಾಗಿ ಅಳೆದು ನೋಡಿದ್ದರೆ, ಸ್ನೇಹಿತರ್‍ಯಾರು... ಶತ್ರುಗಳ್ಯಾರೆಂಬುದನ್ನೂ ಅರ್ಥಮಾಡಿಕೊಂಡಿದ್ದೇ ಆಗಿದಿದ್ದರೆ, ನಿರ್ಲಕ್ಷಿಸಬಹುದಾದ ಸಣ್ಣಪುಟ್ಟ ವಿಚಾರಗಳನ್ನು ದೊಡ್ಡದು ಮಾಡಿಕೊಳ್ಳದೇ ಹೋಗಿದಿದ್ದರೆ ಇವತ್ತಿನ ಗಲಾಟೆಗಳಿಗೆ ಅರ್ಧಕ್ಕರ್ಧ ಕಾರಣಗಳು ಕಡಿಮೆ ಇರುತ್ತಿದ್ದವು. ಇವತ್ತು ಮಂಗಳೂರು ವಿವಿಯಲ್ಲಿ ಹಾಗೂ ವಿವಿಯಾಚೆಗೂ ಉಮೇಶ್‌ಚಂದ್ರ ಪರ ನೈತಿಕ ಬೆಂಬಲ ನೀಡಬಲ್ಲ ಅನೇಕ ಪ್ರಗತಿಪರರು ಇದ್ದಾರೆ. ಆದರೆ ಅಂತಹವರೊಂದಿಗೂ ಉಮೇಶ್ಚಂದ್ರರಿಗೆ ವಿಶ್ವಾಸದ ಗೆಳೆತನವಿಲ್ಲ. ಇವೆಲ್ಲಾ ಏನೇ ಇರಲಿ, ತಿದ್ದಿಕೊಳ್ಳಬಹುದಾದ ನಡವಳಿಕೆಗಳವು. ಆದರೆ ವಿವಿಯ ವಿದ್ಯಾರ್ಥಿಗಳ ಪ್ರತಿಭಟನೆ ಮಾತ್ರ ಕೋಮುವಾದಿ ಗುಂಪಿನ ಸಂಚಾಗಿದೆ. ಜನಪರ ಕಾಳಜಿಗಳ ಸೆಕ್ಯುಲರ್ ನಿಲುವಿನ ಪ್ರಾಧ್ಯಾಪಕರೊಬ್ಬರನ್ನು ಬಲಿಪಶು ಮಾಡುವ ಪಿತೂರಿ ಇದಾಗಿದೆ. ಈ ಕ್ಷಣದಲ್ಲಿ ಎಲ್ಲಾ ಪ್ರಗತಿಪರ ಸಂಘಟನೆಗಳು ಹಾಗೂ ವ್ಯಕ್ತಿಗಳು ಉಮೇಶ್‌ಚಂದ್ರರ ರಕ್ಷಣೆಗೆ ನಿಲ್ಲಬೇಕಿದೆ.

● [illegible]

ಉತ್ತರ ಕನ್ನಡ: ಕಪಿ ಸೇನೆಯಿಂದ ಚರ್ಚ್ ದಾಳಿ

10◄◄◄

ಸೈಟ್ ಡೀಲು ಕುದುರಿಸುತ್ತಾನೆಂದರೆ, ಈತನಿಗೆ ಖಾಕಿ ಕೊಳಕರು ಕೊಡುವ ಗೌರವ ಅದೆಷ್ಟೆಂದು ನೀವೇ ಅಳೆಯಬಹುದು. ಕಳೆದ ರಮ್ಜಾನ್ ಹಬ್ಬದ ಹೊತ್ತಲ್ಲಿ ಈ 'ಗೋ-ಪ್ರೇಮಿ ಮತ್ತವನ ಗುರುವರ್ಯ ತ್ರಯರು ಎಂಟು ಲಕ್ಷದ ಜಾನುವಾರು ತಡೆದು ಒಂದೂವರೆ ಲಕ್ಷದ ವ್ಯವಹಾರ ಮಾಡಲು ಮುಂದಾಗಿ ದೊಡ್ಡ ರಗಳೆ ನಡೆದು ಹೋಗಿತ್ತು!

ತೀರಾ ಎರಡು-ಮೂರು ತಿಂಗಳ ಹಿಂದಷ್ಟೇ ಭಟ್ಕಳ ಸರ್ಕಾರಿ ಪದವಿ ಕಾಲೇಜಿನಲ್ಲಿ ಈ ಶಂಕರ ನಾಯ್ಕನ ಬಳಗ ಬುರ್ಖಾ V/s ಕಾವಿ ಡ್ರೆಸ್ ಕಿತ್ತಾಟ ಕ್ರಿಯೇಟ್ ಮಾಡಿತ್ತು. ಮುಸ್ಲಿಮ್ ಹುಡುಗೀರು ಬುರ್ಖಾ ಧರಿಸಿ ಕಾಲೇಜಿಗೆ ಬರಬಾರದೆಂದು ಕ್ಯಾತೆ ತೆಗೆದು ಕಾಡಿತ್ತು. ಹುಡುಗೀರ ಬುರ್ಖಾ ಎಳೆದಾಡಿ ವಿಕೃತರಂತೆ ಶಂಕರ ನಾಯ್ಕ, ಗೋವಿಂದ ನಾಯ್ಕ, ವಿವೇಕ್ ಭಟ್ ಹಾರಾಡಿದ್ದರು. ಸಾಬರ ಹುಡುಗೀರು ಬುರ್ಖಾ ಹಾಕಿಕೊಂಡು ಬಂದರೆ ನಾವು ಕಾವಿ ಅಂಗಿ-ಲುಂಗಿ ತೊಟ್ಟುಕೊಂಡು ಬರುವುದಾಗಿ ಹಿಂದೂ ಹುಡುಗರಿಂದ ಶಂಕರ ನಾಯ್ಕ ಹೇಳಿಸಿದ್ದ. ಆ ಗಲಾಟೆ ಹೊತ್ತಲ್ಲಂತೂ ಈ ಶಂಕರ ಗೂಳಿಯಂತೆ ನೇರ ಕಾಲೇಜಿಗೇ ನುಗ್ಗಿ ದಾಂಧಲೆ ಎಬ್ಬಿಸಿದ್ದ. ಶಂಕರ ನಾಯ್ಕ ಮತ್ತು ಗೋವಿಂದ ನಾಯ್ಕರೇ ಹಿಂದೂ ವಿದ್ಯಾರ್ಥಿಗಳಿಗೆ ಕಾವಿ ಬಟ್ಟೆ ಕೊಡಿಸಿ-ತೊಡಿಸಿ ಕಾಲೇಜಿಗೆ ಕಳಿಸಿದ್ದರು. ಸಂಸದ ಅನಂತ್ಕ್ಮಾಣಿ ಈ ಭಂಡರ ಬೆನ್ನ ಹಿಂದಿದ್ದುದರಿಂದ ಪೊಲೀಸರು ಹೇತ್ಲಾಂಡಿಗಳಂತಾಗಿದ್ದರು.



ಈ ಬುರ್ಖಾ-ಕಾವಿ ಅಂಗಿ ಗಲಾಟೆಗೆ ಹೆದರಿ ಅದೆಷ್ಟೋ ಬಡ ಮುಸ್ಲಿಮ್ ಹುಡುಗೀರು ಕಾಲೇಜಿಗೆ ಗುಡ್‌ಬೈ ಹೇಳಬೇಕಾಗಿ ಬಂತು. ಎಂಥ ಪುಣ್ಯವಂತರಲ್ಲವೇ ಈ ಹಿಂದೂವಾದಿಗಳು!! ಈ ಇಡೀ ಎಪಿಸೋಡ್ ನಡೆದಿದ್ದು ಶಂಕರ್ ನಾಯ್ಕನ ನಾಯಕತ್ವದಲ್ಲಿ; ಸಂಸದ ಅನಂತ್ಕ್ಮಾಣಿ ಕುಮ್ಮಕ್ಕಿನಲ್ಲಿ!

ಚರ್ಚ್ ದಾಳಿ ಸ್ಕೆಚ್

ಈಗೀಗ ಪಾಪಿ ಶಂಕರ ನಾಯ್ಕನ ಹುಚ್ಚು ಹೆಚ್ಚಾಗಿಹೋಗಿದೆ. ಭಟ್ಕಳವೆಂಬ ಭಟ್ಕಳ ಈತನ ಪುಂಡಾಟ-ಪಾತಕ-ಕ್ರೌರ್ಯ-ಕಲಹದಿಂದ ಕಂಗಾಲಾಗಿ ಹೋಗಿದೆ! ದೂರದ ಆಸ್ಟ್ರೇಲಿಯಾದಲ್ಲಿ ಭಾರತೀಯರ ಮೇಲಾಗುತ್ತಿರುವ ಹಲ್ಲೆಯನ್ನು ಎಡವಟ್ಟು ಶಂಕರನ ರೌಡಿ ಪಡೆ ಸ್ಥಳೀಯ ನಿಷ್ಪಾಪಿ ಕ್ರಿಶ್ಚಿಯನ್ನರ ಜತೆ ಥಳಕು ಹಾಕುತ್ತಿದೆ. ಅಲ್ಲಿ ಹಿಂದೂಗಳ ಮೇಲೆ ದಾಳಿಯಾದರೆ ಇಲ್ಲಿ ಚರ್ಚ್-ಶಿಲುಬೆ ಧ್ವಂಸ ಮಾಡುತ್ತೇವೆ; ಆಸ್ಟ್ರೇಲಿಯಾ ಪ್ರವಾಸಿಗಳ ರಕ್ತ ಹೀರುತ್ತೇವೆಂದು ಬಹಿರಂಗವಾಗೇ ಈ ಕ್ರಿಮಿನಲ್ ಕ್ರಿಮಿಗಳು ಒದರುತ್ತಿದ್ದಾರೆ. ಹಾಗೇ ಬರೆದ ಶಂಕರ ನಾಯ್ಕನ ಮಿತ್ರ ಮಂಡಳಿ ಅಸಿಸ್ಟೆಂಟ್ ಕಮೀಷನರ್ ಮೂಲಕ ರಾಷ್ಟ್ರಪತಿಗಳಿಗೆ 'ಧಮಕಿ ಪತ್ರ' ವನ್ನು ಕಳೆದ 19.1.2010 ರಂದು ಕಳಿಸಿತ್ತು.



ಇದನ್ನು ಹಿಂದೂ ಜಾಗರಣಾ ವೇದಿಕೆ, ಭಜರಂಗದಳ, ಬಿಜೆಪಿಗಳ ಹಿತೈಷಿಗಳಾದ ಭಟ್ಕಳದ ಪೊಲೀಸರು ಸೀರಿಯಸ್ಸಾಗಿ ಪರಿಗಣಿಸಲೇ ಇಲ್ಲ. ಡಿವೈಎಸ್‌ಪಿ ವೇದಮೂರ್ತಿಯ ಮುದ್ದಿನ ಹುಡುಗ ಶಂಕರನಾಯ್ಕನನ್ನು ಅಮಾನುಷ-ಹೇಯ 'ಬೆದರಿಕೆ ಪತ್ರ'ದ ಆಧಾರದಲ್ಲಿ ಬಂಧಿಸುವ ಧಮ್ ಸ್ಥಳೀಯ ಪೊಲೀಸರಿಗಿಲ್ಲ. ಪೊಲೀಸರ ಅಸಹಾಯಕತೆ ಪರೋಕ್ಷ ಸಹಕಾರದಿಂದ ಶಂಕರನಲ್ಲಿ ಕ್ರಿಮಿನಲ್ ಹುರುಪು ಇಮ್ಮಡಿಸಿತು. 22.1.10 ರ ರಾತ್ರಿ 9 ರ ಹೊತ್ತಿಗೆ ಶಂಕರನ ಗೂಂಡಾ ಗ್ಯಾಂಗು ಮುಂಡಳ್ಳಿಯ ಲೂರ್ಡ್ಸ್ ಚರ್ಚ್‌ನ ಹಿಂಭಾಗದಲ್ಲಿದ್ದ ಶಿಲುಬೆ ಮುರಿಯಲು ರೆಡಿಯಾಗಿ ಹೋಯಿತು....

ಶಿಲುಬೆ ಮುರಿವಾಗ ದೊಡ್ಡ ಸದ್ದಾಗಿದೆ. ಆಗ ಸುತ್ತಲಿನ ಜನ ಗುಂಪು-ಗುಂಪಾಗಿ ಗುಡ್ಡದತ್ತ ದೌಡಾಯಿಸಿದೆ. ಜನರು ಬರುವುದು ಕಂಡ ಶಂಕರನ ಪಡೆ ಕತ್ತಲಲ್ಲಿ ಪರಾರಿಯಾಗಿದೆ. ಅಷ್ಟರಲ್ಲಾಗಲೇ ಶಿಲುಬೆಯ ಬುಡ ಭಗ್ನವಾಗಿತ್ತು. ಇತ್ತ ಪೊಲೀಸರಿಗೆ ಪೀಕಲಾಟ ಶುರುವಾಯ್ತು. ಆರೋಪಿಗಳ ಹುಡುಕುವ ನಾಟಕ ಶುರು ಹಚ್ಚಿಕೊಂಡರು. ಆದರೆ ಸಣ್ಣ ಅನುಮಾನವೂ ಶಂಕರ ನಾಯ್ಕನ ಶ್ರೀರಾಮ ಸೇನೆ ಬಗ್ಗೆ ಪೊಲೀಸರಿಗೆ ಇದ್ದಂತಿರಲಿಲ್ಲ. ಆದರೆ ಅತ್ತ ಮರುದಿನ ಮುಂಜಾನೆ ಶಂಕರ ನಾಯ್ಕ ತಾನೇ ಟಿವಿ ವಾಹಿನಿಯೊಂದರ ಮುಂದೆ ಹಾಜರಾಗಿದ್ದಾನೆ. "ನಾನು ಶ್ರೀರಾಮ ಸೇನೆಯ ಭಟ್ಕಳ ಸಂಚಾಲಕ.... ನನ್ನ ಹಿಂದೂತ್ವದ ಪಡೆಯೇ ಮುಂಡಳ್ಳಿ ಶಿಲುಬೆ ಧ್ವಂಸಕ್ಕೆ ಪ್ರಯತ್ನ ಮಾಡಿತ್ತು.... ಆಸ್ಟ್ರೇಲಿಯಾದಲ್ಲಿ ಹಿಂದೂಗಳ ಮೇಲಾಗುತ್ತಿರುವ ದಾಳಿಗಿದು ಸಣ್ಣ ಪ್ರತಿಕಾರದ ಸ್ಯಾಂಪಲ್ ಅಷ್ಟೇ...." ಎಂದು ರಾಕ್ಷಸನಂತೆ ಕೂಗಾಡಿದ್ದಾನೆ.

ಪೊಲೀಸರ ಪೀಕಲಾಟ

ರಾಷ್ಟ್ರಪತಿಗೆ 'ಧಮಕಿ ಪತ್ರ'ವನ್ನು ಸರ್ಕಾರಿ ಅಥಾರಿಟಿ ಮೂಲಕವೇ ಕಳಿಸಿದಾಗಲೂ ಕ್ರಿಮಿನಲ್ ಶಂಕರ ನಾಯ್ಕ ಮತ್ತವನ ಮಿತ್ರ ಪಡೆಯನ್ನು ಬಂಧಿಸುವ ಉಸಾಬರಿಗೆ ಹೋಗದ ಹೊಣಗೇಡಿ ಪೊಲೀಸರಿಗೆ ಆತ ತಾವೇ ಶಿಲುಬೆ ಧ್ವಂಸ ಮಾಡಿದ್ದೇವೆಂದು ಹೇಳಿದಾಗ ಕರ್ತವ್ಯ ಪ್ರಜ್ಞೆ ಜಾಗೃತವಾಗಿದೆ! ಅನಿವಾರ್ಯವಾಗಿ ಆಗ ಪೊಲೀಸರು ಶಂಕರ್ ನಾಯ್ಕ ಮತ್ತಾತ ಕೊಟ್ಟ ಧಮಕಿ ಪತ್ರಕ್ಕೆ ಸಹಿ ಹಾಕಿದ್ದ 31 ಮಂದಿ ಮೇಲೆ ಕೇಸು ಜಡಿದರು. ಕೈಗೆ ಸಿಕ್ಕ ಆರು ಮಂದಿಯನ್ನು ಶಂಕರನ ಸಂಗಡ ಬಂಧಿಸುವ "ಧರ್ಮ ಸಂಕಟ"ಕ್ಕೆ ಪೊಲೀಸರು ಬಿದ್ದರು, ಪಾಪ!

ಇವತ್ತು ಶಂಕರ ನಾಯ್ಕ ಭಟ್ಕಳದ ಪಾಲಿಗೆ ಗಂಡಾಂತರಕಾರಿ ಕೋಮುವಾದಿಯಾಗಿ ಬೆಳೆದಿದ್ದರೆ, ಅದಕ್ಕೆ ಸಂಸದ ಅನಂತ್ಕ್ಮಾಣಿಗಿಂತ ಹೆಚ್ಚು ನೆರವು ನೀಡಿದ್ದು ಭಟ್ಕಳದ ಪೊಲೀಸ್ ಅಧಿಕಾರಿಗಳು! ಶಂಕರ ನಾಯ್ಕ ತಮ್ಮೆದುರೇ ಕಮ್ಯುನಲ್ ಕ್ರಿಮಿನಲ್ ಪಾತಕ ಮಾಡಿದಾಗ, ಅಮಾನುಷ ಪುಂಡಾಟ ನಡೆಸಿದಾಗ ಕಣ್ಮುಚ್ಚಿಕೊಂಡಿದ್ದು ಭಟ್ಕಳದ ಪೊಲೀಸರು. ಅಷ್ಟೇ ಅಲ್ಲ, ಜಾನುವಾರು ಗಲಾಟೆ ನಡೆದಾಗ ಈ ಶಂಕರನನ್ನು ಇಟ್ಟುಕೊಂಡೇ ಹಲವು ಪ್ರಕರಣಗಳನ್ನು ಪೊಲೀಸರು ಇತ್ಯರ್ಥ ಮಾಡಿ ಆತನ ಸಮಾಜಘಾತುಕ ಕೆಲಸಕ್ಕೆ ಕುಮ್ಮಕ್ಕು ಕೊಟ್ಟಿದ್ದಾರೆ. ಹಿಂದೂ ಹರಾಮಿ ನಾಯಕನ ಗೆಟಪ್ಪಿನಲ್ಲಿ ಓಡಾಡಲು ಹೆಲ್ಪ್ ಮಾಡಿದ್ದಾರೆ. ಹೀಗಾಗಿ ಶಂಕರ ನಾಯ್ಕ ಆಡಿದ್ದೇ ಆಟವಾಗಿ ಹೋಯ್ತು. ಭಟ್ಕಳದ ಅಲ್ಪಸಂಖ್ಯಾತರು-ಸೆಕ್ಯುಲರ್ ಹಿಂದೂಗಳು ಪಾಪಿ ಶಂಕರನ ಉಪಟಳ-ಆರ್ಭಟದಿಂದ ಹೈರಾಣಾಗಿ ಹೋದರು!!

ನಮ್ಮವನಲ್ಲ!!

ಈಗ ಸಂಸದ ಅನಂತ್ಕ್ಮಾಣಿ ಶಂಕರ ನಾಯ್ಕನಿಗೂ ಸಂಘ ಪರಿವಾರಕ್ಕೂ ಸಂಬಂಧವಿಲ್ಲ ಎಂದು ಹೇಳುತ್ತಿದ್ದಾರೆ. ಇದನ್ನು ಕೇಳಿ ಜಿಲ್ಲೆಯ ಜನ ಮುಸಿ-ಮುಸಿ ನಗುತ್ತಿದ್ದಾರೆ. ಶಂಕರನ ಹಳಿ ತಪ್ಪಿಸಿ ಗುಂಡಿಗೆ ಬಿದ್ದಾಗ 'ಕೃತಘ್ನ' ಹೇಳಿಕೆ ಕೊಟ್ಟು ಬಣ್ಣ ಬದಲಿಸಿ ಬಚಾವಾಗುತ್ತಿರುವ ಅನಂತ್ಕ್ಮಾಣಿ ಈಗ ಅನಾಹುತಕಾರಿ ಜೋಕರ್‌ನಂತೆ ಕಾಣಿಸುತ್ತಿದ್ದಾನೆ. ಶಂಕರನಿಗೆ ಶ್ರೀರಾಮ ಸೇನೆಯ ವೇಷ ತೊಡಿಸಿದ್ದೇ ಅನಂತ್ಕ್ಮಾಣಿ ಎಂಬುದು ನಿಸ್ಸಂಶಯ! ಅನಂತ್ಕ್ಮಾಣಿ ಸುಳ್ಳಿಗೆ ಎಣೆಯುಂಟೇ?

ಹಾಗೆಯೇ ಕಪಿಸೇನೆಯ ಸ್ವಯಂ ಘೋಷಿತ ಮುಖಂಡ ಪ್ರಮೋದ್ ಮುತಾಲಿಕ್ "ಭಟ್ಕಳದಲ್ಲಿರುವ ಶಂಕರ ನಾಯ್ಕ ಎಂಬ ಚರ್ಚ್ ದಾಳಿಕೋರ ನನ್ನ ಸೇನೆಯ ಪದಾಧಿಕಾರಿಯಲ್ಲ.. ಆ ಶಿಲುಬೆ ಧ್ವಂಸಕ್ಕೂ ನಮಗೂ ಸಂಬಂಧವಿಲ್ಲ" ಎಂದು ಬೊಗಳುತ್ತಿದ್ದಾನೆ. ಪೊಲಿಟಿಕಲ್ ಮೈಲೇಜು ಪಡೆಯಲು ಡಬ್ಬಲ್ ಗೇಮ್ ಆಡುತ್ತಿರುವ ಪ್ರಮೋದ್ ಮುತಾಲಿಕ್, ಅನಂತಕುಮಾರ್ ಹೆಗಡೆಯಂಥ ಆತಂಕವಾದಿಗಳ ಭಯೋತ್ಪಾದನೆಯ ನಡುವೆ ನೊಂದ ಭಟ್ಕಳಿಗರಿಗೆ, ದಿಕ್ಕೆಟ್ಟಿರುವ ಕ್ರಿಶ್ಚಿಯನ್ನರಿಗೆ ಒಂಚೂರು ನೆಮ್ಮದಿ ಕೊಟ್ಟಿರುವುದು ಶಂಕರ ನಾಯ್ಕನ 'ಚೌತನಿ' ಪ್ರದೇಶದ ಶಾಂತಿಪ್ರಿಯರಾದ ಒರಿಜಿನಲ್ ಹಿಂದೂಗಳು.

ಈ ವರದಿ ಸಿದ್ಧವಾಗುತ್ತಿರುವ ಹೊತ್ತಿಗೆ ಭಟ್ಕಳದಲ್ಲಿ ನಡೆದ ಶಾಂತಿ ಸಭೆಯಲ್ಲಿ ಚೌತನಿ ಮಂದಿ "ಶಂಕರ ನಾಯ್ಕನ ಉಂಡಾಡಿ ಗುಂಡಣ್ಣತನ-ಪರಧರ್ಮೀಯರನ್ನು ಬೆದರಿಸುವ ಪರಿಯಿಂದ ನಮ್ಮೂರಿನ ಮಾನ-ಮರ್ಯಾದೆ-ನೆಮ್ಮದಿ ಹಾಳಾಗಿದೆ..... ದಯವಿಟ್ಟು ಈತನನ್ನು ನಮ್ಮೂರಿಂದ ಹೊರಗೋಡಿಸಿ.... ಗಡೀಪಾರು ಮಾಡಿ...." ಎಂದು ಅಧಿಕಾರಿಗಳಲ್ಲಿ ಅಲವತ್ತುಕೊಂಡಿದ್ದಾರೆ.

ಅಲ್ಲಿಗೆ ಸಂಸದ ಅನಂತ್ಕ್ಮಾಣಿ ಮತ್ತಾತನ ಮತಾಂಧ ಮುಸಲತ್ತುಗಾರ ತಂಡಕ್ಕೆ ಮಂಗಳಾರತಿ ಎತ್ತಿ ಶಾಂತಿ-ಸೌಹಾರ್ದತೆ ಕೆಡಿಸದಂತೆ ಎಚ್ಚರಿಸಿದ್ದಾರೆ. ಇನ್ನಾದರೂ ಸಂಸದ ಅನಂತ್ಕ್ಮಾಣಿ ಮನುಷ್ಯನಾಗುವನೆ? ಪಾಪಿ ಹಿಂಬಾಲಕರಿಗೆ ಕಡಿವಾಣ ಹಾಕುವನೇ? ಇದು ಉತ್ತರ ಕನ್ನಡದ ಶಾಂತಿಪ್ರಿಯ ಜನರ ಆತಂಕ!

● ವರದಿಗಾರ


ಚೆಡ್ಡಿ ಪೊಲೀಸರು

ಇವತ್ತು ಭಟ್ಕಳದಲ್ಲಾಗುತ್ತಿರುವ ಮತಾಂಧ ಭಾನ್ಗಡಿಗೆಲ್ಲ ಸ್ಥಳೀಯ ಪೊಲೀಸ್ ಇಲಾಖೆ ಚೆಡ್ಡಿ-ಕಾವೀಕರಣಗೊಂಡಿರುವುದೇ ಕಾರಣ! ಇಲ್ಲಿಯ ಡಿವೈಎಸ್‌ಪಿ ಡಾ. ವೇದಮೂರ್ತಿ ಎಂಬ ಪಶುವೈದ್ಯ ರಾಮಚಂದ್ರಾಪುರ ಮಠದ ಸಗಣಿ ಸ್ವಾಮಿಯ ಕಟ್ಟಾ ಅನುಯಾಯಿ. ವರ್ಗವಾಗಿದ್ದ ಈತನನ್ನು ರಾಘವೇಶನೇ ಇನ್‌ಫ್ಲುಯೆನ್ಸ್ ಮಾಡಿ ಭಟ್ಕಳದಲ್ಲಿಟ್ಟುಕೊಂಡಿದ್ದಾನೆ. ತನ್ನ ಗೋಕರ್ಣ ದೇವಾಲಯ ಕಬಳಿಕೆ ವಿರೋಧಿಸುತ್ತಿರುವವರ ಹಣಿಯಲು ಸ್ವಾಮಿ ಈ ಡಿವೈಎಸ್‌ಪಿಯನ್ನು ಬಳಸುತ್ತಿದ್ದಾನೆ. ಹಿಂದೂವಾದಿಯಾದ ಡಿವೈಎಸ್‌ಪಿಗೆ ಸಾಬರ-ಕ್ರಿಶ್ಚಿಯನ್ನರನ್ನು ಕಾಡುವ ಹಿಂದೂತ್ವ ಪುಂಡರೆಂದರೆ ಪಂಚಪ್ರಾಣ. ಜಾನುವಾರು ಸಾಗಾಟ ಪ್ರಕರಣಗಳಲ್ಲಂತೂ ಈ ಡಿವೈಎಸ್‌ಪಿ ಹಿಂದೂ ಡೀಲರ್‌ಗಳಿಗೆ ನೆರವಾಗಿ ಸಾಬರ ಗೋಳು ಹೊಯ್ದುಕೊಂಡಿದ್ದು ಹೇಳತೀರದು. ವೇದಮೂರ್ತಿಯ ಸಡಿಲ ನೀತಿ-ಹಿಂದೂತ್ವದಿಂದಾಗಿ ಭಟ್ಕಳದಲ್ಲಿ ಭಯ ಮೂಡಿದೆ. ಕೋಮುವಾದಿಗಳು ತಾಂಡವ ನೃತ್ಯ ನಡೆಸಿದ್ದಾರೆ.

ಪಾತಕ ಮಾಡಿದರೂ ಆರಾಮಾಗಿ ಇರಬಹುದೆಂಬುದು ವೇದಮೂರ್ತಿಯ ಹಿಂದೂ ಪರ ನೀತಿಯಿಂದ ಕೋಮು ಕಲಹಗಾರರಿಗೆ ಖಾತ್ರಿಯಾಗಿದೆ. ಹೀಗಾಗಿ ಮುಂಡಳ್ಳಿ ಶಿಲುಬೆ ಧ್ವಂಸದ ಬೆನ್ನಿಗೇ ಮುರ್ಡೇಶ್ವರದ ಬಳಿಯ ತೆರ್ಣಮಕ್ಕಿಯ ಮಾತಾ ಮೇರಿಯ ವಿಗ್ರಹ ಧ್ವಂಸಕ್ಕೆ ಹಿಂದೂ ಪಾತಕಿಗಳು ವಿಫಲ ಪ್ರಯತ್ನ ನಡೆಸಿದ್ದಾರೆ. ಪಕ್ಕದ ಉಡುಪಿ-ಮಂಗಳೂರಿನ ಚರ್ಚ್ ದಾಳಿ ಸಂಸ್ಕೃತಿ ಉತ್ತರ ಕನ್ನಡದಲ್ಲೂ ಶುರುವಾಗುವ ಆತಂಕ ಮೂಡಿದೆ.

ಡಿವೈಎಸ್‌ಪಿ ವೇದಮೂರ್ತಿಯನ್ನು ತಕ್ಷಣ ವರ್ಗಾಯಿಸಿ ಭಟ್ಕಳ ಪೊಲೀಸರಿಗೆ ಸರ್ವಧರ್ಮ ಸಮನ್ವಯತೆ ಕಲಿಸುವ ಜರೂರಿದೆ. ಇದು ಜಿಲ್ಲಾ ಮಂತ್ರಿ ಕಾಗೇರಿ, ಹೇತ್ಲಾಂಡಿ ಗೃಹ ಮಂತ್ರಿ ಡಾ. ಆಚಾರ್ಯರಿಗೆ ಅರ್ಥವಾದೀತೆ? ಪೊಲೀಸರು ಆರೆಸ್ಸೆಸ್ ಚೆಡ್ಡಿ ಕಳಚಿ ನಿಷ್ಪಕ್ಷಪಾತ ಖಾಕಿ ಯುನಿಫಾರ್ಮ್ ತೊಡಬೇಕಾಗಿದೆ. ●


ಬಿಜಾಪುರ: ಜೆಡಿಎಸ್‌ಗೆ ಯತ್ನಾಳ್ ಬಿಜೆಪಿಯ ಲಿಂಗಾಯತ ಓಟ್‌ಬ್ಯಾಂಕ್ ಛಿದ್ರ



ಕಳೆದೊಂದು ವರ್ಷದಿಂದ ಜೆಡಿಎಸ್ ಸೇರುವ ವದಂತಿಯನ್ನು ಹುಟ್ಟುಹಾಕುತ್ತಲೇ ಬಂದಿದ್ದ ಬಸನಗೌಡ ಯತ್ನಾಳ್ ಮೊನ್ನೆ ದೇವೇಗೌಡರ ಸಮ್ಮುಖದಲ್ಲಿ ಜೆಡಿಎಸ್ ಸೇರುವ ಮೂಲಕ, ತಾವೇ ಸೃಷ್ಟಿಸಿದ್ದ ಬಿಜೆಪಿಯ ಲಿಂಗಾಯತ ಓಟ್‌ಬ್ಯಾಂಕ್ ಛಿದ್ರ ಮಾಡುವ ಕಾರ್ಯಾಚರಣೆಯನ್ನು ಶುರು ಮಾಡಿದ್ದಾರೆ. ಕಳೆದ ವರ್ಷದಿಂದಲೇ ಬಿಜೆಪಿಯೊಳಗಿದ್ದೇ ಈ ಯುದ್ಧದ ಮುನ್ನುಡಿ ಬರೆಯುತ್ತಾ ಬಂದಿದ್ದ ಯತ್ನಾಳ್ ಯಡ್ಡಿಯ ಕಾಟದಿಂದ ಬೇಸತ್ತು ಬಿಜೆಪಿಗೆ ಬೈಬೈ ಹೇಳಿದ್ದಾರೆ.

ಯತ್ನಾಳ್ ಎಲ್ಲಿ ಮುಂಬೈ ಕರ್ನಾಟಕದ ಲಿಂಗಾಯತ ನಾಯಕನಾಗಿ ಬಿಡುತ್ತಾನೋ ಎಂಬ ಕಾರಣದಿಂದ ಯತ್ನಾಳರನ್ನು ಮೂಲೆಗುಂಪು ಮಾಡುತ್ತ ಬಂದ ಯಡ್ಡಿ ಇನ್ನೊಂದು ಕಡೆ ಬಿಜಾಪುರ ಶಾಸಕ ಅಪ್ಪು ಪಟ್ಟಣಶೆಟ್ಟಿಯನ್ನು ಯತ್ನಾಳ್ ವಿರುದ್ಧ ಎತ್ತಿಕಟ್ಟುತ್ತ ಬಂದಿದ್ದರು. ಅಂತಿಮವೆಂಬಂತೆ ಯತ್ನಾಳರ ಉಚ್ಚಾಟನೆಯನ್ನು ಮಾಡಿದ್ದರು.

ಮೂಲತಃ ಸಂಘ ಪರಿವಾರದ ಆಸಾಮಿಯೇ ಆದ ಯತ್ನಾಳ್‌ರ ಚುನಾವಣಾ ರಾಜಕಾರಣಕ್ಕೆ ಆಸರೆಯಾಗಿದ್ದು ಬಿಜಾಪುರದ ಬಹುಸಂಖ್ಯಾತ ಲಿಂಗಾಯತರು. ಶಾಸಕನಾಗಿ ಹೆಸರು ಕೆಡಿಸಿಕೊಂಡಿರದಿದ್ದ ಯತ್ನಾಳರನ್ನು 1996 ಎಂಪಿ ಚುನಾವಣೆಗೆ ನಿಲ್ಲಿಸುವಂತೆ ರಾಷ್ಟ್ರನಾಯಕರಿಂದ ಒತ್ತಡ ತಂದ ಯಡ್ಡಿ ಯತ್ನಾಳರು ಸೋಲುವಂತೆ ಮಾಡಿದ್ದ. ಆದರೆ ನಂತರದ ಲೋಕಸಭಾ ಚುನಾವಣೆಯಲ್ಲಿ ಗೆದ್ದ ಯತ್ನಾಳ್ ಕೇಂದ್ರದಲ್ಲಿ ಮಂತ್ರಿಯೂ ಆದಾಗ ಯಡ್ಡಿ ಕೈಕೈ ಹಿಸುಕಿಕೊಳ್ಳುವಂತಾಗಿತ್ತು. ಆಗಿಂದಲೇ ಯತ್ನಾಳರ ವಿರುದ್ಧ ಕುತಂತ್ರ ಆರಂಭಿಸಿದ ಯಡ್ಡಿ ಬಿಜಾಪುರದಲ್ಲಿ ಅಪ್ಪು ಪಟ್ಟಣಶೆಟ್ಟಿಯನ್ನು ಮುಂಚೂಣಿಗೆ ತರಲು ಯತ್ನಿಸಿದರು. ನಂತರದಲ್ಲಿ, ವಿಧಾನಸಭೆ, ಲೋಕಸಭೆ ಚುನಾವಣೆಗಳ ಟಿಕೆಟು ಯತ್ನಾಳ್‌ಗೆ ಸಿಗದಂತೆ ಮಾಡಿದ ಯಡ್ಡಿ ಯತ್ನಾಳರನ್ನು ಬಿಜೆಪಿಯಲ್ಲಿ ಮೂಲೆಗುಂಪು ಮಾಡತೊಡಗಿದರು. ಅನಂತಕುಮಾರರ ಬೆಂಬಲದಿಂದ ಒಂದಿಷ್ಟು ಬಂಡಾಯ ತೋರಿದ ಯತ್ನಾಳ್ ನಂತರ ಅನಂತು ಯಡ್ಡಿ ಜೊತೆ ಅಡ್ಜಸ್ಟ್ ಆದ ಮೇಲೆ ಜೆಡಿಎಸ್ ಕಡೆ ಮುಖ ಮಾಡಿದರು.



ಬಿಜಾಪುರದ ಅಂಬೇಡ್ಕರ್ ಮೈದಾನದಲ್ಲಿ ಲಕ್ಷ ಜನರನ್ನು ಸೇರಿಸಿ ಜೆಡಿಎಸ್ ಸೇರಿದ ಯತ್ನಾಳ್ ತನ್ನ ಸಂಘಟನಾ ಶಕ್ತಿಯ ಮೂಲಕ ಬಿಜೆಪಿಯ ಲಿಂಗಾಯತ ಓಟ್‌ಬ್ಯಾಂಕ್ ಒಡೆಯುವುದಂತೂ ನಿಶ್ಚಯ. ಇಲ್ಲಿ ಜೆಡಿಎಸ್ ಅಷ್ಟು ಪ್ರಬಲವಾಗಿಲ್ಲವಾದ್ದರಿಂದ ಇದು ಕಾಂಗ್ರೆಸ್‌ಗೆ ಲಾಭವಾಗಬಹುದು. ಬರಲಿರುವ ಪಂಚಾಯತ್ ಚುನಾವಣೆಗಳಲ್ಲೇ ಇದರ ಪರಿಣಾಮವನ್ನು ಕಾಣಬಹುದು.

● ಮಹಾಲಿಂಗಪ್ಪ ಆಲಬಾಳ

►► ಕಾರ್ಟೂನ್ ಕಾರ್ನರ್



...ರಾವಳಿ ಅಲೆ ...ೀತಾರಾಂ ಕೆಡವಲು ...ಮುಷ್ಕರ ಪಿತೂರಿ



...ಇದೊಂದು ವಿಚಿತ್ರ ಸನ್ನಿವೇಶ. ಅದರ ಸಚಿತ್ರ ವಿವರಗಳು ...ವೆ. ಮಂಗಳೂರಿನ ಕರಾವಳಿ ಅಲೆ ಪತ್ರಿಕೆಯ ಸೀತಾರಾಂ, ... ಪತ್ನಿ ಸಂಪಾದಕಿ ರೋಹಿಣಿ ಹಾಗೂ ವರದಿಗಾರ ನವೀನ್‌ರ ...ದ್ಧ ದಲಿತ ಅಟ್ರಾಸಿಟಿ ಕೇಸೊಂದು ದಾಖಲಾಗಿದೆ...! ಮತ್ತದನ್ನು ...ಲಿಸಲು ಸಂಘ ಪರಿವಾರಿಗಳು ಹಾಗೂ ಭಜರಂಗ ದಳ ಕುಮ್ಮಕ್ಕು ...ವೆ!!

ದಲಿತರೂ ಸೇರಿದಂತೆ ಎಲ್ಲಾ ದಮನಿತರನ್ನು ಸದೆಬಡಿಯುವುದನ್ನೇ ...ಕ ಮಾಡಿಕೊಂಡಿರುವ ಹಿಂದೂ ಕೋಮುವಾದಿಗಳು ಹೀಗೆ ...ರಾತ್ರಿ ದಲಿತ ಪರ ಕಾಳಜಿ ತೋರಿಸುತ್ತಿರುವುದರ ಹಿಂದೆ ...ಸು ಅಸಹ್ಯ ವೃತ್ತಾಂತವಿದೆ. ಅದು ಭಜರಂಗದಳದ ...ರ್ಯಕರ್ತನೊಬ್ಬನ ವಿಕೃತ ಕಾಮಚೇಷ್ಟೆಯ ಹಗರಣ.

ಭಜರಂಗಿ ದುಗ್ಗಪ್ಪ ಸಿಕ್ಕಿಬಿದ್ದನಪ್ಪ

ಈಗೊಂದು ವಾರದ ಹಿಂದೆ ಮಂಗಳೂರಿನ ಕುಪ್ಪೆಪದವಿನ ...ಜೆಯ ಸ್ಮಶಾನವೊಂದರ ಹತ್ತಿರ ಕುರುಚಲು ಕಾಡಿನಲ್ಲಿ ಒಂದು ...ಡಿಯು ಹಗಲಲ್ಲೇ ರಾಸಲೀಲಾ ವಿನೋದದಲ್ಲಿ ತೊಡಗಿದ್ದನ್ನು ...ಯ ಜನ ನೋಡಿದರು. ಇದೆಂಥ ...ಸ್ಯವೆಂದು ಗುಂಪುಗೂಡಿ ಸ್ಥಳಕ್ಕೆ ...ದಾಗ ಆ ಪ್ರಣಯಿಗಳಿಬ್ಬರೂ ...ಗ್ನ ಸ್ಥಿತಿಯಲ್ಲೇ ಪರಾರಿಯಾದರು.



ಓಡಿಹೋದವನು ಭಜರಂಗ ... ದುಗ್ಗಪ್ಪ, ಈತ ಮಾತ್ತೂರು ... ಡೈರಿಯಲ್ಲಿ ಪರೀಕ್ಷಕ ಆಕೆ ಅಂಚಿ ...ಯೊಂದರ ನೌಕರಳು. ಆದರೆ ಹೀಗೆ ...ಬದ್ಧವಾಗಿ ಅರೆನಗ್ನರಾಗಿ ಸಿಕ್ಕಿ ಬಿದ್ದ ...ರ ಇವರಿಬ್ಬರೂ "ನಾವು ...ಗಳಾಗಿದ್ದು ಮದುವೆ ಬಗ್ಗೆ ಮಾತಾಡಲು ಕುರುಚಲು ಕಾಡಿನೊಳಗೆ ...ಗಿದ್ದೆವು" ಎಂದು ಹೇಳಿಕೊಳ್ಳುತ್ತಿದ್ದಾರೆ. ಪ್ರೇಮಿಗಳು ತಮ್ಮ ...ವೆ ಬಗ್ಗೆ ಡಿಸ್ಕಸ್ ಮಾಡಲು ಮನೆಗೂ ಹೋಗದೆ ಬೀದೀಲೂ ... ನಿರ್ಜನ ಪ್ರದೇಶದ ಕುರುಚಲು ಕಾಡಿನ ಸ್ಮಶಾನಕ್ಕೆ ಹೋಗಿದ್ದು ...ರ್ಯವಲ್ಲವೆ? ಅಲ್ಲಿ ಪುರೋಹಿತನಿಲ್ಲ, ನೆಂಟರಿಲ್ಲ, ಸ್ನೇಹಿತರಿಲ್ಲ ...ಗೆ ಮೈಮೇಲೆ ಬಟ್ಟೆಯೂ ಇಲ್ಲ...

...ಏನಾಯಿತೆಂದರೆ ಈ ರಾಸಲೀಲೆಯ ಹಗರಣ ಅದರ ಮರುದಿನ ...ವಳಿ ಅಲೆ'ಯಲ್ಲಿ ಪ್ರಕಟವಾಯಿತು. ಕೋಸ್ಟಲ್ ಕರ್ನಾಟಕದ ...ೋದ್ಯಮದ ಜಾಯಮಾನವಾಗಿರುವ ಸೆನ್ಸೇಷನಲಿಸಂ ಈ ...ಯಲ್ಲೂ ಇತ್ತು. ಈ ದುಗ್ಗಪ್ಪ ಮತ್ತವನ ಗೆಳತಿ ಇಬ್ಬರೂ ...ರಿ ನೌಕರರು. ಆದರೆ ಬೆಳಗ್ಗೆ ಆಫೀಸಿಗೆ ಬಂದು ಅಟೆಂಡೆನ್ಸ್ ...ದವರು ಡ್ಯೂಟಿ ಮಾಡಲು ಕುರುಚಲು ಕಾಡಿಗೆ ಹೋಗಿದ್ದು ...ದು 'ಅಲೆ' ಬರೆಯಿತು. ಆಗ ಶುರುವಾಯಿತು ನೋಡಿ ಇನ್ನೊಂದು ...ಣ. ಭಜರಂಗ ದಳದ ಕುಪ್ಪೆಪದವು ಘಟಕದ ಸದಸ್ಯನಾಗಿರುವ ...ಪ್ಪ ಮತ್ತವನ ಗೆಳತಿ ದಲಿತರೆಂತಲೂ ಅವರ ವಿರುದ್ಧ ತೇಜೋವಧೆ, ...ನಿಂದನೆಯಾಗಿದೆಯೆಂತಲೂ ಪೊಲೀಸರಿಗೆ ದೂರು ಹೋಯಿತು.

...ಜಯ ಕರ್ನಾಟಕ ಹಾಗೂ ಸ್ಥಳೀಯ ಜಯಕಿರಣ ಪತ್ರಿಕೆಗಳಂತೂ ... ಛಾನ್ಸ್ ಎಂಬಂತೆ ಕರಾವಳಿ ಅಲೆ ವಿರುದ್ಧ ಮುಗಿಬಿದ್ದವು. ಈ ...ಡಿ ಗುಡ್ಡದಲ್ಲಿ ಕುಳಿತು ಮಾತನಾಡಿದ್ದನ್ನೇ ಅಲೆಯು ಅನೈತಿಕ ...ವಟಿಕೆ ಎಂದು ಬರೆದಿದೆ, ಆದರಿಂದ ದಲಿತ-ಸಮುದಾಯಕ್ಕೆ ...ಮಾನ ಆಗಿದೆ ಎಂದು ದಲಿತರನ್ನು ಪ್ರಚೋದಿಸುವ ತಂತ್ರವನ್ನು ಈ ಪುರೋಹಿತ ಪತ್ರಿಕೆಗಳು ಮಾಡಿದವು. ಕೆಲ ದಲಿತ ಸಂಘಟನೆಗಳಂತೂ ಇದನ್ನು ನಂಬಿಯೂ ಬಟ್ಟವು. ಹೀಗೆ ಪ್ರಕರಣ ಹೊಸ ತಿರುವು ಪಡೆಯುತ್ತಿದ್ದಂತೆ ಕರಾವಳಿ ಅಲೆ ತಾನು ಪ್ರಕಟಿಸಿದ್ದ ಸುದ್ದಿಯು ಸತ್ಯ ಎಂದು ಸಾಬೀತುಮಾಡಲು ದುಗ್ಗಪ್ಪನ 'ಸ್ಮಶಾನ ರಾಸಲೀಲೆ'ಯ ಒಂದೆರಡು ನೀಲಿ ಚಿತ್ರಗಳನ್ನೇ ಪ್ರಕಟಿಸಿಬಿಟ್ಟಿತು. ಇದರಿಂದ ಸತ್ಯಸಂಗತಿ ಏನೆಂದು ಎಲ್ಲರಿಗೂ ಗೊತ್ತಾಗಿತಾದರೂ ಸೀತಾರಾಂ ಟೀಮಿನ ವಿರುದ್ಧದ ಅಟ್ರಾಸಿಟಿ ಕೇಸಿನ ತನಿಖೆ ನಡೆದೇ ಇದೆ. ಈ ಬಗ್ಗೆ ತನಿಖೆ ನಡೆಸಲು ಪಣಂಬೂರು ಡಿವೈಎಸ್‌ಪಿ ಗಿರೀಶ್ ಖುದ್ದಾಗಿ ಸ್ಥಳಕ್ಕೆ ಹೋಗಿ ಬಂದಿದ್ದಾರೆ. ಅವರಿಗೆ ಕುಪ್ಪೆಪದವಿನ ಆಸುಪಾಸಿನ ಇಪ್ಪತ್ತು ಜನ ಪ್ರತ್ಯಕ್ಷದರ್ಶಿಗಳು ದುಗ್ಗಪ್ಪನ ಹೀನ ನಡವಳಿಕೆ ಬಗ್ಗೆ ಹೇಳಿಕೆ ನೀಡಿದ್ದಾರೆ. ಸ್ಥಳದಲ್ಲಿದ್ದ ಟಾರ್‌ಪಾಲು ಹಾಗೂ ದುಗ್ಗಪ್ಪ ಜೋಡಿಯ ಮುಖ್ಯ ಬಟ್ಟೆಗಳೂ ಪೊಲೀಸರಿಗೆ ಸಿಕ್ಕಿವೆ. ಬಹಳ ಮುಖ್ಯವಾಗಿ ರಾಸಲೀಲೆಯ ಕೆಲ ಫೋಟೋಗಳು ಹಾಗೂ ಸಿಡಿ ಡಿವೈಎಸ್‌ಪಿ ಗಿರೀಶರ ಕೈ ಸೇರಿದೆ. ಅಟ್ರಾಸಿಟಿ ಕೇಸು ದಾಖಲಿಸಿಕೊಂಡಿರುವ ಪೊಲೀಸರು ಕರಾವಳಿ ಅಲೆ ಕಚೇರಿ ಮೇಲೇ ದಾಳಿ ಮಾಡಿ ಕೆಲ ದಾಖಲೆ ಪಡೆದುಕೊಂಡಿದ್ದಾರೆ. ಆದರೂ ಡಿವೈಎಸ್‌ಪಿ ಗಿರೀಶ್ ತಾಳ್ಮೆಯಿಂದ ಪ್ರಕರಣದ ಸತ್ಯಾಸತ್ಯತೆ ಪರಿಶೀಲಿಸುತ್ತಿರುವುದು ಉತ್ತಮ ನಡವಳಿಕೆಯಾಗಿದೆ. ಬಿ.ವಿ. ಸೀತಾರಾಂ ಮಾತ್ರ ಎಂದಿನಂತೆ ಜಾಮೀನಿಗೆ ಓಡಾಡುತ್ತಿದ್ದಾರೆ. ಕರಾವಳಿಯ ದಲಿತ ಸಮುದಾಯಕ್ಕೂ ಹಾಗೂ ಸಂಘಟನೆಗಳ ನಾಯಕರಿಗೂ ವಸ್ತುಸ್ಥಿತಿ ಏನೆಂಬುದು ಈಗ ಗೊತ್ತಾಗಿದೆ. ಆದರೆ ಇನ್ನು ಮುಂದೆ ಗೊತ್ತಾಗಲೇ ಬೇಕಿರುವ ವಿಚಾರ ಏನೆಂದರೆ ಈ ರಾಸಲೀಲೆಯ ಫೋಟೋ ತೆಗೆದವರ್‍ಯಾರು ಎಂಬುದು?

ಕರ್ನಾಟಕದ ಅನೇಕ ಕಡೆ ಈ ಭಜರಂಗಿಗಳು ಮುಗ್ಧ ಹುಡುಗಿಯರನ್ನು ನಂಬಿಸಿ ಸೆಕ್ಸ್ ಸೀಡಿಗಳನ್ನು ತಯಾರಿಸಿ ಸಿಕ್ಕಿಬಿದ್ದ ಘಟನೆಗಳು ಈಗಾಗಲೇ ನಡೆದಿವೆ. ಇದೇ ಮಂಗಳೂರಿನ ಎಡಪದವಿನಲ್ಲಿ ಭಜರಂಗಿ ಒಡಿಲ್ ಸುಧಾಕನ ಸೆಕ್ಸ್ ಸಿಡಿ ಹಗರಣ ಜನರಿಗೆ ಈಗಲೂ ನೆನಪಿದೆ. ಈ ದುಗ್ಗಪ್ಪ ಅದೇ ಉದ್ದೇಶಕ್ಕಾಗಿ ತಾನೇ ತನ್ನ ಗೆಳತಿಯ ಸೆಕ್ಸ್ ಸಿಡಿ ಮಾಡಿಸಲು ಉಪಾಯ ಮಾಡಿದ್ದನಾ ಎಂಬ ಬಗ್ಗೆಯೂ ಪೊಲೀಸರು ವಿಚಾರಿಸಬೇಕಿದೆ. ಏಕೆಂದರೆ ಇದೇ ಭಜರಂಗಿ ದುಗ್ಗಪ್ಪ ಈಗ್ಗೆ ನಾಲ್ಕು ತಿಂಗಳ ಹಿಂದೆ ಬೇರೊಂದು ಹುಡುಗಿಯ ಜೊತೆಯಲ್ಲಿ ಪಕ್ಕದ ಗ್ರಾಮದ ಗುಡ್ಡದಲ್ಲಿ ತನ್ನ ಮಾಮೂಲಿ ರಾಸಲೀಲಾ ವಿನೋದ ಭಂಗಿಯಲ್ಲಿ ಸಿಕ್ಕಿಬಿದ್ದು ಜನರಿಂದ ಧರ್ಮದೇಟು ತಿಂದಿದ್ದ. ಕೊನೆಗೆ 'ನಾವಿಬ್ಬರೂ ಪ್ರೇಮಿಗಳು, ಸದ್ಯದಲ್ಲೇ ಮದುವೆಯಾಗುತ್ತಿದ್ದೇವೆಂದು ಹೇಳಿ ಪರಾರಿಯಾಗಿದ್ದ. ಈಗ ನೋಡಿದರೆ ಇನ್ನೊಬ್ಬ ಹುಡುಗಿಯನ್ನು ಪುಸಲಾಯಿಸಿ ಕಾಡಿಗೆ ಕರೆದೊಯ್ದು ಸಿಕ್ಕಿಬಿದ್ದು 'ನಾವು ಪ್ರೇಮಿಗಳು, ಮದುವೆ....' ಎಂಬಿತ್ಯಾದಿ ಹಳೇ ಪ್ಲೇಟನ್ನೇ ಹಾಕಿದ್ದಾನೆ.

ಈ ಭಜರಂಗಿಗಳಿಗೆ ಮುಸ್ಲಿಮರು ಬಲಿಯಾದರು, ಆಮೇಲೆ ಕ್ರಿಶ್ಚಿಯನ್ನರು ಪೆಟ್ಟು ತಿಂದರು. ಈಗ ದಲಿತ ಯುವತಿಯರೂ ಬಲಿಪಶುಗಳಾಗುವ ಸ್ಥಿತಿ ಬಂದಿದೆ.

● ಪಾರ್ವತೀಶ

...ಕರಾವಳಿ ಅಲೆ ದಲಿತ ವಿರೋಧಿಯಲ್ಲ ಕೋಮುವಾದಿ ವಿರೋಧಿ

...ಜನಪರ ಹಾಗೂ ಜನವಿರೋಧಿ ಜರ್ನಲಿಸಂ ಎಂದು ವಿಭಜಿಸಲ್ಪಟ್ಟಿರುವ ಕರಾವಳಿ ಕರ್ನಾಟಕದಲ್ಲೀಗ ನಿತ್ಯ ರಣರಂಗ. ಚರ್ಚ್ [illegible] ಉಮೇಶ್ಗೌಡ ವಿರುದ್ಧದ ಗಲಾಟೆ, ಈಗ ಹಿಂದೂ ವೀರ ದುಗ್ಗಪ್ಪನವರ ರಾಸಲೀಲೆಗಳೆಲ್ಲಾ ಹಿಂದೂ ಕೋಮುವಾದದ ಪರ ...ಧಗಳೆಂಬ ಆಯಾಮ ಪಡೆದುಕೊಳ್ಳುತ್ತಿವೆ.

[illegible] ಕವನದಲ್ಲಿ [illegible] ಕೋಮುವಾದಿಗಳೇ ಕೆಲವೊಮ್ಮೆ ದಲಿತ ಪರ ಕಾಳಜಿ ತೋರಿಸಿಬಿಡುವ ಪವಾಡಗಳೂ [illegible] ಕೆಲವೊಮ್ಮೆ [illegible] ಕಾರಣವಿಟ್ಟುಕೊಂಡೇ ಇವರು ದಲಿತ ವಿರೋಧಿಗಳಾಗಿಯೂ ಡಬಲ್ ...ಬಿಡುತ್ತವೆ. ಅದೇ ರೀತಿ ಕೆಲವೊಮ್ಮೆ [illegible] ಉಮೇಶ್ಗೌಡ ಹಾಗೂ ಭಜರಂಗಿ ದುಗ್ಗಪ್ಪನ ಪ್ರಕರಣಗಳೇ ಇದಕ್ಕೆ ಸಾಕ್ಷಿ. [illegible] ಮಾಡುತ್ತಿರುತ್ತಾರೆ. ಮಂಗಳೂರು ವಿ.ವಿ.ಯ ಉಮೇಶ್ಗೌಡ ಹಾಗೂ [illegible] ಹಿಂದೂಗಳನ್ನು ಎತ್ತಿಕಟ್ಟಿ ದೊಂಬಿ [illegible] ವಿರೋಧಿ ದಲಿತರಾಗಿರುವ ಕಾರಣ ಅವರ ವಿರುದ್ಧ [illegible] ಭಜರಂಗ ದಳದ ಕಾರ್ಯಕರ್ತನಾಗಿರುವ ಕಾರಣ ಆತನ ಹಲ್ಕಟ್ ಕೆಲಸಗಳಿಗೆ [illegible] ದಲಿತ ದುಗ್ಗಪ್ಪ ಭಜರಂಗ ದಳದ ಕಾರ್ಯಕರ್ತನಾಗಿರುವ ಕಾರಣ [illegible] ದುಗ್ಗಪ್ಪನ ಪರವಾಗಿ ದಲಿತರನ್ನೇ ಗುಂಪುಗೂಡಿಸುವ ಪಿತೂರಿ ಮಾಡಿದ್ದಾರೆ. ಕರಾವಳಿ ಅಲೆ ...ವಾದಿಗಳು [illegible] ದಲಿತ ಪರವಾಗಿದೆಯೇ ವಿನಃ ದಲಿತ ವಿರೋಧಿಯಾಗಿಲ್ಲ.

[illegible] ಮೌಲ್ಯರಹಿತ [illegible] ಸನ್ನಿಯನ್ನು [illegible] ಈ ಪ್ರಕರಣದಲ್ಲಿ ತಾನೇ ಸೃಷ್ಟಿಸಿಕೊಂಡಿರುವ [illegible] ಕರಾವಳಿ ಅಲೆ ಸಂಪಾದಕರಾದ ಸೀತಾರಾಮ್ [illegible] ಪರಿಣಾಮಗಳನ್ನು ಲೆಕ್ಕಿಸದೇ ಮತ್ತೊಂದು ರೋಚಕ ವರದಿಯನ್ನಷ್ಟೇ [illegible] ಬಲಿ [illegible] ಪ್ರಕರಣದ ಬಟಾಬಯಲು [illegible] ಮತ್ತು ಪರಿಣಾಮಗಳನ್ನು [illegible] ಸೀತಾರಾಮ್‌ರ ವಿರುದ್ಧ ಕೋಮುವಾದಿಗಳು ರೂಪಿಸುತ್ತಿರುವ ಷಡ್ಯಂತ್ರವನ್ನು [illegible] ಕಾಣುತ್ತವೆ. [illegible] ಮೌಲ್ಯರಹಿತ ಸೆನ್ಸೇಷನಲಿಸಂ ಪತ್ರಿಕೋದ್ಯಮ ಕೂಡಾ ಖಂಡನಾರ್ಹ.

...ಧಿಸುವ ವೇಳೆಯಲ್ಲಿ ಕರಾವಳಿ ಅಲೆ [illegible] ಮೌಲ್ಯರಹಿತ [illegible]

ನೀವು ಯಾವ ಚಳವಳಿನೂ ಮಾಡಿಲವಲ್ಲ ಸಾರ್!

ಹಂಪೆಯಲ್ಲಿ ಆಡಳಿತ ಪಕ್ಷದ ಲಫಂಗರು ಅಟ್ಟಹಾಸಗೈಯ್ಯುತ್ತಿರುವಾಗಲೇ ಅತ್ತ ಬಳ್ಳಾರಿಯಲ್ಲಿ ದುಡಿದುಣ್ಣುವ ಮಕ್ಕಳು ಮಣ್ಣಿನಡಿಯಲ್ಲಿ ಸೇರಿಹೋದರಂತಲ್ಲಾ, ಆಗ ಸುಸ್ಮ ಎಂಬ ಅಮ್ಮನ ಜೊತೆ ಸಂತೋಷವಾಗಿರಲು ಹಾತೊರೆಯುತ್ತಿದ್ದ ಶ್ರೀರಾಮುಲು ಎಂಬ ವಿಲಾಸಿಜೀವಿ ಬಳ್ಳಾರಿಗೆ ಹೋಗಿ ಸತ್ತವರ ದರ್ಶನ ಮಾಡುವ ರಿಸ್ಕನ್ನ ನೆನೆಸಿಕೊಂಡು ಸತ್ತವರನ್ನೇ ಶಪಿಸುತ್ತ ಹೊರಟನಂತಲ್ಲಾ, ಇತ್ತ ಹಂಪಿ ಉತ್ಸವದ ಅಮಲಿಗೆ ತುತ್ತಾದ ಎಡೂರಪ್ಪ ಶ್ರೀಕೃಷ್ಣದೇವರಾಯನ ಆಡಳಿತವನ್ನು ನೆನಪಿಸುವಂತ ಆಡಳಿತ ಕೊಡುತ್ತೇನೆಂದು ಠೇಂಕಾರ ಮಾಡಿದರಂತಲ್ಲಾ, ಆಗ ಪರಸ್ಪರ ಮುಖ ನೋಡಿಕೊಂಡ ಜನಾರ್ದನ ಮತ್ತು ಕರುಣಾಕರ ಎಡೂರಪ್ಪನನ್ನ ಕರುಣಾ ಪೂರಿತವಾಗಿ ನೋಡಿ ನಕ್ಕರಂತಲ್ಲಾ, ಥೂತ್ತೇರಿ!

* * * * *

ಗಣರಾಜ್ಯೋತ್ಸವದ ಕೊಡುಗೆಯಾಗಿ ಎಡೂರಪ್ಪನಿಗೆ ಚೆಡ್ಡಿಗಳು ಚರ್ಚಿನ ಮೇಲೆ ಕಲ್ಲು ಬೀರಿವೆಯಂತಲ್ಲಾ, ಇದನ್ನು ಅತ್ಯಂತ ಸೂಕ್ಷ್ಮವಾಗಿ ಮೇಧಾವಿತನದಿಂದ ವ್ಯಾಖ್ಯಾನಿಸಿರುವ ಗೃಹಮಂತ್ರಿ ಆಚಾರಿ "ಚರ್ಚಿನ ಮೇಲೆ ಕಲ್ಲು ತೂರಿರುವ ಉದ್ದೇಶದಲ್ಲಿ ವಿಗ್ರಹ ಭಜನೆಯ ಕೃತ್ಯ ಲ್ಲ ಬದಲಿಗೆ ಹುಂಡಿಯನ್ನು ಒಡೆಯುವ ಹುನ್ನಾರವಿದೆ. ವಾಸ್ತವವಾಗಿ ಹುಂಡಿಯನ್ನು ಒಡೆಯುವಷ್ಟು ಬಡತನ ನಮ್ಮ ಆರೆಸ್ಸೆಸ್ಸಿಗರಿಗೆ ಇಲ್ಲ, ನಮ್ಮವರು ಈಗ ಇತರರಿಗೆ ಕೈ ನೀಡಿ ಕಾಣಿಕೆ ಕೊಡುವಂತಹ ಸುಸ್ಥಿತಿಯಲ್ಲಿದ್ದಾರೆ." ಎಂದು ಹೇಳದಿದ್ದರೂ "ಚರ್ಚಿನ ಮೇಲೆ ಯಾರು ದಾಳಿ ಮಾಡಿದ್ದಾರೆ ಎಂಬುದು ನನಗೆ ಚೆನ್ನಾಗಿ ಗೊತ್ತು. ಸೂಕ್ತ ಸಮಯದಲ್ಲಿ ನಾನವರ ಕೈ ಕತ್ತರಿಸುತ್ತೇನೆ" ಎಂದು ಎಡೂರಪ್ಪ ಗುಡುಗಿದ್ದಾರಂತಲ್ಲಾ, ಇದರಿಂದ ಬೆಚ್ಚಿದ ಪ್ರಮೋದ್ ಮುತಾಲಿಕ್ ಎಂಬ ಮಂದಮತಿಯು "ಎಡೂರಪ್ಪನವರು ಇಂತಹ ಹೇಳಿಕೆ ಕೊಡಬಾರದು. ನಮ್ಮವರ ಕೈ ಕತ್ತರಿಸಿದರೆ, ನಾವು ಲಾಠಿ ಬೀಸುವುದು ಹೇಗೆ? ಚರ್ಚು, ಮಸೀದಿಗಳಿಗೆ ಕಲ್ಲು ಬೀಸೋದು ಹೇಗೆ. ಗಣಪತಿ ಮೆರವಣಿಗೆ ಮೇಲೆ ಚಪ್ಪಲಿ ತೂರುವುದು ಹೇಗೆ? ಆದ್ದರಿಂದ ಯಡ್ಯೂರಪ್ಪನವರು ತಮ್ಮ ಶಿಕ್ಷೆಯ ಸ್ವರೂಪವನ್ನು ಬದಲಿಸಿಕೊಳ್ಳದಿದ್ದಲ್ಲಿ ನಾವು ಕಾಲನ್ನು ಬಳಸಬೇಕಾಗುತ್ತದೆ ಎಂದರಂತಲ್ಲಾ, ಥೂತ್ತೇರಿ!

* * * * *

ಮಣ್ಣಿನ ಮಗನ ಹೋರಾಟವನ್ನು ಮನಸಾರೆ ಮೆಚ್ಚಿಕೊಂಡು ಕೊಂಡಾಡುತ್ತಿರುವ ಬಂಗಾರಪ್ಪನವರನ್ನು ಮಾತನಾಡಿಸಬೇಕೆನಿಸಿತಲ್ಲಾ, ಕೂಡಲೇ ಫೋನ್ ಮಾಡಿದರೆ ಸಿಕ್ಕಿದರು.

ರಿಂಗ್‌ಟೋನ್ : "ಯಾರೇ ಕೂಗಾಡಲಿ, ಊರೇ ಹೋರಾಡಲಿ ನಿನ ನೆಮ್ಮದಿಗೆ ಭಂಗವಿಲ್ಲ....."

"ಹಲೋ ಯಾರು?"



"ನಾನು ಸಾರ್, ಯಾಹು ಅಂತ ಪತ್ರಕರ್ತ."

"ಏನ್ರಿ ಯಾಹು ಅವ್ರೆ, ಚೆನ್ನಾಗಿದ್ದೀರ."

"ನಂದಿರ್ಲಿ, ನೀವು ಚೆನ್ನಾಗಿದ್ದೀರ ಸಾರ್?"

"ನನಿಗೇನಾಗಿದೆ? ಚೆನ್ನಾಗೇ ಇದ್ದಿನಿ. ಸ್ಪೋರ್ಟ್ಸ್ ಮ್ಯಾನ್ ನಾನು."

"ಎಂಥಾ ಕ್ರೀಡಾಪಟುವನ್ನು ಕಾಲ ಸೋಲಿಸುತ್ತಲ್ಲ ಸಾರ್."

"ಅದು ನಿಜ. ಅನಿವಾರ್ಯ, ಏನೂ ಮಾಡಕ್ಕಾಗಲ್ಲ."

"ನೀವು ಎಡೂರಪ್ಪನ ಮಗನೆದ್ರಿಗೆ ನಿಮ್ಮ ಮಗನ್ನ ನಿಲ್ಲಸಬೇಕಾಗಿತ್ತು, ಅಂಗೆ ಎಡೂರಪ್ಪನೆದ್ರಿಗೆ ಮಹಾಲಿಂಗಪ್ಪನ್ನ ನಿಲ್ಲುಸಬೇಕಾಗಿತ್ತು ಸಾರ್."

"ನಾನು ಯಾವತ್ತು ಅವ್ರಿವ್ರನ್ನ ಬಾವಿಗೆ ನೂಕಿ ಆಳನೋಡಲ್ಲ, ಸ್ವತಃ ನಾನೇ ಧುಮುಕಿ ಆಳ ನೋಡ್ತೀನಿ."

"ಅಂತ ಧೈರ್ಯ ಮಾಡಿ ಪಾತಾಳಕ್ಕೋಗಿಬುಟ್ರಲ್ಲ ಸಾರ್."

"ಆ ಮಾತನ್ನ ವಾಪಸ್ ತಗೊಳ್ಳಿ. ರಾಜಕಾರಣದಲ್ಲಿ ಏನು ಬೇಕಾದ್ರು ಆಗಬಹುದು. ದೇವೇಗೌಡ್ರು ಕನಕಪುರ, ಹೊಳೆನರಸೀಪುರದಲ್ಲಿ ಸೋತೋಗಿದ್ರು. ಎಲ್ರೂ ಅವ್ರ ಕತೆ ಮುಗಿತು ಅನ್ಕೊಂಡ್ರು. ಆದ್ರೆ ಪ್ರಧಾನಿಯಾದ್ರು ಗೊತ್ತ! ಐ ಲೈಕ್ ಹಿಮ್."

"ಇದೇನ್ ಸಾರ್ ಇದ್ದಕ್ಕಿದ್ದಂಗೆ ದೇವೇಗೌಡ್ರ ಮೆಚ್ಚಿಗೊತಿರಿ?"

"ನೋಡಿ, ಈ ವಯಿಸಿನಲ್ಲಿ ಅವ್ರು ನೈಸ್ ವಿರುದ್ಧ ಚಳವಳಿ ಮಾಡ್ತಾಯಿದಾರೆ. ಅದೂ ರಸ್ತೆ ಮೇಲೆ ಕುಳಿತಗೊಂಡು. ಇಂಥ ವ್ಯಕ್ತಿನ ಈ ಸಂದರ್ಭದಲ್ಲಿ ಭಾಳ ಅಪರೂಪ."

"ದೇವೇಗೌಡ್ರು ಚಳವಳಿ ನಿಮಗೆ ಮೆಚ್ಚುಗೆ ಆಗಿರದು ಆಶ್ಚರ್ಯ."

"ಯಾಕ್ರಿ ಹಾಗಂತಿರಿ? ಒಳ್ಳೆದನ್ನ ಮೆಚ್ಚಿಗೊಳೊದು ನನ್ನ ಸ್ವಭಾವ."

"ಅದು ಸರಿ, ಎಂದೂ ಯಾವ ಚಳವಳಿನೂ ಮಾಡದೆಯಿರೋ ನೀವು ದೇವೇಗೌಡ್ರ ಚಳವಳಿ ಮೆಚ್ಚಿರೋದು ಆಶ್ಚರ್ಯಕರ."

"ಇದೇನ್ರಿ ಹಿಂಗಂತಿರಿ. ನಾನು ಚಳವಳೀನೆ ಮಾಡಿಲ್ವೆ?"

"ಇಲ್ಲ ಸಾರ್. ನನಗೆ ಗೊತ್ತಿರೊ ಹಾಗೆ ನೀವು ಯಾವ ಚಳವಳಿನೂ ಮಾಡಿಲ್ಲ, ಒಂದು ವೇಳೆ ನೀವು ಹೋರಾಟ ಮಾಡಿದ್ರೆ ಅವೆಲ್ಲಾ ನಿಮ್ಮ ಹಠ ಸಾಧನೆಗೆ ಅಥವಾ ನಿಮ್ಮ ಸ್ಥಾನಮಾನದ ಗುರಿಗೆ."

"ರೀ ಯಾಹು, ನಾವು ಗೋಪಾಲಗೌಡ್ರು ಜೊತೆ ಇದ್ದೋರು ಗೊತ್ತ?"

"ಇದ್ರಿ ಸಾರ್, ಆದ್ರೆ ಗೋಪಾಲಗೌಡ್ರ ಬೇರೆ, ನೀತಿ ಬೇರೆ. ನಿಮ್ಮ ಜಿಲ್ಲೇಲಿ ಏನೇನೂ ನ್ಯಡಿತು. ಅಲ್ಲೆಲ್ಲೂ ನೀವು ಕಾಣಿಸಿಕೊಳ್ಳಲೇಯಿಲ್ಲ, ಹೋಗ್ಲಿ ನಿಮ್ಮ ನಂತರ ಜನಗಳನ್ನಾದ್ರು ತಯಾರು ಮಾಡಿದ್ದಿರ, ಅದೂ ಇಲ್ಲ, ಮಕ್ಕನ್ನ ಎದುರಾಬದುರಾ ನಿಲ್ಲಿಸಿ, ಸೋಲಿಸಿ, ನೀವೂ ಸೋತು ಸುಣ್ಣಾಗಿ ಮನೇಲಿ ಕುಂತಿದ್ದಿರಿ."



"ಮಿಸ್ಟರ್ ಯಾಹೂ, ಇಂತದನೆಲ್ಲಾ ಹೇಳದಾದ್ರೆ ನೀವು ಫೋನ್ ಮಾಡೋದೇ ಬೇಡ. ಇದೆಲ್ಲಾ ನಾನ್‌ಸೆನ್ಸ್."

"ಸಾರಿ ಸಾರ್, ಆದ್ರೆ ಎಂ.ಪಿಯಾಗಿ ನೀವು ಆದರ ಘನತೆ ಕಾಪಾಡಿಕೊಂಡ್ರಿ. ಸಣ್ಣ ರಾಜಕಾರಣ ಮಾಡಲಿಲ್ಲ, ವರ್ಗಾವಣೆಗೆ ದುಡ್ಡು ತಗೊಳ್ಳಿಲ್ಲ, ಹುದ್ದೆಗಳಿಗೆ ರೇಟ್ ಫಿಕ್ಸ್ ಮಾಡಲಿಲ್ಲ."

"ಹಾಗೇಳಿ ಮತ್ತೆ!"

"ಆದ್ರುವೆ ಏನು ಮಾಡಿ ಏನು ಬಂತಣ್ಣ ಅನ್ನಂಗೆ ಕಾಣ್ತಾದೆ ಸಾರ್ ನಿಮ್ಮ ರಾಜಕಾರಣ."

"ರೀ, ಪೋಲಿಶಾಗಿ ಮಾತಾಡಬೇಡಿ. ನಾನು ಮುಖ್ಯಮಂತ್ರಿಯಾಗಿದ್ದಾಗ ಎಂತೆಂಥ ಕಾರ್ಯಕ್ರಮ ಕೊಟ್ಟೆ, ಗೊತ್ತ? ಅಕ್ಷಯ, ಆಶ್ರಯ, ಶುಶ್ರೂಷೆ ಯೋಜನ ವಿಶ್ವ ಮತ್ತೊಂದು ಮಗದೊಂದು ಅಂತ ಕಾರ್ಯಕ್ರಮ ಹಾಯ್ಕೊಂಡು ಎರಡೇ ವರ್ಷದಲ್ಲಿ ಸಾಧನೆ ಸಮಾವೇಶ ಮಾಡಿ ಇಡೀ ಕರ್ನಾಟಕ ಈವರೆಗೂ ಕಂಡಿರೊ ಮುಖ್ಯಮಂತ್ರಿಗಳಲ್ಲೇ ಭಾಳ ವಿಶೇಷವಾದ ಮುಖ್ಯಮಂತ್ರಿ ಅಂತ ಜನ ಹೊಗಳ್ತ ಇರುವಾಗ ನೀವು ಆರೆಸ್ಸೆಸ್ಸೋರ ತರ ಮಾತಾಡ್ತಿರಲ್ಲ, ಇಡ್ರಿ ಫೋನ್"

"ಥೂತ್ತೇರಿ!!!"

●

ಪ್ರಾಮಾಣಿಕ ಪತ್ರಕರ್ತ

ಇತ್ತೀಚೆಗೆ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ನಡೆದ "ಸುದ್ದಿ ಖರೀದಿ"ಯನ್ನು ಪತ್ರಕರ್ತ ಪಿ. ಸಾಯಿನಾಥ್ ಬಹಿರಂಗಪಡಿಸಿದ ನಂತರ ಆ ಬಗ್ಗೆ ರಾಷ್ಟ್ರಮಟ್ಟದಲ್ಲಿ ಈಗ ಚರ್ಚೆಯಾಗುತ್ತಿದೆ. ರಾಜಕಾರಣಿಗಳು ಪತ್ರಿಕೆಗಳ ಮಾಲೀಕರಿಗೆ ಹಣ ನೀಡಿ, ತಮ್ಮ ಬಗ್ಗೆ ಹೊಗಳಿಕೆಯ ಮಾತುಗಳನ್ನು ವರದಿಯ ರೂಪದಲ್ಲಿ 'ಜಾಹೀರಾತು' ಎಂದು ಎಲ್ಲೂ ನಮೂದಿಸದೆ ಪ್ರಕಟಿಸಿಕೊಳ್ಳುವುದೇ 'ಸುದ್ದಿ ಖರೀದಿ'; ಅಂದರೆ ಜಾಹೀರಾತಿಗೆ 'ತಾಜಾ ಖಬರ್'ನ ಫ್ಯಾನ್ಸಿಡ್ರೆಸ್. ಸುದ್ದಿ ಖರೀದಿ ತೀರ ಹೊಸ ವಿದ್ಯಮಾನವೇನೂ ಅಲ್ಲ. 1999ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ "ಜಾಣ ಯುವಕ" ಪ್ರಮೋದ್ ಮಹಾಜನ್ ಪತ್ರಕರ್ತರನ್ನು "ಚೆನ್ನಾಗಿ ನೋಡಿಕೊಂಡು" ಮಾಧ್ಯಮದಲ್ಲಿ ಬಿಜೆಪಿ ಪರ ಅಲೆ ಮೂಡಿಸಿದ್ದರ ಬಗ್ಗೆ ಆಗಲೇ ಗುಸುಗುಸು ಕೇಳಿಬಂದಿತ್ತು.


ಸುದ್ದಿ ಖರೀದಿಯ ಹಲವು ವಿಧಾನಗಳು ಕನ್ನಡ ಪತ್ರಿಕಾರಂಗದಲ್ಲೂ ಚಾಲ್ತಿಯಲ್ಲಿವೆ. ಸರಕಾರದಿಂದ ಹೇರಳವಾಗಿ ಜಾಹೀರಾತು ಪಡೆದು ಆಳುವ ಪಕ್ಷಕ್ಕೆ ಅನುಕೂಲವಾಗುವಂತಹ ಸುದ್ದಿಗಳನ್ನು ಮಾತ್ರ ಪ್ರಕಟಿಸುವುದು ಅನೀತಿ ಎಂದು ಕೂಡ ಈಗ ಯಾರಿಗೂ ಅನ್ನಿಸುತ್ತಿಲ್ಲ. ಎಲ್ಲ ಪತ್ರಿಕೆಗಳೂ ಅದನ್ನೇ ಮಾಡುತ್ತಿರುವಾಗ, 'ನೀತಿ'ಯ ಮಾದರಿಯಾದರೂ ಎಲ್ಲಿದೆ? ಕನ್ನಡದ ಕೆಲವು ಜನಪ್ರಿಯ ಪತ್ರಿಕೆಗಳಂತೂ ಇನ್ನೂ ಮುಂದೆ ಹೋಗಿ ಆಳುವ ಪಕ್ಷದ ಮುಖವಾಣಿಗಳೇ ಆಗಿಬಿಟ್ಟಿವೆ. ಕರ್ನಾಟಕದಲ್ಲಿ ಆರ್‌ಎಸ್‌ಎಸ್, ಭಜರಂಗದಳಗಳಂತಹ ಫ್ಯಾಸಿಸ್ಟ್ ಸಂಘಟನೆಗಳನ್ನು ಜನಪ್ರಿಯಗೊಳಿಸಿರುವುದರಲ್ಲಿ ಈ ಪತ್ರಿಕೆಗಳ ಕೊಡುಗೆಯೂ ಇದೆ. ಹಾಗಾಗಿ 'ಪ್ರಾಮಾಣಿಕ ಪತ್ರಕರ್ತ' ಎಂಬ ಮಾತು ಈಗ ಸವಕಲು ಅಷ್ಟೇ ಅಲ್ಲ; ಅದೊಂದು ಅರ್ಥಹೀನ ವಿರುದ್ಧೋಕ್ತಿಯೂ ಆಗಿದೆ.

ಕಳೆದ ಹತ್ತು ವರ್ಷಗಳಲ್ಲಿ ಅಂದರೆ ಲಂಕೇಶ್ ನಮ್ಮೊಂದಿಗೆ ಇಲ್ಲದ ಈ ಹತ್ತು ವರ್ಷಗಳಲ್ಲಿ ಪತ್ರಿಕಾರಂಗ ಕಂಡ ವಿಷಾದದ ಬೆಳವಣಿಗೆ ಇದು. ಲಂಕೇಶ್ ತನ್ನ ವಾರಪತ್ರಿಕೆ ಪ್ರಾರಂಭಿಸುವಾಗಲೇ ಜಾಹೀರಾತು ಪಡೆಯುವುದಿಲ್ಲ ಎಂದು ನಿರ್ಧರಿಸಿದ್ದರು. ಬದುಕಿನ ಬಗ್ಗೆ ಗಾಢ ವ್ಯಾಮೋಹ ಬೆಳೆಸಿಕೊಂಡಿದ್ದ ಅವರಿಗೆ ಹಣದ ಕುರಿತು ವೈರಾಗ್ಯವಿರಲಿಲ್ಲ. ಹಣ ಕೊಳ್ಳಬಹುದಾದ ಪುಸ್ತಕ, ಸ್ಕಾಚ್ ಇತ್ಯಾದಿ ಮಾತ್ರವಲ್ಲ ರೇಸ್‌ಕೋರ್ಸಿನಲ್ಲಿ ಓಡುವ ಕುದುರೆ ಬಾಲಕ್ಕೆ ಜೂಜು ಕಟ್ಟಿ ಗೆಲ್ಲುವ, ಸೋಲುವ ರೋಮಾಂಚನದ ಖಯಾಲಿ ಕೂಡ ಅವರಿಗೆ ಇತ್ತು. ಆದರೆ ಹಣ ಮತ್ತು ಪತ್ರಿಕಾ ಸ್ವಾತಂತ್ರ್ಯಗಳು ಒಟ್ಟಿಗೆ ಇರಲಾರವು ಎಂಬ ಸತ್ಯ ಲಂಕೇಶ್‌ಗೆ ಗೊತ್ತಿತ್ತು. ಬಳಕೆ ವಸ್ತುಗಳ ಹಾಗೆ ಸುದ್ದಿಯನ್ನೂ 'ಉತ್ಪಾದಿಸುವ' ಬಂಡವಾಳದ ರಾಕ್ಷಸ ಬಲದ ಅರಿವು ಅವರಿಗೆ ಇತ್ತು. ಅದೇ ವಸ್ತುವಿನ ಆರ್ಸನ್ ವೆಲ್ಸ್‌ನ 'ಸಿಟಿಜನ್ ಕೇನ್' ಚಲಚ್ಚಿತ್ರವನ್ನು ಲಂಕೇಶ್ ತುಂಬ ಮೆಚ್ಚಿಕೊಂಡಿದ್ದರು.

ಹಾಗೆಂದು ಜಾಹೀರಾತು ಪಡೆಯದೆ ಪತ್ರಿಕೆ ನಡೆಸುವುದು ಅವರಿಗೆ ತ್ಯಾಗ ಬಲಿದಾನಗಳ ದೊಡ್ಡ ಆದರ್ಶವೇನೂ ಆಗಿರಲಿಲ್ಲ, ಅದು ಸಂಪಾದಕನನ್ನು ಉಪವಾಸದಲ್ಲಿ ಇರಿಸುವ ವ್ರತವೂ ಆಗಿರಲಿಲ್ಲ, ಜಾಹೀರಾತು ಇಲ್ಲದೆಯೂ ಪತ್ರಿಕೆ ನಡೆಸಬಹುದು; ಲಾಭದಲ್ಲಿಯೂ ನಡೆಸಬಹುದು ಎಂಬುದು ಅವರ ವ್ಯಾವಹಾರಿಕ ಮನಸ್ಸಿಗೆ ಹೊಳೆದಿತ್ತು, ಅವರು ಅದನ್ನು ಸಾಧಿಸಿ ತೋರಿಸಿದರು. ಭ್ರಷ್ಟರಾಗದೆ ಈ ಕಾಲದಲ್ಲಿ ಬದುಕುವುದೇ ಸಾಧ್ಯವಿಲ್ಲವೆಂಬ ಮಾತನ್ನು ಎಲ್ಲ ಭ್ರಷ್ಟರೂ ಹೇಳುತ್ತಿರುತ್ತಾರೆ. 'ಸುದ್ದಿ ಖರೀದಿ' ಬಗ್ಗೆ ಈಗ ಮಾಧ್ಯಮಗಳಲ್ಲಿ ನಡೆಯುತ್ತಿರುವ ಚರ್ಚೆಯಲ್ಲಿಯೂ ಆ ಮಾತು ಕೇಳಿಬಂದಿದೆ. ಇದು ಭಂಡತನ. ಲಂಕೇಶ್ ತನ್ನ ಪತ್ರಿಕೆಯನ್ನು ಭ್ರಷ್ಟಾಚಾರ ಮತ್ತು ಅದನ್ನು ಸಮರ್ಥಿಸುವ ಭಂಡತನಗಳಿಗೆ ನಿಷ್ಠುರ ಪ್ರತಿಕ್ರಿಯೆಯ ಪ್ರತೀವಾರದ ಪ್ರಕಟಣೆಯಾಗಿ ರೂಪಿಸಿದರು.

ಪತ್ರಕರ್ತನಾಗುವ ಮೊದಲೇ ಲಂಕೇಶ್ ಕವಿತೆ, ನಾಟಕ, ಕತೆ, ಕಾದಂಬರಿ, ವಿಮರ್ಶೆಗಳನ್ನು ಬರೆದು ಕನ್ನಡದ ಪ್ರಮುಖ ಲೇಖಕರಲ್ಲಿ ಒಬ್ಬರಾಗಿದ್ದರು. ಜೊತೆಗೆ ಆ ವೇಳೆಗೆ ಅವರು ಹೆಸರು ಮಾಡಿದ ಮೂರು ಚಲಚ್ಚಿತ್ರಗಳನ್ನೂ ನಿರ್ದೇಶಿಸಿದ್ದರು. ಲಂಕೇಶ್ ಅವರ ಈ ಬಹುಮುಖ ಪ್ರತಿಭೆ ಅವರ ಓರಗೆಯವರಿಂದ ಮೆಚ್ಚುಗೆಯನ್ನು ಪಡೆಯಿತು; ಆದರೆ ಹೇಳಿಕೊಳ್ಳುವಂತಹ ಜನಪ್ರಿಯತೆ [illegible] ಗಳಿಸಲಿಲ್ಲ, ಅದಕ್ಕಾಗಿ ಅವರು ಆಸೆಪಡಲೂ ಇಲ್ಲ. ಜನರಿಗೆ ಪ್ರಿಯವಾಗುತ್ತದೆ ಎಂಬ ಒಂದೇ ಕಾರಣಕ್ಕಾಗಿ ಏನನ್ನಾದರೂ ಮಾಡುವುದು ಅವರ ಸ್ವಭಾವದಲ್ಲೇ ಇರಲಿಲ್ಲ. ಸಾಹಿತ್ಯದಲ್ಲಿ ವಿಶೇಷವಾದ ಆಸಕ್ತಿ ಬೆಳೆಸಿಕೊಂಡವರನ್ನು ಹೊರತುಪಡಿಸಿ ಅವರಿಗೆ ದೊಡ್ಡ ಓದುಗರ ಬಳಗವೂ ಇರಲಿಲ್ಲ.

ಹೀಗಿರುತ್ತ ಒಮ್ಮಿಂದೊಮ್ಮೆಗೆ ಅವರು ವಾರಪತ್ರಿಕೆಯೊಂದನ್ನು ಪ್ರಾರಂಭಿಸಲು ಮನಸ್ಸು ಮಾಡಿದರು. ಅದೂ ಎಂತಹ ಪತ್ರಿಕೆ! ಜಾಹೀರಾತು ಪಡೆಯದೆ, ಓದುಗರ ದುಡ್ಡಿನಿಂದಲೇ ಪ್ರತಿವಾರ ಪ್ರಕಟವಾಗುವ ಪತ್ರಿಕೆ! "ಏರುಹುಬ್ಬಿನವರ ಪ್ರತಿಷ್ಠಿತ ಸಂಸ್ಕೃತಿಯ ಸರಕು" ಎಂಬ ಎಡಪಂಥೀಯರ ಮೂದಲಿಕೆಗೆ ಒಳಗಾಗಿದ್ದ ನವ್ಯ ಸಾಹಿತ್ಯದ ಪ್ರಮುಖ ಲೇಖಕ, ಬಸ್‌ಸ್ಟ್ಯಾಂಡುಗಳ ಸ್ಟಾಲ್‌ಗಳ ಮಾರಾಟದಿಂದ ಬದುಕಬೇಕಾಗಿದ್ದ ಪತ್ರಿಕೆಯೊಂದನ್ನು ಹೊರತರಲು ನಿರ್ಧರಿಸಿದ್ದರು! ಪತ್ರಿಕೆಯ ಮಟ್ಟಿಗೆ ಅವರು ಕನ್ನಡಿಗರ ನಡುವೆ "ಅಭಿರುಚಿವಂತರು" ಹಾಗೂ "ಅಭಿರುಚಿಹೀನರು" ಎಂಬ ತಾರತಮ್ಯ ಮಾಡಲು ನಿರಾಕರಿಸಿದರು. ತನ್ನ ಪತ್ರಿಕೆಯ ಪ್ರತಿವಾರದ ಸಂಚಿಕೆಯಲ್ಲೂ ಲಂಕೇಶ್ ಕರ್ನಾಟಕದ ಸಮಸ್ತ ಜನತೆಯನ್ನು ಉದ್ದೇಶಿಸಿ ಬರೆದರು. ಸಾಮಾನ್ಯ ಜನರ ದಿನನಿತ್ಯದ ಸಮಸ್ಯೆಗಳು ಮಾತ್ರವಲ್ಲ ಅವರು ನಿತ್ಯ ಯೋಚಿಸುವ ವಿಷಯಗಳು ಮತ್ತು ತಲುಬುಗಳ ಬಗ್ಗೆ ಕೂಡ ಪತ್ರಿಕೆ ಗಮನ ಹರಿಸಿತು.



ಲಂಕೇಶ್ ತನ್ನ ಪತ್ರಿಕೆಯಲ್ಲಿ ಗಂಡಸರಿಗೆ ಕೊಟ್ಟಷ್ಟೇ ಪ್ರಾಧಾನ್ಯವನ್ನು ಹೆಂಗಸರಿಗೂ ಕೊಟ್ಟಿದ್ದರು. ಕನ್ನಡದ ಇತರ ಪತ್ರಿಕೆಗಳಲ್ಲಿ ಹೆಂಗಸರಿಗೇ ಮೀಸಲಾಗಿರುವ ಪುಟಗಳಿವೆ. ಆ ಪುಟಗಳಲ್ಲಿ ಇರುವುದಾದರೂ ಏನು? ಕಸೂತಿ, ಫ್ಯಾಷನ್, ಹಾಡು ಹಸೆ, ಅಡುಗೆ, ಹೆರಿಗೆ, ಬಾಣಂತನ, ಮಕ್ಕಳ ಲಾಲನೆ ಪಾಲನೆ ಕುರಿತು ಸಲಹೆ, ಸೂಚನೆ, ಕಿವಿಮಾತು, ಬೋಧನೆ ಇತ್ಯಾದಿ. ಇವುಗಳ ಆಚೆಗೂ ಹೆಣ್ಣಿಗೆ ಒಂದು ಸ್ವತಂತ್ರ ಸ್ವಾಯತ್ತ ಅಸ್ತಿತ್ವವಿದೆ ಎಂಬ ಗ್ರಹಿಕೆಯನ್ನು ಲಂಕೇಶ್ ತನ್ನ ಪತ್ರಿಕೆಯ ಧೋರಣೆಯನ್ನಾಗಿ ಮಾಡಿಕೊಂಡರು.

ಆದರೆ ಲಂಕೇಶ್‌ರ ಕಾಳಜಿ ಜನಪರವಾಗಿತ್ತು ಎಂದ ಮಾತ್ರಕ್ಕೆ ಏನೂ ಹೇಳಿದ ಹಾಗಲ್ಲ, ಯಾಕೆಂದರೆ ಕನ್ನಡದ ಸಮಾಜವಾದಿಗಳು ಮತ್ತು ಎಡಪಂಥೀಯರು ತಮ್ಮ ಜನಪರ ಕಾಳಜಿಗಳನ್ನು ಎಷ್ಟು ಕೆಟ್ಟ ಗದ್ಯದಲ್ಲಿ ವ್ಯಕ್ತಗೊಳಿಸುತ್ತಾರೆ ಎಂದರೆ, 'ಜನಪರ' ಎಂದರೆ ಜನರೇ ಬೆಚ್ಚಿಬೀಳುವಂತಾಗಿದೆ. ಆದರೆ ಲಂಕೇಶ್ ತನ್ನ ಕಾಳಜಿಗಳ ಬಗ್ಗೆ ವಹಿಸುವ ಎಚ್ಚರ ಮತ್ತು ಶ್ರದ್ಧೆಯನ್ನು ತನ್ನ ಗದ್ಯದ ಶೈಲಿಗೂ ಸಲ್ಲಿಸುತ್ತಿದ್ದರು. ತನಗೆ ಖಾತ್ರಿಯಾಗಿ ಗೊತ್ತಿರುವುದು ಅಥವಾ ಗಾಢ ಅನುಭವವಾಗಿರುವುದನ್ನು ಸರಳವಾಗಿ, ನೇರವಾಗಿ ಮತ್ತು ಸಾಧ್ಯವಾದಷ್ಟು ಕಡಿಮೆ ಶಬ್ದಗಳಲ್ಲಿ ಹೇಳುವುದು ಅವರಿಗೆ ಬರವಣಿಗೆಯ ಕೌಶಲವಷ್ಟೇ ಅಲ್ಲ ಅದು ಅವರ ವೃತ್ತಿ ಧರ್ಮವೂ ಆಯಿತು.

"ಜನರನ್ನು ತಲುಪುವುದು" ಎಲ್ಲ ಸಮಾಜವಾದಿಗಳ ಕನಸು. ಆದರೆ ಕನ್ನಡದಲ್ಲಿ ಅದನ್ನು ಸಾಧಿಸಿದವರು ಬಹುಶಃ ಲಂಕೇಶ್ ಒಬ್ಬರೇ. ಜನರನ್ನು ತಲುಪುವುದು ಅದರಷ್ಟಕ್ಕೆ ದೊಡ್ಡ ಸಾಧನೆ ಏನೂ ಅಲ್ಲ. ಕರ್ನಾಟಕದಲ್ಲಿ 'ಅತ್ಯಧಿಕ ಪ್ರಸಾರ'ದ ಹೆಗ್ಗಳಿಕೆಯ ದಿನಪತ್ರಿಕೆಯೂ ಜನರನ್ನು ತಲುಪುತ್ತದೆ. ಹಾಗೆ ತಲುಪಿ ಪ್ರತಿದಿನ ಅದು ಜನರಿಗೆ ತಿನ್ನಿಸುವುದು ಫ್ಯಾಸಿಸಂನ ವಿಷವನ್ನು. ಆದರೆ ಲಂಕೇಶ್ ಜನರನ್ನು ತಲುಪಲು ಎಂದೂ ಅಡ್ಡದಾರಿ ಹಿಡಿಯಲಿಲ್ಲ, ಜನರನ್ನು ಮರುಳು ಮಾಡುವ ಅಥವಾ ಅವರ ಭಾವನೆಗಳನ್ನು ಕೆರಳಿಸುವ ಬರಹಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲೂ ಇಲ್ಲ; ತಾನೂ ಬರೆಯಲಿಲ್ಲ. ಪತ್ರಕರ್ತನಾಗಿ ಲಂಕೇಶ್ ಗಳಿಸಿಕೊಂಡ ಜನಪ್ರಿಯತೆಗೂ, ಕನ್ನಡದ 'ಅತ್ಯಧಿಕ ಪ್ರಸಾರದ' ದಿನಪತ್ರಿಕೆಯ ಜನಪ್ರಿಯತೆಗೂ ಇರುವ ವ್ಯತ್ಯಾಸ ಇದು.

ಕನ್ನಡದಲ್ಲಿ ಮುಖ್ಯ ಲೇಖಕರಾಗಿದ್ದುಕೊಂಡೇ ಪತ್ರಕರ್ತರೂ ಆದವರಲ್ಲಿ ಲಂಕೇಶ್ ಮೊದಲಿಗರೇನೂ ಅಲ್ಲ. ಲಂಕೇಶ್‌ಗಿಂತ ಮೊದಲು ಡಿವಿಜಿ, ಮಾಸ್ತಿ ಶಿವರಾಮ ಕಾರಂತ, ಬೆಟಗೇರಿ ಕೃಷ್ಣಶರ್ಮ ಮೊದಲಾದವರು ಪತ್ರಿಕೆಗಳನ್ನು ನಡೆಸಿದ್ದರು. ಆದರೆ ತನ್ನ ಪತ್ರಿಕೆಯ ಮಟ್ಟಿಗೆ ಲಂಕೇಶ್ ಈ ಮಹನೀಯರಿಗಿಂತ ದೊಡ್ಡ ರಿಸ್ಕ್ ತೆಗೆದುಕೊಂಡಿದ್ದರು. ಸಿನಿಮಾ, ಕ್ರೀಡೆ, ಗಾಸಿಪ್ ಮುಂತಾದ ರಂಜಕ ಸಂಗತಿಗಳನ್ನೂ, ವೈವಿಧ್ಯಮಯ ವಿಷಯಗಳನ್ನೂ ಒಳಗೊಂಡು ಸಾಧ್ಯವಾದಷ್ಟು ದೊಡ್ಡ ಸಂಖ್ಯೆಯ ಓದುಗರನ್ನು 'ತಲುಪಲು' ಲಂಕೇಶ್ ಯತ್ನಿಸಿದರು. ತನ್ನ ಜನಪರ ಕಾಳಜಿ ಮತ್ತು ಸಮಾಜವಾದದ ಬದ್ಧತೆ ಜನರನ್ನು ಕೊರೆಯುವ ಭೈರಿಗೆಯಾಗದಂತೆ ಅವರು ತನ್ನ ಪತ್ರಿಕೆಯಲ್ಲೂ ತನ್ನ ಸ್ವಂತದ ಬರವಣಿಗೆಯಲ್ಲೂ ಎಚ್ಚರವಹಿಸಿದರು. ಆದರೆ ಜನರನ್ನು ರಂಜಿಸಲೋಸುಗ ತನ್ನ ಅಭಿರುಚಿಯಲ್ಲಿ ಎಂದೂ ಹೊಂದಾಣಿಕೆ ಮಾಡಿಕೊಳ್ಳಲಿಲ್ಲ; ಸತ್ಯದ ಜೊತೆಗೆ ರಾಜಿ ಮಾಡಿಕೊಳ್ಳಲೂ ಇಲ್ಲ, ಅಡ್ವಾನಿಯ ರಥಯಾತ್ರೆಯ ಉನ್ಮಾದದ ದಿನಗಳಲ್ಲಿ ಲಂಕೇಶ್ ಬರೆದ "ಇಟ್ಟಿಗೆ ಪವಿತ್ರವಲ್ಲ, ಜೀವಪವಿತ್ರ" ಎಂಬ ಮಾತು ಈಗಲೂ ಕನ್ನಡದಲ್ಲಿ ಅನುರಣಿಸುತ್ತಿದೆ.


ಅದುವರೆಗೂ ಲೇಖಕ, ಚಲಚ್ಚಿತ್ರ ನಿರ್ದೇಶಕ ಮತ್ತು ಅಧ್ಯಾಪಕ ಎಂದು ಗುರುತಿಸಿಕೊಂಡಿದ್ದ ಲಂಕೇಶ್ ಜನಪ್ರಿಯ ವಾರಪತ್ರಿಕೆಯೊಂದನ್ನು ನಡೆಸುವ ದುಸ್ಸಾಹಸದಲ್ಲಿ ತನ್ನನ್ನು ತೊಡಗಿಸಿಕೊಂಡದ್ದು ಹಿಂದುಮುಂದೆ ಯೋಚಿಸದೆ ಅವರು ತೆಗೆದುಕೊಂಡ ತೀರ್ಮಾನ ಎಂದು ಆಗ ಕಂಡಿತ್ತು, ಆದರೆ ಈಗ ಇಷ್ಟು ವರ್ಷಗಳ ನಂತರ ಲಭ್ಯವಾಗುವ ಹಿನ್ನೋಟದಲ್ಲಿ ಅವರ ಈ ತೀರ್ಮಾನ, ಅವರ ವ್ಯಕ್ತಿತ್ವಕ್ಕೆ ಅನಿವಾರ್ಯವಾಗಿತ್ತು ಎನ್ನಿಸುತ್ತದೆ. ಪತ್ರಿಕೆ ಪ್ರಾರಂಭಿಸುವುದಕ್ಕೆ ಮೊದಲೇ ಲಂಕೇಶ್ ರಾಜಕೀಯ ಮತ್ತು ಸಾರ್ವಜನಿಕ ಜೀವನದ ವಿದ್ಯಮಾನಗಳ ಬಗ್ಗೆ ಗಾಢ ಆಸಕ್ತಿ ಬೆಳೆಸಿಕೊಂಡಿದ್ದರು. ಲೋಹಿಯಾರ ಪ್ರಭಾವಕ್ಕೆ ಒಳಗಾಗಿ ಅವರು ಸಮಾಜವಾದೀ ಚಳವಳಿಯಲ್ಲೂ ಸಕ್ರಿಯವಾಗಿ ಭಾಗವಹಿಸಿದ್ದರು.

ಕನ್ನಡದಲ್ಲಿ ತಮ್ಮ ಓದು ಮತ್ತು ಬರವಣಿಗೆಗಳ ಆಚೆಗೂ ಕಣ್ಣು ಹಾಯಿಸಿ, ರಾಜಕೀಯ ಮುಂತಾದ ಸಾಹಿತ್ಯೇತರ ಸಂಗತಿಗಳ ಬಗೆಗೂ ಕಾಳಜಿ ಇಟ್ಟುಕೊಂಡಿದ್ದ ಲೇಖಕರ ಒಂದು ದೊಡ್ಡ ಪರಂಪರೆಯೇ ಇದೆ. ಸ್ವಾತಂತ್ರ್ಯ ಪೂರ್ವದ ನವೋದಯದ ಹಿರಿತಲೆಗಳಾದ ಡಿವಿಜಿ, ಮಾಸ್ತಿ, ಕುವೆಂಪು, ಕಾರಂತ, ಪ್ರಗತಿಶೀಲ ಚಳವಳಿಯ ಅ.ನ.ಕೃ., ನಿರಂಜನ, ಬಸವರಾಜ ಕಟ್ಟೀಮನಿ, ಬೀಚಿ, ನವ್ಯ ಚಳವಳಿಯ ಲಂಕೇಶ್ ಮತ್ತು ಅವರ ಓರಗೆಯ ಅಡಿಗ, ಅನಂತಮೂರ್ತಿ, ಪೂರ್ಣಚಂದ್ರ ತೇಜಸ್ವಿ, ಚಂಪಾ, ಕೆ.ವಿ. ಸುಬ್ಬಣ್ಣ–ಇವರೆಲ್ಲರೂ ಸಾಹಿತ್ಯದ ಜೊತೆ ಜನಜೀವನದ ಇತರ ಕ್ಷೇತ್ರಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಕನ್ನಡದ 'ಸಾರ್ವಜನಿಕ ಬುದ್ಧಿಜೀವಿ'ಗಳ ಪರಂಪರೆಗೆ ಸೇರಿದ ಈ ಎಲ್ಲರೂ ಪ್ರಜಾಪ್ರಭುತ್ವ, ಸ್ವಾತಂತ್ರ್ಯ ಆದರ್ಶದ ಮಟ್ಟದ ಸಮಾನತೆಗಳ ಉದಾರವಾದೀ ಮೌಲ್ಯಗಳಲ್ಲಿ ನಂಬಿಕೆ ಉಳ್ಳವರು. ಆದರೆ ಈ ಪರಂಪರೆಯಲ್ಲಿ ಒಂದು ಒಳ ಪ್ರಭೇದವನ್ನೂ ನಾವು ಗುರುತಿಸಬಹುದು.

ಈ ಲೇಖಕರೆಲ್ಲರೂ ಪ್ರಜಾಪ್ರಭುತ್ವವಾದಿಗಳಾಗಿದ್ದರೂ ಭಾರತದಲ್ಲಿ ಹೊಸದಾಗಿ ಮಾತು, ಸ್ವಂತಿಕೆ ಮತ್ತು ಮತದಾನದ ಹಕ್ಕು ಪಡೆದುಕೊಂಡ ಶೂದ್ರ ಸಮುದಾಯದ ಬಗ್ಗೆ ಅವರೆಲ್ಲರಿಗೂ ಒಂದೇ ಬಗೆಯ ಆದರದ ಭಾವನೆ ಇರಲಿಲ್ಲ, ಭಾರತದಲ್ಲಿ ಮೊತ್ತ ಮೊದಲ ಬಾರಿಗೆ ತಮ್ಮ ಅಸ್ಮಿತೆಯನ್ನು ಸಾಧಿಸಿಕೊಂಡ ಜನವಿಭಾಗಗಳು ಕನ್ನಡದ ಹಲವು ಹಿರಿಯ ಲೇಖಕರಲ್ಲಿ ಭಯ, ಆತಂಕಗಳನ್ನು ಹುಟ್ಟಿಸಿದ್ದವು. ಜನ, ದಿಕ್ಕುದೆಸೆ ಇಲ್ಲದ ಜನಜಂಗುಳಿಯ ಹಾಗೆ, ಮಿದುಳಿಲ್ಲದ ಗುಂಪಿನ ಹಾಗೆ ಇವರಿಗೆ ಭಾಸವಾಗತೊಡಗಿತ್ತು, ಅಡಿಗರವರೆಗಿನ ಹಲವು ಕನ್ನಡ ಲೇಖಕರಲ್ಲಿ ಈ ಭಯ ಅವರ ಬರವಣಿಗೆಯಲ್ಲೂ ಸೂಕ್ಷ್ಮವಾಗಿ ವ್ಯಕ್ತವಾಗುತ್ತದೆ.

ನವೋದಯದ ನಂತರದ ಲಂಕೇಶ್, ಅನಂತಮೂರ್ತಿ, ತೇಜಸ್ವಿ, ಚಂಪಾ, ಸುಬ್ಬಣ್ಣ ಮುಂತಾದ ಲೇಖಕರಿಗೆ ಜನತೆಯ ಬಗ್ಗೆ ಈ ಭಯವಿರಲಿಲ್ಲ, ಇವರೆಲ್ಲರೂ ಸಮಾಜವಾದಿಗಳೂ ಆಗಿದ್ದರು. ಇವರಲ್ಲಿ ಯಾರಿಗೂ ಜನಪ್ರಿಯತೆಯ ಮೋಹವಿರಲಿಲ್ಲ, ಆದರೆ ಜನರು ಇವರಿಗೆ ಜನಜಂಗುಳಿಯ ಹಾಗೆ ಕಾಣಲಿಲ್ಲ, ಜನತೆಯ ಬಗೆಗಿನ ಈ ಸಂಕೀರ್ಣವಾದ ಭಾವನೆ ಮತ್ತು ಅವರನ್ನು ತಲುಪಬೇಕಾದ ಅನಿವಾರ್ಯತೆಯೇ ಲಂಕೇಶ್‌ಗೆ ತನ್ನ ಪತ್ರಿಕೆಯನ್ನು ಪ್ರಾರಂಭಿಸಲು ಇದ್ದ ಒತ್ತಾಸೆಯಾಗಿದೆ.

● ಜೆ. ರಾಜಶೇಖರ



ಇಸ್ಸಾನ ಹಾಯ್ಕುಗಳು

ಅಳುವ ಮಗುವಿನೆಡೆ
ಬಾಗುತ್ತಿವೆ
ಅವಳು ನೆಟ್ಟ ಭತ್ತದ ಸಾಲು
* * *
ಮೂಲೆಯ ಜೇಡಗಳೇ
ಮುಟ್ಟುವುದಿಲ್ಲ
ಬಲೆಯಲ್ಲಿ ಹಾಯಾಗಿರಿ
* * *
ಎಟಾ ಮಂದಿರದ
ಚೆರ್ರಿ ಹೂಗಳು
ಮುದುಡಿ ಅರಳುತ್ತಿವೆ.
(ಎಟಾ ಜನಗಳು ಜಪಾನಿನ ಅಸ್ಪೃಶ್ಯರು. ಅವರನ್ನು ಬುರಾಕುಮಿನ್ ಎಂದು ಮರುನಾಮಕರಣ ಮಾಡಲಾಗಿದೆ)
* * *
ತೋಳುಗಳ ಅರಳಿಸಿದ
ಪುಟ್ಟ ಹುಡುಗಿ
"ದಾಸವಾಳ ಇಷ್ಟು ದೊಡ್ಡದು!"
* * *
ಪುಟ್ಟ ಕಪ್ಪೆಯೇ
ಬಿಟ್ಟುಕೊಡಬೇಡ
ಇದ್ದಾನೆ ಇಸ್ಸ!
(ಎರಡು ಗಂಡು ಕಪ್ಪೆಗಳು ಹೆಣ್ಣು ಕಪ್ಪೆಗಾಗಿ ಹೋರಾಡುತ್ತಿದ್ದಾಗ ಬರೆದದ್ದು)
* * *
ಚೆರ್ರಿ ಹೂವಿನ ದಳಗಳು
ಪಿಸುಗುಡುತ್ತಿವೆ
ಸಾವಿಗೆ ಸಿದ್ಧರಾಗಿ ಸಿದ್ಧರಾಗಿ....
* * *
ಈ ಸೇವಂತಿಗೆ ಮೊಗ್ಗು
ಮುರುಟಿದ್ದೇಕೆ?
ಮುರುಟಿದ್ದೇಕೆ?
(ಇಸ್ಸಾನಿಗೆ ಆರು ಮಕ್ಕಳು. ಐವರು ಎಳವೆಯಲ್ಲಿಯೇ ತೀರಿಕೊಂಡರು. ಕೊನೆಯ ಮಗು ಹುಟ್ಟುವ ಮೊದಲೇ ಸತ್ತಾಗ ಬರೆದದ್ದು)
* * *
ಮೊದಲ ಸ್ನಾನದ [illegible]
ಕೊನೆಯ ಸ್ನಾನದ [illegible]
ಅರ್ಥವಾಗದ [illegible]
(ಇಸ್ಸಾನ ಕೊನೆಯ ಹಾಯ್ಕು. ಅವನು ಸತ್ತ ಹಾಸಿಗೆಯ ಅಡಿ ದೊರೆತದ್ದು)

ಜಪಾನೀ ಮೂಲ–
ಕೊಬಯಾಶಿ ಇಸ್ಸಾ (1763–1827)
ಕನ್ನಡಕ್ಕೆ:
● ಡಾ.ಸಿ. ರವೀಂದ್ರನಾಥ್


ಡೆಡ್ಲಿ ಸೋಮನ ಬಂಟ ರಾಜಶೇಖರ್ ಫಿನಿಷ್!



ಪೊಲೀಸರ ನೆರವಿನಿಂದಲೇ ಜಯನಗರ ಶಾಪಿಂಗ್ ...ಕ್ಸ್‌ನಲ್ಲಿ ಸ್ಕಿಲ್‌ಗೇಮ್ ಅಡ್ಡೆಯೊಂದನ್ನು ತೆರೆದ. ದುಡ್ಡೂ ...ಟಿನ್ನಾಗೇ ಬರುತ್ತಿತ್ತು. ಒಂದಷ್ಟು ದಿನ ವಿಜಯನಗರದ ...ಮು ಸ್ಕೂಲ್ ಹಿಂಭಾಗದಲ್ಲಿ ಜಯಶ್ರೀ ಜೊತೆ ... ನಡೆಸಿದ. ಒಂದರನಂತರ ಒಂದರಂತೆ ಇಬ್ಬರು ...ಮಕ್ಕಳಾದವು. ಪತ್ನಿ ಜಯಶ್ರೀ ತನ್ನೆಲ್ಲಾ ...ನನ್ನೂ ಮರೆಯುವಂತೆ ಯಾವುದಕ್ಕೂ ...ಯಾಗದಂತೆ ರಾಜಶೇಖರ ನೋಡಿ ...ದ್ದ.

...ಮಷಃ ರಾಜಶೇಖರ್ ಇಷ್ಟಕ್ಕೇ ತೃಪ್ತನಾಗಿ ...ಡಿಗೆ ತಾನಿದ್ದುಬಿಟ್ಟಿದ್ದರೆ ಇಂಥದೊಂದು ...ತಿಗೀಡಾಗುತ್ತಿರಲಿಲ್ಲ. ಮೇಲುನೋಟಕ್ಕೆ ... ರೌಡಿಸಂ ಬಿಟ್ಟು ಯಾವುದೋ ...ಯೆತ್ತೆಂದು ಆತ ಹೇಳಿಕೊಂಡು ...ದ್ದನೇ ಹೊರತು ಯಾವತ್ತೂ ಅದರಿಂದ ...ರಲೇ ಇಲ್ಲ.





...ನಕ್ಕೆ ಕಾರಣವಾಗಿದ್ದು ಆತನ ದುರಾಶೆ. ... ರಿಯಲ್ ಎಸ್ಟೇಟ್ ದಂಧೆ ತನ್ನ ...ಸ್ತೆ ಮುಟ್ಟಿತ್ತು. ಡೆಡ್ಲಿ ಸೋಮ ಹುಟ್ಟು ... ಭೀತಿ ಕೂಡ ಹಸಿರಾಗೇ ಇತ್ತು. ... ಒಂದಷ್ಟು ಪೊಲೀಸ್ ಅಧಿಕಾರಿಗಳ ...ಹವೂ ಇತ್ತಲ್ಲ; ಇವೆಲ್ಲವನ್ನೂ ಒಟ್ಟೊಟ್ಟಿಗೆ ...ಸಿಕೊಂಡು ಹಣ ಮಾಡುವ ಹುಚ್ಚಿಗೆ ಬಿದ್ದ ...ಖರ್ ಕ್ರಮೇಣ ಭೂಗತ ಲೋಕದಲ್ಲಿ ಮತ್ತೆ ...ಾಗಿಬಿಟ್ಟ.

...ೇ ಆತನ ಅಪರಾಧವಾಗಿತ್ತು. ಮೊದಮೊದಲು ...ಟ್ ದೇವಿಯ ಅಡ್ಡೆಯಲ್ಲಿ ತಕ್ಕಾಳಿ ಬಾಬು ಮತ್ತು ...ಣಶ್ ರಾಜೇಂದ್ರನ ಜೊತೆ ಠಳಾಯಿಸಿದ. ಆನಂತರ ...ಪ್ಪ ಗಾರ್ಡನ್ನಿನ ಗುಪ್ಪು ಗ್ಯಾಂಗ್‌ನ್ನು ಹಾಕಿಕೊಂಡು ...ತ. ಕೋದಂಡರಾಂಪುರದ ಬನಾಯ್ಸ್ ರಾಜೇಂದ್ರ, ...ಳದ ಕವಳ, ಚಾಮರಾಜಪೇಟೆಯ ಪೂಣಿ, ...ಮನಗರದ ಪ್ರವೀಣ, ಭಕ್ಷಿ ಗಾರ್ಡನ್ನಿನ ಕದಿರೇಶ, ...ಜಪೇಟೆಯ ಸನ್ನು ಮತ್ತು ಕಲಾಸಿಪಾಳ್ಯದ ಮಾಹಿನ್ ಸೇರಿದಂತೆ ಬೆಂಗಳೂರಿನ ಒಂದು ಹಿಂಡು ರೌಡಿಗಳ ಜೊತೆ ರಾಜಶೇಖರನಿಗೆ ಸೆಂಟಿಸ್ತಿಯಿದ್ದೇ ಇತ್ತು.

ಇದಕ್ಕೆ ಕಾರಣರಾದವರು ರಾಜಾಜಿನಗರ ಪೆಟ್ರೋಲ್ ಬಂಕ್ ಸಂಪತ್ತು ಮತ್ತು ಕೋರಮಂಗಲದ ಭೂಕಂಟಕ ಕುಪೇಂದ್ರ ರೆಡ್ಡಿ. ರಾಜಾಜಿನಗರದ ರಾಜ್‌ಕುಮಾರ್ ರಸ್ತೆಯಲ್ಲಿ ಸತ್ತೀಸ್ ಹೆಸರಿನದೊಂದು ಪೆಟ್ರೋಲ್ ಬಂಕ್ ನಡೆಸುವ ಸಂಪತ್ತು ಬೆಂಗಳೂರು ಕಂಡ ನಟೋರಿಯಸ್ ಪೆಟ್ರೋಲ್ ಕಲಬೆರಕೆಕೋರ. ಮಾಗಡಿ ರಸ್ತೆ, ಪೀಣ್ಯ ಮತ್ತು ನೆಲಮಂಗಲದ ಸುತ್ತಮುತ್ತ ಬೇಕಾಬಿಟ್ಟಿ ಲ್ಯಾಂಡ್ ಡೀಲಿಗೆ ಕೈಯಿಟ್ಟಿದ್ದ ಈತ ತನ್ನೆಲ್ಲಾ ಭೂಕಬಳಿಕೆಗೆ ರಾಜಶೇಖರನನ್ನು ಬಳಸಿಕೊಂಡ.

ಆ ಹೊತ್ತಿಗಾಗಲೇ ಮಾರ್ಕೆಟ್ ದೇವಿಯ ಬಲಗೈ ಬಂಟನಂತಾಗಿದ್ದ ರಾಜಶೇಖರ ಈ ಬಾರಿ ಸೋಮನಂತೆ ಯಡವಟ್ಟು ಮಾಡಿಕೊಳ್ಳಲಿಲ್ಲ. ಮೊದಲೇ ಆಯಾ ಪೊಲೀಸ್ ಠಾಣೆಗಳನ್ನು ಸಂಭಾಳಿಸಿಕೊಳ್ಳುತ್ತಿದ್ದ. ತಾನೇ ನೇರವಾಗಿ ಬಡಿದಾಟಕ್ಕಿಳಿಯದೇ ಹಿಂದೆ ನಿಂತು ಪುಡಿ ರೌಡಿಗಳನ್ನು ಛೂಬಿಡುತ್ತಿದ್ದ. ಹೀಗೆ ರಾಜಶೇಖರನ ತೆರೆಮರೆಯ ಲ್ಯಾಂಡ್ ಡೀಲಿಗೆ ಜೊತೆಯಾದವನು ಕಾಟನ್‌ಪೇಟೆಯ ಹಳೇ ಪಾತಕಿ ತಕ್ಕಾಳಿ ಬಾಬು. ಬೆಂಗಳೂರು ಭೂಗತ ಮಟ್ಟಿಗೆ ರಾಜಶೇಖರ ಮತ್ತು ತಕ್ಕಾಳಿ ಬಾಬು ಜೋಡಿ ಅದೆಷ್ಟು ಕುಖ್ಯಾತಿಗೆ ಬಂತೆಂದರೆ, ಈ ಜೋಡಿಯ ರಿಯಲ್ ಎಸ್ಟೇಟ್ ನೈಪುಣ್ಯ ಕಂಡೇ ಪ್ರಳಯಾಂತಕ ಕುಪೇಂದ್ರ ರೆಡ್ಡಿ ತನ್ನ ಆಸ್ಥಾನದಲ್ಲಿ ಪ್ರತಿಷ್ಠಾಪಿಸಿಕೊಂಡ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸತೀಶ್ ರೆಡ್ಡಿ ವಿರುದ್ಧ ಬೊಮ್ಮನಹಳ್ಳಿಗೆ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಕುಪೇಂದ್ರ ರೆಡ್ಡಿ ತನ್ನನ್ನು ರಾಜಶೇಖರ ಮತ್ತು ತಕ್ಕಾಳಿ ಬಾಬು ಸೇರಿಕೊಂಡು ಗೆಲ್ಲಿಸುತ್ತಾರೆಂದೇ ನಂಬಿಕೊಂಡಿದ್ದ. ಅವರಿಬ್ಬರನ್ನು ಮುಂದಿಟ್ಟುಕೊಂಡೇ ದುಡ್ಡು ಬೈಕು ಹಂಚಿದ್ದ. ಕೋಟಿ ಕೋಟಿ ಸುರಿದರೂ ಗೆದ್ದದ್ದು ಮಾತ್ರ ಬಿಜೆಪಿಯ ಸತೀಶ್ ರೆಡ್ಡಿ.

ಕಾಂಗ್ರೆಸ್ ಸರ್ಕಾರವಿದ್ದಿದ್ದರೆ ಕುಪೇಂದ್ರ ರೆಡ್ಡಿ, ಮಾರ್ಕೆಟ್ ದೇವಿಯಂಥವರನ್ನಿಟ್ಟುಕೊಂಡು ರಾಜಶೇಖರ ಏನೆಲ್ಲಾ ಆಟ ಆಡುತ್ತಿದ್ದನೊ. ಬಿಜೆಪಿ ಅಧಿಕಾರಕ್ಕೆ ಬರುತ್ತಿದ್ದಂತೆ ಲೋಕಸಭಾ ಸದಸ್ಯ ಪಿ.ಸಿ. ಮೋಹನ್ ಬಂಟನಾದ. ತನಗೆ ಬೇಕಾದ ರೌಡಿಗಳನ್ನು ಪೊಲೀಸರಿಂದ ಬಡಿಸುತ್ತಿದ್ದ. ತನಗಾಗದ ರೌಡಿಗಳ ಮೇಲೆ ಪೊಲೀಸರನ್ನು ಛೂಬಿಡುವುದನ್ನೂ ಮಾಡುತ್ತಿದ್ದ. ಪತ್ರಿಕೆಗಳು ಮತ್ತು ಪೊಲೀಸರ ಪಾಲಿಗೆ ರಾಜಶೇಖರ ಮಾಜಿ ರೌಡಿಯಾಗಿದ್ದರೂ ಅಂಡರ್‌ವರ್ಲ್ಡ್ ಲೆಕ್ಕಕ್ಕೆ ಆತ ಸಕ್ರಿಯ ರೌಡಿಯಾಗೇ ಇದ್ದ. ಯಾರನ್ನೂ ಮೇಲೆಳೆದುಕೊಳ್ಳುತ್ತಿರಲಿಲ್ಲ. ಹಾಗಂತ ರೌಡಿಗಳ ಸಹವಾಸವನ್ನೂ ಬಿಡಲಿಲ್ಲ.

ಹೊರ ಪ್ರಪಂಚಕ್ಕೆ ತಾನೊಬ್ಬ ಮಾಜಿ ರೌಡಿ ಮಾತ್ರವೆಂದೇ, ಹೊಸ ರೌಡಿಗಳ್ಯಾರೂ ತನ್ನ ಮೇಲೆ ಕಣ್ಣು ಹಾಕಿಲ್ಲ ಎಂದೇ ಲೆಕ್ಕ ಹಾಕಿದ ರಾಜಶೇಖರ ತನ್ನ ಮನೆಯನ್ನು ವಿಜಯನಗರದಿಂದ ಶಂಕರಪುರದ ಆರೆಸ್ಸೆಸ್ ಅಡ್ಡೆಯಾದ ಕೇಶವಕೃಪದ ಪಕ್ಕದ ಮನೆಗೆ ಸ್ಥಳಾಂತರಿಸಿದ್ದ. ಇಲ್ಲಿಗೆ ಆರು ತಿಂಗಳ ಹಿಂದೆ ಜಯನಗರ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿದ್ದ ತನ್ನ ಸ್ಕಿಲ್‌ಗೇಮ್ ಅಡ್ಡೆಯನ್ನೂ ಮುಚ್ಚಿಬಿಟ್ಟ. ಅಲ್ಲಿದ್ದ ಎರಡೂ ಮಳಿಗೆಗಳನ್ನು ಯಾರಿಗೋ ಮಾರಿಹಾಕಿದ. ಹೀಗೆ ಒಟ್ಟುಗೂಡಿಸಿದ ಸರಿಸುಮಾರು ಒಂದೂವರೆ ಕೋಟಿಯಷ್ಟು ಹಣವನ್ನು ಎನ್ನಾರ್ ಕಾಲೋನಿಯ ಉಮಾಶಂಕರ್ ಎಂಬ ಪುಢಾರಿಯೊಬ್ಬನಿಗೆ ಬಡ್ಡಿಗೆ ಬಿಟ್ಟ. ಚಾಮರಾಜಪೇಟೆ, ವಿದ್ಯಾಪೀಠ, ಕತ್ರಿಗುಪ್ಪೆ, ಇಟ್ಟಮಡು, ಬನಶಂಕರಿ ಇತ್ಯಾದಿ ಏರಿಯಾಗಳ ಯಾರ್‍ಯಾರಿಗೋ



ಸಾಲಕೊಟ್ಟು ಬಡ್ಡಿ ವಸೂಲಿಗೆ ನಿಂತ. ಮುಂಬರುವ ಪಾಲಿಕೆ ಚುನಾವಣೆಯಲ್ಲಿ ಯಾರ್‍ಯಾರ ಪರವಾಗಿ ಏನೇನು ಮಾಡಬೇಕೆಂಬ ಲೆಕ್ಕಾಚಾರವನ್ನೂ ಹಾಕಿದ್ದ. ತನ್ನನ್ನು ಭೂಗತ ಜಗತ್ತು ಮರೆತೇಬಿಟ್ಟಿದೆಯೆಂದು ಭ್ರಮಿಸಿದ ರಾಜಶೇಖರ ಬೆಂಗಳೂರಿನ ಪಾಪಕೂಪದಲ್ಲಿ ಮಡುಗಟ್ಟಿದ ಹೊಸ ಪ್ರವೃತ್ತಿಯೊಂದನ್ನು ಗಮನಿಸಲೇ ಇಲ್ಲ. ಅದು ರೌಡಿ ಎನ್ನಿಸಿಕೊಂಡ ಯಾರನ್ನಾದರೂ ಕೊಂದು ತಾನು ರೌಡಿ ಎನ್ನಿಸಿಕೊಳ್ಳುವ ಹೊಸ ಖಯಾಲಿ.

ದುಷ್ಮನಿ ಇರಲೇಬೇಕೆಂದಿಲ್ಲ, ಇಂಥವನು ರೌಡಿ



ಎಂದು ಗೊತ್ತಾಗಿಬಿಟ್ಟರೆ ಆತನನ್ನು ಕೊಂದು ತಾನು ರೌಡಿಯಾಗಿ ಚಾಲ್ತಿಗೆ ಬರುವ ವಿಚಿತ್ರ ಖಯಾಲಿಯೊಂದು ಬೆಂಗಳೂರಿನಲ್ಲಿ ತಲೆ ಎತ್ತಿದೆ. ಬೆಕ್ಕಿನಕಣ್ ರಾಜೇಂದ್ರ, ತಿಮ್ಮೇನಹಳ್ಳಿ ಗೋವಿಂದ, ಶ್ರೀರಾಮಪುರ ಕಿಟ್ಟಿ, ರಾಮಾಚಾರಿ, ಟ್ರ್ಯಾಕ್ಟರ್ ರಾಮ, ಗೇಟ್ ಗಣೇಶ, ಪೂಣಿ ಇತ್ಯಾದಿ ರೌಡಿಗಳೆಲ್ಲ ಕೊಲೆಯಾಗಿದ್ದೇ ಇಂಥ ವಿಚಿತ್ರ ನ್ಯಾಯ ವ್ಯವಸ್ಥೆಯಿಂದ. ಕೊಂದು ರೌಡಿಯಾಗಿ ಮೆರೆಯಲು ಹೊರಟವರನ್ನು ಅದೇ ತಿಂದು ಹಾಕುತ್ತದೆ.

ಇದನ್ನು ರಾಜಶೇಖರ ಅರಿಯದೇ ಹೋದ. ಒಂದೋ ಬೆಂಗಳೂರನ್ನು ಆತ ಬಿಡಬೇಕಿತ್ತು ಅಥವಾ ಅಂಡರ್‌ವರ್ಲ್ಡ್‌ನಿಂದ ಶಾಶ್ವತವಾಗಿ ದೂರಾಗಿ ಅಜ್ಞಾತನಾಗಿ ಬದುಕಬೇಕಿತ್ತು. ಇದ್ಯಾವುದನ್ನೂ ಮಾಡದೇ ರೌಡಿಗಳ ಅಡ್ಡೆಯಲ್ಲೇ ಉಳಿದುಬಿಟ್ಟ. ಶಂಕರಪುರದಂಥ ಬ್ರಾಹ್ಮಣರ ಏರಿಯಾಕ್ಕೆ ಬಂದನಾದರೂ ಪಕ್ಕದಲ್ಲೇ ಇದ್ದ ಬ್ರಾಹ್ಮಣರ ಕಾಫಿ ಬಾರ್‌ಗೆ ಪ್ರತಿ ಸಂಜೆ ಬರುತ್ತಿದ್ದ. ಅಲ್ಲೇ ತನ್ನ ಶಿಷ್ಯರನ್ನು ನಿಲ್ಲಿಸಿಕೊಂಡು ಅಡ್ಡೆ ಹಾಕಲಾರಂಭಿಸಿದ. ಹೀಗೆ ರಾಜಶೇಖರ ಬ್ರಾಹ್ಮಣರ ಕಾಫಿ ಬಾರ್‌ನಲ್ಲಿ ಅಡ್ಡೆ ಹಾಕುವುದನ್ನು ಸದ್ದಿಲ್ಲದೇ ಗಮನಿಸಿದವನು ಸನ್ನು ಎಂಬ ಮತ್ತೊಬ್ಬ ಪಾತಕಿ. ಈತ ಮೀಟರ್ ಮಹೇಶನ ಪರಮಾಪ್ತ ಮತ್ತು ಗಾರ್ಡನ್ನಿನ ವಾಲೇಶಂಕ್ರ ಎಂಬ ಮತ್ತೊಬ್ಬ ರೌಡಿಗೂ ಸ್ನೇಹಿತ. ಸೋಮನ ಶಿಷ್ಯ ರಾಜಶೇಖರನನ್ನು ಮುಗಿಸಿಬಿಟ್ಟರೆ ಆತನ ಸಾಲಗಾರರಿಂದ ದುಡ್ಡೆತ್ತುವ ಯೋಜನೆಯೊಂದು ಅಲ್ಲೇ ರೂಪುಗೊಂಡಿತೆ? ಅಥವಾ ಮೀಟರ್ ಮಹೇಶನಿಗೆ ಯಾರೋ ಸುಪಾರಿ ಕೊಟ್ಟಿರಬಹುದೆ? ಅದು ಒಂದೂವರೆ ಕೋಟಿಯಷ್ಟು ಸಾಲ ಪಡೆದಿದ್ದ ಉಮಾಶಂಕರನ ಕೃತ್ಯವಾ? ಉಮಾಶಂಕರನಿಂದ ಸುಪಾರಿ ಪಡೆದ ಮೀಟರ್ ಮಹೇಶ ಅದನ್ನು ವಾಲೆಶಂಕ್ರನಿಗೆ ವಹಿಸಿದ್ದನೆ? ಅಂತಿಮವಾಗಿ ಶಂಕ್ರನ ಗ್ಯಾಂಗ್ ರಾಜಶೇಖರನನ್ನು ಮುಗಿಸಿ ಹಾಕಿತೆ?

ಎಲ್ಲಕ್ಕೂ ಕಾಲವೇ ಉತ್ತರಿಸಲಿದೆ. ಕೊಂದವನನ್ನು ಪಾಪವು ಬಿಡುವುದು ಉಂಟಾ?

● ರಾ. ಸೋಮನಾಥ್

ಅಲ್ಪಸಂಖ್ಯಾತರಿಗೆ ಇದೆಂತಹ ನೆರವು?

...ಕಾರ ಅಲ್ಪಸಂಖ್ಯಾತರಿಗೆ ಸಾಲ ಸೌಲಭ್ಯದ ಚೆಕ್ ವಿತರಣೆ ಮಾಡಿದೆ ...ಪತ್ರಿಕೆಗಳು ವರದಿ ಮಾಡಿವೆ. ಈ ಸಾಲ ಪಡೆಯಲು ಅವರು ...ತರು ಎಂಬ ಸರ್ಟಿಫಿಕೇಟ್ ಮತ್ತು ವಾರ್ಷಿಕ ಗರಿಷ್ಠ ಹದಿನೆಂಟು ...ರೂಪಾಯಿಗಳಿಗಿಂತ ಅಧಿಕ ವರಮಾನವಿಲ್ಲ ಎಂಬ ಸರ್ಟಿಫಿಕೇಟ್ ...ಾಗಿದೆ. ಅಲ್ಪಸಂಖ್ಯಾತ ಮಹಿಳೆಯರಿಗೆ ಸ್ವಉದ್ಯೋಗ ಮಾಡಲು ...ಈಗಾಗಲೇ ಚಿಕ್ಕಪುಟ್ಟ ವ್ಯಾಪಾರವೇನಾದರೂ ಇದ್ದರೆ ಅದನ್ನು ...ಪಡಿಸಲು ಸಾಲ ನೀಡಲಾಗುವುದು. ತಿಂಗಳಿಗೆ ಗರಿಷ್ಠ 1500 ...ಬುದು ಇಡೀ ಕುಟುಂಬದ ಆದಾಯವೆಂದೂ ಹೇಳಲಾಗಿದೆ.

...ಾಲ ಸೌಲಭ್ಯಕ್ಕೆ ಅರ್ಜಿ ಹಾಕಲು ಅಲ್ಪಸಂಖ್ಯಾತರೆಂಬ ಸರ್ಟಿಫಿಕೇಟ್ ...ದಾಯ ಸರ್ಟಿಫಿಕೇಟ್ ಬೇಕೆಂದು ಅರ್ಜಿ ಹಾಕಲು ವಾರ್ಷಿಕ ...ಹದಿನೆಂಟು ಸಾವಿರಕ್ಕಿಂತ ಕಮ್ಮಿ ಎಂದು ನಮೂದಿಸಿದಾಗ, "ಈಗಿನ ... ತಿಂಗಳಿಗೆ 1000 ರೂಪಾಯಿಯಲ್ಲಿ ಯಾರಿಗಾದರೂ ಬದುಕಲು ...' ಎಂದು ಅರ್ಜಿದಾರನೊಡನೆ ಜಿಲ್ಲಾಧಿಕಾರಿಗಳು ಪ್ರಶ್ನಿಸಿ, ಆ ... ವಜಾಗೊಳಿಸಿದರು. ನಿಜ. ಈಗ ಮಂಗಳೂರಿನಲ್ಲಿ ಕನಿಷ್ಠ ದಿನಗೂಲಿ ...ತ್ತು ರೂಪಾಯಿ. ಆದರೂ ದಿನಗೂಲಿಗೆ ಜನ ಸಿಗುವುದಿಲ್ಲ. ಆತ ... ಇಪ್ಪತ್ತು ದಿನ ಕೆಲಸ ಮಾಡಿದರೂ ಆತನ ತಿಂಗಳ ಆದಾಯ ...ಸಾವಿರ ರೂಪಾಯಿ ಆಗುತ್ತದೆ. ಅಂದರೆ ಈ ದಿನಗೂಲಿಯವನೂ ... ಈ ಸಾಲಕ್ಕೆ ಅರ್ಹನಲ್ಲ! ಈ ಸಾಲ ಪಡೆಯಲು ಜನರು ಈ ... ಹೇಳಬೇಕಾಗಿದೆ. ಅಥವಾ ಸರ್ಕಾರ ಜನರಿಂದ ಸುಳ್ಳು ಹೇಳಿಸುತ್ತಿದೆ! ...ೊಸೆಗೊಂದು ಟೈಲರಿಂಗ್ ಅಂಗಡಿ ಇದೆ. ಆಕೆ ತನ್ನ ಈ ...ವನ್ನು ಅಭಿವೃದ್ಧಿಪಡಿಸಲು ಈ ಸಾಲಕ್ಕಾಗಿ ಅರ್ಜಿ ಹಾಕಲು ನಾವು ...ತರೆಂಬ ಸರ್ಟಿಫಿಕೇಟಿಗಾಗಿ ಅರ್ಜಿ ಹಾಕಿದ್ದಳು. ಆದಾಯ ಮತ್ತು ...ವರವನ್ನು ಒಂದೇ ಫಾರ್ಮಿನಲ್ಲಿ ತುಂಬಿಸಿ ಕಳುಹಿಸಬೇಕಾಗಿತ್ತು ...ಯಾವುದಕ್ಕಾದರೂ ಬೇಕಾಗಬಹುದೆಂಬ ಕಾರಣಕ್ಕಾಗಿ ಪದವಿಪೂರ್ವ ... ಕಲಿಯುತ್ತಿರುವ ತನ್ನ ಮಗನಿಗೂ ಜಾತಿ ಸರ್ಟಿಫಿಕೇಟಿಗಾಗಿ ...ಕಿದಳು. ಗ್ರಾಮ ಕರಣಿಕರು ಇಬ್ಬರಿಗೂ ಈ ಸರ್ಟಿಫಿಕೇಟ್ ...ಸಾಧ್ಯವಿಲ್ಲವೆಂದು ನಮೂದಿಸಿ ಅರ್ಜಿಯನ್ನು ಹಿಂತಿರುಗಿಸಿದರು. ... ವಿವರಕ್ಕೆ ಕೇಳಲು ನಾನು ಜಿಲ್ಲಾಧಿಕಾರಿಗಳ ಬಳಿ ಹೋದಾಗ



ಅವರ ವಿವರಣೆ ಹೀಗಿತ್ತು: "ನಿಮ್ಮ ಕುಟುಂಬದ ವಾರ್ಷಿಕ ಆದಾಯ ಅತೀ ಕಡಿಮೆ ಎಂದು ಬರೆಯಲಾಗಿದೆ. ಈಗಿನ ಕಾಲದಲ್ಲಿ ಒಂದು ಸಾವಿರ ರೂಪಾಯಿಗಳಲ್ಲಿ ಒಂದು ಕುಟುಂಬ ದಿನಗಳೆಯಲು ಸಾಧ್ಯವೇ? ನೀವು ಸುಳ್ಳು ಹೇಳುತ್ತಿದ್ದೀರಿ. ನಿಮ್ಮ ಮೊಮ್ಮಗನಿಗೆ ಮೀಸಲಾತಿ ಪಡೆಯಲು ಅಲ್ಪಸಂಖ್ಯಾತರೆಂಬ ಸರ್ಟಿಫಿಕೇಟಿಗೆ ಅರ್ಜಿ ಹಾಕಿದ್ದೀರಿ. ಅದು ಕೊಡಲು ಸಾಧ್ಯವಿಲ್ಲ!" ನಾನು ಮರು ಮಾತಾಡದೆ ಅಲ್ಲಿಂದ ಎದ್ದು ಬಂದೆ.

ಇಂದು ನಾಲ್ಕೈದು ಜನರಿರುವ ಒಂದು ಕುಟುಂಬ ಒಂದೂವರೆ ಸಾವಿರ ರೂಪಾಯಿಗಳಲ್ಲಿ ಬದುಕಲು ಸಾಧ್ಯವಿಲ್ಲ ಎಂಬುದನ್ನು ಸರಕಾರವೇ ಒಪ್ಪಿಕೊಂಡಂತಾಯಿತು. ಇಂದು ದಕ್ಷಿಣ ಕನ್ನಡದಲ್ಲಿ ತಿಂಗಳಿಗೆ ಎರಡು ಸಾವಿರ ರೂಪಾಯಿಗಳಿಗಿಂತ ಕಮ್ಮಿ ಆದಾಯವಿರುವವರು ಇರುವುದು ಸಾಧ್ಯವೇ ಇಲ್ಲ. ಹಾಗಾದರೆ 1,139 ಫಲಾನುಭವಿಗಳಿಗೆ 165.69 ಲಕ್ಷ ರೂಪಾಯಿಗಳನ್ನು ಅಲ್ಪಸಂಖ್ಯಾತರಿಗೆ ಸಾಲ ಸೌಲಭ್ಯ ಚೆಕ್ ವಿತರಿಸಲಾಯಿತು ಎಂದು ಪತ್ರಿಕೆಗಳಿಗೆ ವರದಿ ನೀಡಿದರಲ್ಲ? ಇದು ಹೇಗೆ ಸಾಧ್ಯವಾಯಿತು?

"ಜನಸ್ಪಂದನ ಕಾರ್ಯಕ್ರಮ ಮೂಲಕ ಸರ್ಕಾರದ ಸೌಲಭ್ಯಗಳ ಕುರಿತು ಮಾಹಿತಿ ನೀಡಲಾಗುತ್ತಿದೆ. ಸರಕಾರದ ಸೌಲಭ್ಯವನ್ನು ಸದುಪಯೋಗಪಡಿಸಿಕೊಂಡು ಸ್ವಾವಲಂಬಿ ಬದುಕನ್ನು ರೂಪಿಸಿಕೊಳ್ಳಿ" ಎಂದು ಉಸ್ತುವಾರಿ ಸಚಿವರು ಭಾಷಣವನ್ನೂ ಮಾಡಿದರು. ಓರ್ವ ಮಹಿಳೆಗೆ ಸ್ವಉದ್ಯೋಗ ಮಾಡಲು, ಸ್ವಾವಲಂಬಿ ಬದುಕನ್ನು ರೂಪಿಸಿಕೊಳ್ಳಲು ಸಾಲಕ್ಕಾಗಿ ಅರ್ಜಿ ಹಾಕಲು ಅಲ್ಪಸಂಖ್ಯಾತರೆಂಬ ಸರ್ಟಿಫಿಕೇಟ್ ಬೇಕು. ಅದರೊಡನೆ ಸರಕಾರ ತೀರ್ಮಾನಿಸಿದ ಗರಿಷ್ಠ ಆದಾಯ ಮಿತಿಯನ್ನೂ ದಾಖಲಿಸಬೇಕು. ಅಂದರೆ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಸಾಲ ನೀಡುತ್ತೇವೆನ್ನುವುದು; ಅದು ಅಲ್ಪಸಂಖ್ಯಾತರಿಗೆ ದೊರೆಯದಂತೆ ಇನ್ನೇನಾದರೂ ನಿಯಮ ರೂಪಿಸಿ ತಂತ್ರ ಹೂಡುವುದು. ಅಲ್ಪಸಂಖ್ಯಾತರ ಅಭಿವೃದ್ಧಿಗೆ ಸರ್ಕಾರ 172 ಕೋಟಿ ರೂಪಾಯಿ ಬಿಡುಗಡೆ ಮಾಡಿದೆ. ಮಾರ್ಚ್ ತಿಂಗಳ ಕೊನೆಯಲ್ಲಿ ಅರ್ಹ ಅಭ್ಯರ್ಥಿಗಳಿಲ್ಲವೆನ್ನುತ್ತಾ ಹಣವನ್ನು ಸರಕಾರದ ಬೊಕ್ಕಸಕ್ಕೆ ಹಿಂತಿರುಗಿಸಬಹುದು. ಮುಸ್ಲಿಮರು ಕಮ್ಮಿ ಜನರಷ್ಟೆ ಅರ್ಜಿ ಹಾಕಿದ್ದರು ಎಂದರಾಯಿತಲ್ಲ?

ಮಾನ್ಯ ಜಿಲ್ಲಾಧಿಕಾರಿಗಳ ಗಮನಕ್ಕೆ ಇನ್ನೂ ಒಂದು ವಿಷಯವನ್ನು ತರಲಿಚ್ಛಿಸುತ್ತೇನೆ. ನನ್ನ ಮೊಮ್ಮಗನಿಗೆ ಮೀಸಲಾತಿಗಾಗಿ ನಾನು ಪ್ರಯತ್ನಿಸುತ್ತಿದ್ದೇನೆ ಎಂದು ಆಪಾದನೆ ಹೊರಿಸಿದರಲ್ಲ? ನನ್ನ ಗಂಡ ಕರ್ನಾಟಕ ಸರಕಾರದಲ್ಲಿ ಪ್ರಥಮ ದರ್ಜೆ ಅಧಿಕಾರಿಯಾಗಿದ್ದ ಕಾರಣ ನನ್ನ ನಾಲ್ಕು ಜನ ಮಕ್ಕಳಿಗೂ ಯಾವುದೇ ರೀತಿಯ ಮೀಸಲಾತಿಗಾಗಿಯೂ ನಾವು ಕೈಚಾಚಿದ್ದೇ ಇಲ್ಲ. ನನ್ನ ಇಬ್ಬರು ಮೊಮ್ಮಕ್ಕಳು ಈಗಾಗಲೇ ಡಾಕ್ಟರ್ ಮತ್ತು ಇಂಜಿನಿಯರ್ ಆಗಿದ್ದಾರೆ. ಅವರೂ ಕೂಡಾ ಯಾವುದೇ ರೀತಿಯ ಮೀಸಲಾತಿಯ ಸೌಲಭ್ಯ ಪಡೆಯಲಿಲ್ಲ. ಈಗ ಈ ಅಲ್ಪಸಂಖ್ಯಾತರ ಸರ್ಟಿಫಿಕೇಟಿಗಾಗಿ ಅರ್ಜಿ ಹಾಕಿದ ಮೊಮ್ಮಗನಿಗೂ ಮೀಸಲಾತಿ ಬೇಕಾಗಿಲ್ಲ, ಯಾಕೆಂದರೆ ಅವನು ಪದವಿ ಪೂರ್ವ ತರಗತಿಯಲ್ಲಿ ವಾಣಿಜ್ಯ ವಿಭಾಗದಲ್ಲಿ ಓದುತ್ತಿದ್ದಾನೆ. ಇದಕ್ಕೆ ಮೀಸಲಾತಿಯ ಅಗತ್ಯ ಇಲ್ಲ ತಾನೇ? ನಾವು ಅಲ್ಪಸಂಖ್ಯಾತರು ಅಥವಾ ಇಸ್ಲಾಂ ಧರ್ಮಾನುಯಾಯಿಗಳೆಂದು ಒಂದು ಸರ್ಟಿಫಿಕೇಟ್ ನೀಡಲು ಇಷ್ಟೆಲ್ಲ ತಕರಾರುಗಳನ್ನು ಎತ್ತಬೇಕಾಗಿದೆಯೇ? ಮಾನ್ಯ ಜಿಲ್ಲಾಧಿಕಾರಿಗಳು ಈ ಪ್ರಶ್ನೆಗಳಿಗೆ ಉತ್ತರ ಹೇಳಬೇಕಾಗಿದೆ.

● ಸಾರಾ ಅಬೂಬಕ್ಕರ್

ಇಲ್ಲದ ತೀರದತ್ತ ಇರುವವರ ಚಿತ್ತ

'Life's tragedy is we get old too soon and wise too late'

ನೀವು ಒಬ್ಬರು ಸತ್ತರಲ್ಲ ಎಂದು ದುಃಖಪಡುತ್ತೀರಾ ಅಥವಾ ಇಲ್ಲಿ ನಮ್ಮೊಂದಿಗೆ ಕೆಲಕಾಲ ಬದುಕಿದ್ದರಲ್ಲ ಅಂತಾ ಸಂತೋಷ ಪಡುತ್ತೀರಾ...?

ಇತ್ತೀಚೆಗೆ ಗೋಪಾಲಶರ್ಮ ಎಂಬುವವರ ಸಾವು-ಬದುಕಿನ ಕುರಿತು ಒಂದು ಪುಸ್ತಕ ಓದಿದ ನಂತರ ನಾನು ಕೇಳಿಕೊಂಡಿರುವ ಪ್ರಶ್ನೆ ಇದು.

ಯಾರದ್ದೇ ಸಾವಿನ ಬಗ್ಗೆ ಮಾತಾಡುವಾಗ ಅಂತವರ ಬದುಕಿನ ಕುರಿತೇ ನಾವು ಹೆಚ್ಚು ಮಾತನಾಡುತ್ತಿರುತ್ತೇವೆ. ಆದರೆ ತೀರಿಕೊಂಡಾಗಿನ ದುಃಖ, ಇಲ್ಲಾ ಬದುಕಿದ್ದಾಗಿನ ಅವಧಿಯ ಸಂತೋಷ- ಈ ಎರಡರ ಅನುಭೂತಿಯನ್ನು ಭರಿಸಲಾಗದ ಸಂದರ್ಭಗಳೂ ಮನುಷ್ಯರೊಬ್ಬರಿಗೆ ಎದುರಾಗಲಿಕ್ಕೂ ಸಾಕು.

ನಮ್ಮ ಲಂಕೇಶ್ ಬಳಗದ ಬರಹಗಾರ ಮಿತ್ರರೊಬ್ಬರು ಕೆಲ ತಿಂಗಳ ಹಿಂದೆ 'ಇಲ್ಲದ ತೀರದಲ್ಲಿ' ಎಂಬ ಒಂದು ಪುಸ್ತಕ ಕಳುಹಿಸಿದ್ದರು. ದಕ್ಷಿಣಕನ್ನಡ ಜಿಲ್ಲೆ ಕೊಡಗು ಮುಂತಾದೆಡೆ ಬದುಕಿ ಈಗ ನಿರ್ಗಮಿಸಿರುವ ಸಿ.ವಿ.ಗೋಪಾಲಶರ್ಮರ ಬದುಕಿನೊಂದಿಗೆ ಒಂದು ಸಂವಾದವಾಗಿರುವ ಈ ಪುಸ್ತಕ ಒಂದು ಅಪರೂಪದ Content ಅನ್ನು ಒಳಗೊಂಡಿದೆ. ಸಾಮಾನ್ಯರಲ್ಲಿ ಸಾಮಾನ್ಯರಂತೆ ಬದುಕಿಹೋದ ಶರ್ಮರ ಜೀವನ ಚಿತ್ರಣ ಕಟ್ಟಿಕೊಡುತ್ತಲೇ ದಾಂಪತ್ಯ, ಕುಟುಂಬಗಳ ಅವ್ಯವಸ್ಥೆ- ಸುವ್ಯವಸ್ಥೆ ಬಡತನದ ಘೋರ, ಆದರೆ ನಿರ್ಲಿಪ್ತ ನಿರೂಪಣೆಗಳು ಇದರಲ್ಲಿವೆ. ಪ್ರಕ್ಷುಬ್ಧತೆಗಳ ನಡುವೆ ಬೇಯುತ್ತಾ ಬದುಕುತ್ತಿರುವ ಅನೇಕ ಕುಟುಂಬಗಳ ಕತೆಯಂತೆಯೇ ಇದು ಭಾಸವಾದರೂ ಈ ಪುಸ್ತಕ ಓದಿ ನಾವು ಕಲಿಯಬೇಕಾದ ಪಾಠಗಳು ಅನೇಕವಿದೆ.



ಗೋಪಾಲಶರ್ಮರ ಬದುಕಿನ ಬಗ್ಗೆ ದಾಖಲಿಸಿರುವ ಅವರ ಬರಹಗಾರ ಪುತ್ರ 20ನೇ ಶತಮಾನದ ಉತ್ತರಾರ್ಧದ ಕರಾವಳಿ ಕರ್ನಾಟಕದ ಬ್ರಾಹ್ಮಣ ಕುಟುಂಬವೊಂದರ ಛಿದ್ರಮಯ ಬದುಕಿನ ವಿವರ ನೀಡುತ್ತಾರೆ. ಕೆಲ ದಶಕಗಳ ಹಿಂದೆ ಕೋಟ ಲಕ್ಷ್ಮೀನಾರಾಯಣ ಕಾರಂತರು (ಶಿವರಾಮ ಕಾರಂತರ ಸೋದರ) ದಾಖಲಿಸಿದ 'ನೆನಪಿನಂಗಳದಲ್ಲಿ ಮುಸ್ಸಂಜೆ ಹೊತ್ತು' ಆತ್ಮಕತೆಯಲ್ಲಿ ಬರುವ ದಾರುಣ ಬಡತನ, ಅಸಹಾಯಕತೆಗಳಿಗಿಂತ ಹೆಚ್ಚು ಕಾಡುವ ಇದರಲ್ಲಿನ ವಿವರಗಳಂತೂ ಬಡತನಕ್ಕೆ ಜಾತಿಯಿಲ್ಲ ಎನ್ನುವಂತಿವೆ.

'ಕತೆ ಅಂತಾ ಹೇಳಿಕೊಳ್ಳಲಿಕೆ ನಮ್ಮದೇನು ಸೂರ್ಯವಂಶ-ಚಂದ್ರವಂಶ ಅಲ್ಲ' ಅನ್ನುತ್ತಲೇ ಈ ಸೂರ್ಯ-ಚಂದ್ರರ ನೆತ್ತಿಯ ಕೆಳಗೆ ನಡೆಯುವ ಮನುಷ್ಯ ಸಂಘರ್ಷಗಳನ್ನು ಅರ್ಥಾತ್ ತನ್ನ ತಂದೆ-ತಾಯಿಯ ಬದುಕನ್ನು ಲೇಖಕ ವಿಶ್ಲೇಷಿಸುವ ವಿಧಾನ ನಿರ್ಲಿಪ್ತ ಧೋರಣೆಯಲ್ಲಿದೆ. ಆದರೆ ಇನ್ನೊಂದು ತುದಿಯಲ್ಲಿರುವ ಓದುಗ ಡಿಸ್ಟರ್ಬ್ ಆಗುತ್ತಾನೆ. ಒಬ್ಬರ ಬದುಕಿನಲ್ಲಿ ಸಂತೋಷ ಅನ್ನುವುದೊಂದು ಸಂಚಾರಿ ಭಾವವಾಗಿ ವಿಷಾದವೇ ಸ್ಥಾಯಿಭಾವವಾಗಿಬಿಟ್ಟರೆ ಅಂತಹದ್ದನ್ನು ಭರಿಸಲು, ಆ ನಂತರವೂ ನಸುನಗುತ್ತಾ ಅವನ್ನೆಲ್ಲಾ ಮೀರಲು ಅಪಾರ ಇಚ್ಛಾಶಕ್ತಿ ಬೇಕಾಗುತ್ತದೆ. ನಿಮ್ಮ ಅಜ್ಜನೊಬ್ಬ ಕುಟುಂಬಕ್ಕೆ ನೆರವಾಗಬೇಕೆಂದು 'ನನ್ನನ್ನು ದಿನಾ ಬಸ್‌ಸ್ಟಾಂಡಿಗೆ ಕರೆದೊಯ್ದು ಭಿಕ್ಷೆಗೆ ಕೂರಿಸಿ, ಸಂಜೆ ಬಂದು ವಾಪಸ್ ಕರೆದುಕೊಂಡು ಹೋಗಿ' ಅಂದರೆ ಹೇಗಿರುತ್ತದೆಂದು ಒಮ್ಮೆ ಕಲ್ಪಿಸಿಕೊಳ್ಳಿ. ಅಪ್ಪ-ಅಮ್ಮ ಆದವರಿಗೆ ಜಗಳವೇ ದಾಂಪತ್ಯವಾಗಿಬಿಟ್ಟರೆ, ಜಗಳವೇ ಬದುಕಾಗಿಬಿಟ್ಟರೆ, ಊಟ, ಉದ್ಯೋಗ, ಮಕ್ಕಳ ಪರಿವೆಯೇ ಇಲ್ಲದೆ ಜಗಳವೇ ಎಲ್ಲಾ ಆಗಿಬಿಟ್ಟರೆ, ಅಂತಲ್ಲಿ ಬೆಳೆಯುವ ಮಗುವಿನ ಮನಸ್ಥಿತಿ ಹೇಗಾಗಬಹುದು? ಅಪ್ಪ-ಅಮ್ಮ ಇಬ್ಬರೂ ಹೊಡೆದಾಡಿಕೊಳ್ಳುತ್ತಾ ಕೊನೆಗೆ ಕುಡಿದು ತಮಗೆ ತಾವೇ ಹೊಡೆದುಕೊಳ್ಳುತ್ತಾ ಸ್ವಯಂ ಶಿಕ್ಷೆ ವಿಧಿಸಿಕೊಂಡರೆ ಅದರ ಹಿಂದಿರಬಹುದಾದ ಮಾನಸಿಕ ಪ್ರಕ್ಷುಬ್ಧತೆ ಆದೆಷ್ಟಿರಬೇಡ?

ಇವೆಲ್ಲಕ್ಕೂ ಕಾರಣಗಳು ಅನೇಕವಿರಬಹುದು. ಆದರೂ ಅಂತದ್ದನ್ನೆಲ್ಲಾ ಭರಿಸಿಯೂ, ಕೂಲಿ ಮಾಡುತ್ತಾ ಓದು ಮುಂದುವರೆಸಿ ರ್‍ಯಾಂಕ್ ಪಡೆದು ಪ್ರಖ್ಯಾತ ಲೇಖಕನಾದನೇ ಈ ನನ್ನ ಮಿತ್ರ ಎಂದು ನನಗಚ್ಚರಿಯಾಗಿದೆ.

ಇದು ಅರವಿಂದ ಚೊಕ್ಕಾಡಿಯವರ ತಂದೆಯ ಬದುಕಿನ ಕತೆ.

ದೊಡ್ಡ ದನಿಯಲ್ಲಿ ನಗುತ್ತಾ, ಗಟ್ಟಿ ದನಿಯಲ್ಲಿ ಮಾತನಾಡುತ್ತಾ ತನ್ನ ಟೀಚರ್ ಕೆಲಸವನ್ನು ಇಷ್ಟಪಡುತ್ತಾ ಮೂಡುಬಿದರೆಯಲ್ಲಿರುವ ಚೊಕ್ಕಾಡಿ ಈ 'ಇಲ್ಲದ ತೀರದಲ್ಲಿ'ಯ ಲೇಖಕ.

ಅವರ ನಿರೂಪಣೆಯಲ್ಲಿ ವಿಷಾದವಿಲ್ಲ, ಸಿಟ್ಟಿಲ್ಲ, ಸ್ವಮರುಕ ಇಲ್ಲವೇ ಇಲ್ಲ, ಆದರೆ ಮನುಷ್ಯ ಕುಟುಂಬದ ಅರ್ಥ-ಅನರ್ಥಗಳನ್ನು ಅರ್ಥೈಸಿಕೊಳ್ಳಲು ನಮಗಿದು ನೆರವಾಗುತ್ತದೆ. ಮನುಷ್ಯ ಪ್ರೀತಿಯ, ನೊಂದವರೂ ತಳೆಯಬೇಕಾದ ಔದಾರ್ಯದ ದ್ರವ್ಯವಿದೆ. ಮನುಷ್ಯ ಸಂಬಂಧಗಳನ್ನು ನಿರ್ವಹಿಸುವ ಬಗೆ, ಅದರೊಳಗಿನ ಏಳು ಬೀಳುಗಳು ಹಾಗೂ ಸರಿ ತಪ್ಪುಗಳನ್ನು ಅರ್ಥಮಾಡಿಕೊಳ್ಳುವಷ್ಟರಲ್ಲೇ ಜಾರಿ ಹೋಗುವ ಬದುಕು ನಮ್ಮನ್ನೆಲ್ಲಾ 'ಇಲ್ಲದ ತೀರದತ್ತ' ಸಾಗಿಸಬಲ್ಲವು ಮಾತ್ರ, ಇಲ್ಲಿ ಇನ್ನೂ ಇರುವವರ ಚಿತ್ತ 'ಇಲ್ಲದ ತೀರ'ವನ್ನು ಸರಿಯಾಗಿ ಗ್ರಹಿಸಿದರೆ ಅದರೊಳಗೆ ಅನೇಕ ಮೌಲ್ಯಗಳಿವೆ.

ಗೆಳೆಯ ಚೊಕ್ಕಾಡಿಯವರನ್ನು ತಂದೆಯ ಬದುಕು-ಸಾವು ಅದೆಷ್ಟು ಕಾಡಿದೆಯೆಂದರೆ 'ಎರಡು ತಲೆಮಾರು' ಎಂಬ ಇನ್ನೊಂದು ಪುಸ್ತಕ ರೂಪಿಸಿದ್ದಾರೆ. ಬಿಜಾಪುರದ ಎನ್.ಎಂ. ಬಿರಾದಾರ್ ಪ್ರಕಟಿಸಿರುವ ಈ ಪುಸ್ತಕದಲ್ಲಿ 'ಅಪ್ಪ-ಅಮ್ಮ' ಕುರಿತು ಐವತ್ತಕ್ಕೂ ಹೆಚ್ಚು ಜನ ತಮ್ಮ ಅನುಭವ ಹಂಚಿಕೊಂಡಿದ್ದಾರೆ. ಈ ಬರಹಗಳು ನಮಗೆ ಅನೇಕ ವಿಚಾರಗಳನ್ನು ಕಲಿಸುವಂತಿವೆ. ಮುಂದಿನ ಫೆಬ್ರವರಿ 28ರಂದು ಬೆಳ್ತಂಗಡಿಯಲ್ಲಿ ಈ ಎಲ್ಲಾ ಆಶಯ-ಕಾಳಜಿಗಳನ್ನು ಧ್ವನಿಸುವ 'ಗೋಪಾಲ ಶರ್ಮ ಸ್ಮರಣ ಕಾರ್ಯಕ್ರಮ'ವೊಂದನ್ನು ಚೊಕ್ಕಾಡಿ ಮತ್ತವರ ಗೆಳೆಯರು ನಡೆಸುತ್ತಿದ್ದಾರೆ.

ಒಬ್ಬರು ಸತ್ತ ನಂತರ ಏನಾಗುತ್ತಾರೆ? ಬಹುಶಃ ಹುಟ್ಟುವ ಮುಂಚೆ ಏನಾಗಿದ್ದರೋ ಅದೇ ಆಗಬಹುದು. ನಮ್ಮ ಪ್ರೀತಿಯ ಜನರನ್ನು ವಿಧಿ ಕಸಿದುಕೊಂಡಾಗ ಅವರನ್ನು ಮತ್ತೂ ಉಳಿಸಿಕೊಳ್ಳುವ ಬಗೆ ಅಂದರೆ ಪ್ರೀತಿ ತೋರಿಸುವ ಮೂಲಕ ಅಲ್ಲವೇ?

ಗೆಳೆಯ ಅರವಿಂದ ಚೊಕ್ಕಾಡಿ ಅದನ್ನೇ ಆಶಿಸಿದ್ದಾರೆ. ಈ ಪುಸ್ತಕಕ್ಕೆ ಮುನ್ನುಡಿ ಬರೆದಿರುವ ಅವರ ಪತ್ನಿ ಪ್ರಮೀಳರ ಒಂದು ಕವನ ಈ ಆಶಯವನ್ನು ಇನ್ನಷ್ಟು ಚೆನ್ನಾಗಿ ಧ್ವನಿಸುತ್ತಿದೆ. ಇದೊಂದು ಪ್ರೇಮ ಪದ್ಯವೇ ಆದರೂ ಮನುಷ್ಯ ಸಂಬಂಧಗಳಿಗೆ ಹೊಸ ಸ್ಪರ್ಶ, ಆಯಾಮ ನೀಡುವುದೂ ಆಗಿದೆ. ಅದನ್ನೂ ಇಲ್ಲಿ ಪ್ರಕಟಿಸಿದೆ.

ಪದ್ಯದ ಕೊನೆ ಸಾಲಿಗೆ

ಅಪ್ಪ-ಅಮ್ಮ ನಮಗರ್ಥವಾದ ಮೇಲೆ

ಪ್ರೀತಿ ಹುಟ್ಟದಿರುವುದೇ ನಾಳೆ


ಯಾವುದು ಹೊಸದಲ್ಲ ಹೇಳು...

ಎಂತಲೂ ಪದ್ಯ ಮುಂದುವರೆಸಬಹುದಲ್ಲವೇ?

ಬಿಡಿ ಚಿತ್ರಗಳು



▸ ಪಾರ್ವತೀಶ



ಪ್ರೀತಿ ಹುಟ್ಟಿದ ಮೇಲೆ...

ಯಾವುದು ಹೊಸದಲ್ಲ ಹೇಳು
ಪ್ರೀತಿ ಹುಟ್ಟದ ಮೇಲೆ
ಬರಡು ನೆಲದ ತುಂಬಾ ಹತ್ತು ಹನಿ ಬಿದ್ದ
ಮೇಲೆ

ಹೊಂಬಿಸಿಲ ತರುಣಕಿರಣ ಮೈ ತಟ್ಟದ ವೇಳೆ
ಏಕತಾನದ ಜಗದಿ ಏಕಾಂಗಿ ಇರುಳುಗಳ ಪರದೆ
ಹರಿದ
ಮೇಲೆ

ಹೂಹೂ ಕನಸುಗಳು ಜೊತೆಯಾದ ವೇಳೆ
ಯಾವುದು ಹೊಸದಲ್ಲ ಹೇಳು
ಪ್ರೀತಿ ಹುಟ್ಟದ ಮೇಲೆ

ಆ ಕೊಂಬೆ ಮೇಲಿನ ಕುಹೂ ಕುಹೂ
ನೇರ ನಮ್ಮೆದೆಗೇ ಇಳಿದ ಮೇಲೆ
ಭೋರ್ಗರೆವ ತೆರೆತೆರೆಗಳಲ್ಲೂ
ಜಯಘೋಷವೆದ್ದ ವೇಳೆ
ಕಣ್ಣು ಕೋರೈಸ ನೀಲಿತೆರೆಗಳಲ್ಲಿ
ನೂರು ನಕ್ಷತ್ರ ಹೊಳೆದ ಮೇಲೆ
ನನ್ನ ನಿನ್ನ ನಡುವೆ
ಯಾವುದು ಹೊಸದಲ್ಲ ಹೇಳು
ಪ್ರೀತಿ ಹುಟ್ಟಿದಾ ಮೇಲೆ

ಪುಸ್ತಕ ಪರಿಚಯ



ನೆರಳು

ನಿಷ್ಕಳಂಕ ಪ್ರೀತಿಯ ಹುಡುಕಾಟ



ನೆರಳು (ಕಾದಂಬರಿ) ಲೇ: ಲಕ್ಷ್ಮಣ ಕೊಡಸೆ,

'ನೆರಳು' ಲೇಖಕ ಲಕ್ಷ್ಮಣ್ ಕೊಡಸೆಯವರ ಮೂರನೆಯ ಕಾದಂಬರಿ. ಬೇರೆ ಬೇರೆ ಊರುಗಳಲ್ಲಿ ವಾಸವಾಗಿರುವ ಮೂರು ಸಂಬಂಧಿಕ ಕುಟುಂಬಗಳಲ್ಲಿ ಮೂರು ದಿನಗಳಲ್ಲಿ ನಡೆಯುವ ಘಟನಾವಳಿಗಳ ಸುತ್ತ ಈ ಕಾದಂಬರಿ ರಚಿತವಾಗಿದೆ.

ಚಂದ್ರಶೇಖರ, ಸೋಮಶೇಖರ ಹಾಗೂ ರೇಣುಕಾಂಬ ಅನ್ನಪೂರ್ಣಮ್ಮನವರ ಮಕ್ಕಳು. ಚಂದ್ರಶೇಖರ ಸರ್ಕಾರಿ ನೌಕರಿಯಿಂದ ನಿವೃತ್ತನಾಗಿದ್ದರೆ, ಉಳಿದಿಬ್ಬರು ನಡುವಯಸ್ಸಿನವರಾಗಿದ್ದು ಇವರ ಮಕ್ಕಳೆಲ್ಲಾ ಶಿಕ್ಷಣ ಮುಗಿಸಿ ಬೆಂಗಳೂರಿನಲ್ಲಿ ಉದ್ಯೋಗದಲ್ಲಿದ್ದಾರೆ. ರೇಣುಕಾಂಬ ಕರಿಯಪ್ಪ ಎಂಬ ಮೇಷ್ಟರನ್ನು ಪ್ರೀತಿಸಿ ಅಂತರ್ಜಾತಿ ವಿವಾಹವಾಗಿದ್ದಾಳೆ. ಗಂಡನನ್ನು ಕಳೆದುಕೊಂಡಿರುವ ಅನ್ನಪೂರ್ಣಮ್ಮ ಏಕಾಂಗಿ. ಬದುಕಿನ ಕಷ್ಟ ಸುಖಗಳಲ್ಲಿ ಈ ಕುಟುಂಬಗಳು ಪರಸ್ಪರ ಹೇಗೆ ಸ್ಪಂದಿಸುತ್ತವೆ, ಪ್ರಮುಖವಾಗಿ ಅನ್ನಪೂರ್ಣಮ್ಮನನ್ನು ಆಕೆಯ ಮಕ್ಕಳು - ಸೊಸೆಯಂದಿರು ಹಾಗೂ ಅಳಿಯ ಹೇಗೆ ನಡೆಸಿಕೊಳ್ಳುತ್ತಾರೆ ಎಂಬುದು ಕಾದಂಬರಿಯ ಪ್ರಧಾನ ಕಾಳಜಿಯಾಗಿದೆ.

ಕುಟುಂಬಗಳ ವಿಘಟನೆಗೆ ಹಾಗೂ ಮನುಷ್ಯ ಸಂಬಂಧಗಳಲ್ಲಿನ ಬಿರುಕುಗಳಿಗೆ ಜಾಗತೀಕರಣ, ಆಧುನಿಕತೆಯ ಕಾರಣಗಳನ್ನು ನೀಡಿ ಸಮಸ್ಯೆಯನ್ನು ತೀರ ಸರಳವಾಗಿ ನೋಡುವ ದೃಷ್ಟಿಕೋನ ಅನೇಕ ಲೇಖಕರಲ್ಲಿ ಸಾಮಾನ್ಯವಾಗಿದೆ. ಆದರೆ ಇಂತಹ ವಿಘಟನೆ ಹಾಗೂ ಬಿರುಕುಗಳಿಗೆ ಮನುಷ್ಯರಲ್ಲಿಯೇ ಇರುವ ಸಣ್ಣತನ, ಅಹಂಕಾರ, ಅಧಿಕಾರದಾಹ ಹಾಗೂ ಸ್ವಾರ್ಥಗಳು ಹಿನ್ನೆಲೆಗೆ ಸರಿಯುತ್ತವೆ. ಈ ಹಿನ್ನೆಲೆಯಲ್ಲಿ 'ನೆರಳು' ವಿಶೇಷ ಗಮನ ಸೆಳೆಯುತ್ತದೆ.

ಇಳಿವಯಸ್ಸಿನಲ್ಲಿರುವ ಅನ್ನಪೂರ್ಣಮ್ಮ ತನ್ನ ಗಂಡುಮಕ್ಕಳ ಮತ್ತು ಸೊಸೆಯಂದಿರಿಂದ ಅವಜ್ಞೆಗೆ ಪಾತ್ರರಾಗಲು ಇವರೆಲ್ಲರ ಸಣ್ಣತನ ಮತ್ತು ಸ್ವಾರ್ಥಗಳು ಮಾತ್ರ ಕಾರಣವಾಗುವುದಿಲ್ಲ, ಮನೆಗೆಲಸದವರ ಮೇಲೆ ಅಧಿಕಾರ ಚಲಾಯಿಸುವ, ಪರಸ್ಪರರ ಮೇಲೆ ಚಾಡಿ ಹೇಳುವ, ಅಗತ್ಯ ಸಂದರ್ಭಗಳಲ್ಲಿ ಮಕ್ಕಳು ಸೊಸೆಯಂದಿರ ನೆರವಿಗೆ ನಿಲ್ಲದ ಅನ್ನಪೂರ್ಣಮ್ಮನವರ ವ್ಯಕ್ತಿತ್ವವೂ ಕಾರಣವಾಗುತ್ತದೆ. ಉದ್ಯೋಗಸ್ಥ ಅನುಕೂಲಸ್ಥ ಮಕ್ಕಳು ತಾಯಿಯನ್ನೊಂದು ಹೊರೆ ಎಂದು ಭಾವಿಸುವಾಗ ಈ ಪಾತ್ರಗಳ ಬಗ್ಗೆ ಮೂಡುವ ತಿರಸ್ಕಾರದ ಭಾವ ಅನ್ನಪೂರ್ಣಮ್ಮನವರ ಪರವಾದ ಅನುಕಂಪವಾಗಿ ಪರಿವರ್ತಿತವಾಗುವುದಿಲ್ಲ, ಲೇಖಕ ಪಾತ್ರ ನಿರ್ಮಾಣದಲ್ಲಿ ಪಡೆದ ಯಶಸ್ಸನ್ನು ಇದು ತೋರುತ್ತದೆ.

ಕಾದಂಬರಿಯ ಎಲ್ಲ ಪಾತ್ರಗಳೂ ಜೀವಂತವಾಗಿ ಮೂಡಿಬಂದಿವೆ. ಭಾವಾವೇಶವನ್ನು ಮೂಡಿಸುವಂತಹ ವಿಪುಲ ಸನ್ನಿವೇಶಗಳಿದ್ದರೂ ಅವುಗಳನ್ನೆಲ್ಲ ತಣ್ಣಗೆ ನಿರೂಪಿಸುವ ಲೇಖಕ ಓದುಗನನ್ನು ವಶೀಕರಿಸಿಕೊಳ್ಳಲು ಅದನ್ನು ದುರ್ಬಳಕೆ ಮಾಡಿಕೊಂಡಿಲ್ಲ, ಕಾದಂಬರಿಯ ಅಂತ್ಯ ಓದುಗನಿಗೆ ನಿರೀಕ್ಷಿತವೆನಿಸಿದರೆ ಅಚ್ಚರಿಯಿಲ್ಲ, ಶೌಚ-ಉಪಾಹಾರ-ಕಾಫಿ ಸೇವನೆಯ ಪುನರಾವರ್ತನೆಗಳು ಕಾದಂಬರಿಯನ್ನು ಕೊಂಚ ಭಾರವಾಗಿಸಿದೆ.

'ನೆರಳು' ಗೋಳಿನ ಕಾದಂಬರಿಯೇನೂ ಅಲ್ಲ, ನಿಷ್ಕಳಂಕ ಪ್ರೀತಿ ತೋರುವ ಕರಿಯಪ್ಪ, ರೇಣುಕಾಂಬ, ಸಣ್ಣನಾಯಕರಂತಹ ಪಾತ್ರಗಳೂ ಇಲ್ಲಿ ಹೃದಯಸ್ಪರ್ಶಿಯಾಗಿ ಒಡಮೂಡಿವೆ. ಒಂದರ್ಥದಲ್ಲಿ ಈ ಕಾದಂಬರಿ ನಿಷ್ಕಳಂಕ ಪ್ರೀತಿಯ ಹುಡುಕಾಟವೇ ಆಗಿದೆ. ಮೂರು ದಿನದ ಘಟನಾವಳಿಗಳು ಕುತೂಹಲಕರವಾಗಿ ಬಿಚ್ಚಿಕೊಳ್ಳುತ್ತಾ ಸಾಗುವ ಈ ಪುಟ್ಟ ಕಾದಂಬರಿಯನ್ನು ಒಂದೇ ಗುಕ್ಕಿನಲ್ಲಿ ಓದಿಬಿಡಬಹುದು.

● ಸರ್ಜಾಶಂಕರ್ ಹರಳಿಮಠ

...ಸ್ಣದೇವರಾಯನಿಗೂ ರೆಡ್ಡಿಗಳಿಗೂ ಏನ್ಲ ಸಮಂದ!


...ಹಾಳು ಹಂಪೆಯನ್ನು ಶೃಂಗರಿಸಿ, ಅಲ್ಲಿ ...ದೇವರಾಯನ ಪಟ್ಟಾಭಿಶೇಕವನ್ನು ಐನೂರು ವರ್ಷಗಳ ...ನ ರೆಡ್ಡಿಗಳು ಮಾಡುತ್ತಿದ್ದಾರೆ ಎಂಬ ಸುದ್ದಿ ಕೇಳಿದ ...ಮಾವ,

"ಅಂಗರೆ ರೆಡ್ಡಿಗಳು ಕಿಷ್ಣದೇವರಾಯನ ವಂಸ ...ರೇನ್ಲ?" ಎಂದ.

"ಏ ನಿನಿಗ್ಯಾರೇಳ್ತರೆ ಹೋಗು ಮಾವ. ಕೃಷ್ಣದೇವರಾಯ ...ವುನೆತನದೋನು. ಈ ರೆಡ್ಡಿಗಳು ಪ್ಯಾದೆ ...ತನದವ್ರು."

"ಪ್ಯಾದೆ ಮನತನ ಅಂದ್ರೆ ಅದ್ಯಾವುದ್ಲ?" ಎಂದ ...

"ಪ್ಯಾದೆ ಮನತನ ಅಂದ್ರೆ ಪೊಲೀಸ್‌ಪ್ಯಾದೆ ಮನತನ ...ು. ರೆಡ್ಡಿಗಳು ಪೊಲೀಸ್ ಪ್ಯಾದೆ ಮಕ್ಕಳು. ಏನು



...ತ್ತಿ ನಾವು ಕೃಷ್ಣದೇವರಾಯನಂಗೆ ರಾಜರಾಗನ ಅಂತ ...ದ್ದತ್ತವೆ. ಅವುನಂಗಾಗಕ್ಕೆ ಮುಂದೆ. ಯಾವನಿಗೂ ...ಲ್ಲ, ಈ ಭೂಮಿ ಮ್ಯಾಲೆ ಅವುನಂಗಿದ್ದ ರಾಜ ...ನೊಬ್ಬನೆ ಅಂತ ಕೃಷ್ಣದೇವರಾಯನ್ನ ನೋಡಿದ್ದ ಒಬ್ಬ ...ಮೋನು ಹೇಳವುನೆ."

"ರಾಜಕುಮಾರನಂಗಿದ್ದ ಅಲವೇನ್ಲ ಅವುನು?" ...ಳು ಜುಮ್ಮಿ.

"ಸುಮಾರು ಜನಕೆ ನಿನ್ನಂಗೆ ಆಗ್ಯದೆ ಕಣೆ. ...ದೇವರಾಯ ಅಂದ್ರೆ ರಾಜಕುಮಾರನೆ ನ್ಯನಪಿಗೆ ಬತ್ತನೆ. ...ವುನು ಅಂಗಿರಲಿಲ್ಲ."

"ಇನ್ನಂಗಿದ್ದಾ?"

"...ಮಕಥದಲ್ಲಿ ಸಿಡುಬಿನ ಕಲೆ ಇದ್ದವಂತೆ. ಮಟ್ಟಸವಾರ ...ತೆ. ಮೂರು ನಾಕು ಜನ ಪಟ್ಟದ ರಾಣಿರಿದ್ರೂ ...ನ್ನೂರು ಜನ ಹೆಂಗಸರ ಮಡಿಕಂಡಿದ್ದನಂತೆ."

"ಅಯ್ಯೋ ಅಯ್ಯೋ, ಮುನ್ನೂರು ಜನ ಅಂದ್ರೇನಾಯ್ತು ...ತ್ರಕ್ಯಲ್ಲ ಯಾವಾಗೋಯ್ತಿದ್ದಾ?" ಎಂದು ಸೀರ ...ಸ್ಸರ ತೆಗೆದ.

"...ನೋಡೋ, ಈ ರಾಜ್ಯದಲ್ಲಿ ಯಾವ ಹೆಣ್ಣುಮಗಳು ...ಂಗಿರತಳೆ ಅವುಳ ಕರಕಂಡೋಗಿ ರಾಜನಿಗೆ ಕೊಟ್ಟು ...ದೋಟು ಬಹುಮಾನ ಈಸ್ಕಂಬರೋರಂತೆ. ಆ ...ಗಿ ರಾಜನತ್ರಕೋದ್ರೆ ಸಾಕು ಮಾರಾಣಿಯಂಗೆ ...ಕಳರಂತೆ. ರಾಜ ಬರ್ಲಿ, ಬರ್ದೆ ಇರ್ಲಿ ಅವುಳು ...ರಾಜನಿಗೇ ಮೀಸಲು. ಆ ತರದಲ್ಲಿ ಕಾಲ ಮಾಡೊ ...ನ್ನೂರು ಜನ ಹೆಡತಿರಿದ್ರಂತೆ. ಅವನ್ನೆಲ್ಲ ನೋಡಿದ ... ಏನಂದವುನೆ ಗೊತ್ತೇನೋ?"

"...ಏನಂದವುನ್ಲ?"

"ಈ ಭೂಮಂಡಲದಲ್ಲಿ ಇವುನಿಗಿಂತ ದೊಡ್ಡ ರಾಜ ಇನ್ನಿಲ್ಲ, ಇವುನಿಗಿಂತ ಶ್ರೀಮಂತನೂ ಇಲ್ಲ ಅಂದವುನೆ. ಐನೂರು ವರ್ಸದ ಹಿಂದೆ ಆ ರಾಜ್ಯ ಯಂಗಿತ್ತೂ, ರಾಜಯಂಗಿದ್ದ ಲ್ಯಕ್ಕ ಹಾಕು."

"ನೋಡು ಮತ್ತೆ, ಈಗ್ಯಾವ ರಾಜ ಇದ್ದಾನು?"

"ಈಗ್ಲು ಇಲ್ಲ, ಮುಂದು ಇಲ್ಲ ಬುಡು, ಇಡೀ ಪ್ರಪಂಚದ ಕಣ್ಣು ಬಿದ್ದತ್ತಂತೆ ಆ ರಾಜ್ಯದ ಮ್ಯಾಲೆ. ಆಗಿನ ಕಾಲಕೆ ಹತ್ತು ಲಕ್ಷ ಜನ ಸೈನಿಕರು ಇದ್ರು ಅಂದ್ರೆ ಅವುನಿನ್ನಂಥ ರಾಜ ಲ್ಯಕ್ಕಹಾಕು."

"ಹತ್ತು ಲಕ್ಷ ಸೈನಿಕರೇ?" ಎಂದು ಕಾಳಮಾವ ಅಚ್ಚರಿಗೊಂಡ.

"ಅವುರಿಗ್ಯಲ್ಲ ಸಂಬಳ ಹ್ಯಂಗೆ ಕೊಡತಿದ್ದ ಗೊತ್ತೆ ದೊಡಪ್ಪ?" ಎಂದುಕೊಂಡು ವಾಟಿಸ್ಸೆ ಕಾಣಿಸಿಕೊಂಡ.

"ಯಾವನಿಗ್ಗೊತ್ತ್ಲ?"

"ಕೃಷ್ಣದೇವರಾಯ ವಿಜಯನಗರದಲ್ಲಿ ಸೂಳೆಗಾರಿಕೆ ಮಾಡಕ್ಕೆ ಪರಿಮಿಶನ್ ಕೊಟ್ಟಿದ್ದ ದೊಡಪ್ಪ. ಆ ಸೂಳೆಮೇಲ್ಯಲ್ಲ ಟ್ಯಾಕ್ಸಾಕಿದ್ದನಂತೆ. ಆ ತೆರಿಗೆ ಅಮವುಂಟಲ್ಲಿ ಸೈನಿಕರಿಗೆ ಸಂಬಳ ಕೊಡತಿದ್ದನಂತೆ ಅಂದ್ರೆ ಲ್ಯಕ್ಕ ಹಾಕು."

"ಸುಳ್ಳು ಹಿಂಗೂ ಹೇಳತರ್ಲ?"

"ದ್ವಡಪ್ಪ, ನಾನ್ಯಾಕೆ ಸುಳ್ಳೇಳನ? ನಮ್ಮ ಹ್ಯರಗನಳ್ಳಿ ನಾಗೇಗೌಡ್ರೆ ಹೇಳತಿದ್ರು. ಅವುರು ಡಿ.ಸಿ.ಯಾಗಿದ್ದೊರು. ಡಿ.ಸಿ.ಯಾಗಿದ್ದೊನಿಗೆ ಯಲ್ಲಾ ದಾಖಲೆಗಳೂ ಸಿಗತವೆ. ಅದ ನೋಡಿ ಹೇಳತಿದ್ರು ಗೊತ್ತೆ?"

"ಸೂಳೆರ ಮ್ಯಾಲೆ ಸುಂಕ ಹಾಕೋನು ಅವುನ್ಯಂಥ, ರಾಜನ್ಲ?"

"ಅವುನ್ಯಂಥ ರಾಜ ಅನ್ನದಕ್ಕಿಂತ ಆಗಿನ ಸೂಳೆಗಾರಿಕೆ ಹ್ಯಂಗೆ ನ್ಯಡೀತಿರಬವುದು ಅಂತ ಲ್ಯಕ್ಕ ಹಾಕು. ಇಡೀ ವಿಜಯನಗರನೇ ಕಾಮಾಟಿಪುರದಂಗಿತ್ತೇನಪ್ಪ."

"ಥೂ, ಕಾಮಾಟಿ ಪುರಕೋಲಸಬ್ಯಾಡ ಕಣೊ. ಕಾಮಾಟಿಪುರದಲ್ಲಿ ಬಂದು ನಿನ್ನನ್ನ ಯಳಕಂಡೆ ಹೋಯ್ತರೆ. ಆದ್ರೆ ವಿಜಯನಗರದಲ್ಲಿ ಡ್ರಸ್ ಮಾಡಿಕೊಂಡು ಬಾಗಲಲ್ಲಿ ಕುಂತಿರತಿದ್ಲಂತೆ. ಗಿರಾಕಿ ನೋಡಿ ಮೆಚ್ಚಿಕೊಂಡ್ರೆ, ಮಾತ್ರ ವಳಿಕೆ ಕರಿಯೋಳಂತೆ. ಅವುಳು ಬಾಗಲಲ್ಲಿ ಇಲ್ಲ ಅಂದ್ರೆ ವಳಗ್ಯಾರೊ ನಿನ್ನಂಥೋನು ಅವುನೆ ಅಂತ."

"ಮಿಸ್ಟರ ಉಗ್ರಿ, ನನ್ನನ್ನ ವಿಟಪುರುಷ ಅಂತ ತಿಳಕೊಬ್ಯಾಡ. ಅದೊಂದು ವಿಷಯದಲ್ಲಿ ನಾನು ನಮ್ಮ ದ್ವಡಪ್ಪನಂಗೆ ಏಕಪತ್ನಿ ವ್ರತಸ್ಥ."

"ಮದಿವಿಗಿಂತ ಮದ್ಲು ನೀನ್ಯಂಗಿದ್ದೆ ಅಂತ ನನಿಗೂ ಗೊತ್ತು ಕಂಡ್ಯ" ಎಂದಳು ಜುಮ್ಮಿ.

"ಅದು ಕಾಮನ್ನು ಕಣಕ್ಕ. ಆದ್ರೆ ಮದುವೆ ಆದಮ್ಯಾಲೆ ಅಂಗಿರಕ್ಯಾಗದಿಲ್ಲ."

"ಕೆಲವು ಹೀನ ಸುಳಿ ಜನ ಮದಿವಾದ್ರು ಅಷ್ಟೆಯಾ, ಆಗದೆಯಿದ್ರೂ ಅಷ್ಟೇಯಾ. ಅಂಥೊರಿಂದ್ಲೆ ಅಂತೆ ಹಂಪೆ ಹಾಳಾದದ್ದು" ಎಂದ ಉಗ್ರಿ.

"ಅಲ್ಲಪ್ಪಾ, ಹಾಳುಬಿದ್ದ ಹಂಪೆಯ ಮದಲಿದ್ದಂಗೆ ಮಾಡಬೇಕು ಅಂದ್ರೇ ಸೂಳೆಗಾರಿಕೆ ಸುರುಮಾಡಬೇಕು, ಅವುರ ಮ್ಯಾಲೆ ಸುಂಕ ಹಾಕಬೇಕು, ಪೊಲೀಸ್‌ನೋರಿಗೆ ಸಂಬಳ ಕೊಡಬೇಕು."

"ಥೂ ನಿನ್ನ, ಹಂಪೆ ವೈಭವ ತಿರಗ ನೋಡಬೇಕು ಅಂದ್ರೆ ನೀನು ತಿಳಕಂಡಂಗೆ ಅಲ್ಲ ಕಣೊ. ಆ ಕಾಲ ಯಂಗಿತ್ತೂ ಅನ್ನದ ನ್ಯನಿಸಿಗಳಂಗೆ ಒಂದು ಜಾತ್ರೆ ಮಾಡಿದ್ರೆ ಸಾಕು. ಎಂ.ಪಿ. ಪ್ರಕಾಶ್ ಮಾಡತಿದ್ರಲ್ಲ ಅಂಗೆ."

"ಎಂ.ಪಿ. ಪ್ರಕಾಸನೂ ಜಾತ್ರೆ ಮಾಡತಿದ್ರೆ?" ಎಂದಳು ಜುಮ್ಮಿ.

"ಸುರುಮಾಡಿದ್ದೆ ಅವುರು ಕಣೇ. ಅವುರು ನವೆಂಬರ್ ತಿಂಗಳಲ್ಲಿ ಮೂರು ದಿನದ ಮಟ್ಟಿಗೆ ನಾಟಕ, ಸಂಗೀತ, ಡ್ಯಾನ್ಸು ಹಿಂಗೆ ಜನ ನೋಡೋ ತರದ ಕಾರ್ಯಕ್ರಮ ಮಾಡಸೋರು. ನವುಲಾಡ್ತು ಅಂತ ಕ್ಯಂಬೂತ ಪುಕ್ಕ ತರಕತ್ತು ಅನ್ನಂಗೆ ರೆಡ್ಡಿಗಳು ಮಾಡ್ತ ಕುಂತವುರೆ. ಅದರಲ್ಲೂ ಕರುಣಾಕರ ರೆಡ್ಡಿ ನಾನೇ ಕೃಷ್ಣದೇವರಾಯನಂಗೆ ಅಂತ ತಿಳಕಂಡಿದ್ದನಂತೆ."

"ಒಂಥರ ನಿಜ ಕಣೊ ಉಗ್ರಿ. ಅಕ್ಷುವಲಿ ಈ ಟೈಮಲ್ಲಿ ಕೃಷ್ಣದೇವರಾಯನಂಗೆ ಮ್ಯರಿಬೇಕಾಗಿದ್ದೋನು ಎಡೂರಪ್ಪ. ಆದ್ರೆ ಇವತ್ತು ಎಡೂರಪ್ಪ ರೆಡ್ಡಿಗಳಿಗೆ ಸೋತು ಸುಣ್ಣಾಗಿ ತಲೆ ಬಗ್ಗಿಸಿಕೊಂಡು ನಿಂತವುನೆ. ಅದೇ ರೆಡ್ಡಿಗಳು ಮ್ಯರೀತ ಅವುರೆ, ಇದಕೇನೇಳ್ತಿ."

"ಈ ಪ್ಯಾದೆ ಮಕ್ಕಳು ಹಂಪೆ ಉತ್ಸವ ಮಾಡ್ಲಿ, ನಾವೇನು ಬ್ಯಾಡ ಅನ್ನಲ್ಲ, ಆದ್ರೆ ಪ್ರವಾಹಕ್ಕೆ ಸಿಕ್ಕಿದ ಜನಗಳ ಪಾಡೇನು ಅನ್ನದ ನೋಡದ ಬ್ಯಾಡವೇನ್ಲ? ಇಷ್ಟೇ ದಿನದಲ್ಲಿ ಹಂಪೆ ಉತ್ಸವ ನ್ಯಡಿಬೇಕು ಅಂತ ಕ್ಯಲಸ ಮಾಡ್ತರಲ್ಲ ಅಂಗೆ ಇಷ್ಟೇ ದಿನದಲ್ಲಿ ಜನಗಳಿಗೆ ಮನಿಯಾಗಬೇಕು, ರಸ್ತೆಯಾಗಬೇಕು ಅಂತ ಮಾಡಕ್ಕೇನಾಗ್ಯದೆ?"

"ಪಾಪ, ಅವುರ ಸುದ್ದಿನೆ ತಿಳಿಲಿಲ್ಲ" ಎಂದು ಕಾಳಮಾವ ಲೊಚಗರಿದ.

"ಅವುರದಷ್ಟೇ ದ್ವಡಪ್ಪ, ಅಧಿಕಾರಿಗಳಿಗೆ ಹೇಳ್ತವುರೆ, ಅವುರದು ಮಾಡಿದಂಗೆ ಇವುರು ಮಾಡಿಸಿಗಂಡಂಗೆ. ಇನ್ನ ಆ ಕಡೆ ಯಾರು ತಲೆ ಹಾಕದಿಲ್ಲ, ಇನ್ನ ಏನಿದ್ರು ಉತ್ಸವ, ಜಾತ್ರೆ ಹುಡಿಕ್ಯಂಡು ತಿರುಗ್ತರೆ" ಎಂದ ವಾಟಿಸ್ಸೆ.

"ನಿಜ ಕಣೊ ವಾಟಿಸ್ಸೆ. ಈ ಬಿಜೆಪಿಗಳು ಉತ್ಸವ, ಜಾತ್ರೆ, ಭೋಜನದ ಜನ ಅಂತವ್ನೆ ಮಾಡಿಕಂಡು ಹೋಯ್ತಾ ಅವುರೆ. ಇಲ್ಲ ಅಂದ್ರೆ ಪ್ರವಾಹದ ಜಾಗದಲ್ಲೇ ಅದ್ದೂರಿ ಜಾತ್ರೆ ಮಾಡತಿರಲಿಲ್ಲ."

"ಉತ್ಸವಕ್ಕೆ ಅವುರಮ್ಮನ್ನ ಕರಸಿದ್ರಂತೆ."

"ಅವುರಮ್ಯಾರ್ಲ?"

"ಸುಸುಮ ಸ್ವರಾಜ್ ಕಣೆ. ರೆಡ್ಡಿಗಳು ಕರದೇಟಿಗೆ ಓಡಿಬಂದವುಳೆ. ಎಡೂರಪ್ಪನಿಗಂತೂ ಅವುಳ ಕಂಡ್ರಾಗದಿಲ್ಲ."

"ಯಾಕೇ?"

"ಅವುಳೆ ಅಂತೆ ಈ ರೆಡ್ಡಿಗಳಿಗೆ ರಕ್ಷಣೆ ಕೊಡೋಳು."

"ಅವುಳದಂಗಿರ್ಲಿ. ಇನ್ನು ಮ್ಯಾಲಾದ್ರು ಕರ್ನಾಟಕ ಬೆಳಕಾಗಂಗೆ ಕಾಣ್ತದೆ?"

"ಅದ್ಯಂಗೆ?"

"ಈಶ್ವರಪ್ಪನಿಂದ ಯಲಕ್ಟ್ರಿಕ್ ಖಾತೆ ಕಿತಗಂಡು ಪಾರ್ಟಿ ಅಧ್ಯಕ್ಷನ್ನ ಮಾಡಿದರಂತೆ."


"ಓ ಅಂಗರೆ ಬಿಜೆಪಿ ಕುರಿಕಾಯಕ್ಕೆ ಈಶ್ವರಪ್ಪನ್ನ ನೇಮಿಸಿದ್ರು ಅನ್ನು."

"ಊ, ಊದದ ಯಸ್ತು ಬಡಿಯದ ತಗಂಡ ಅನ್ನಂಗೆ ಆ ಹಲ್ಲುಗಿಸಗ ಸದಾನಂದಗೌಡನ ಬದ್ಲಿಗೆ ಯಡವಟ್ಟರಾಯ ಈಶ್ವರಪ್ಪ ಬಂದ."


"ಅಂಗರೆ ಸಿದ್ದರಾಮಯ್ಯನಿಗೂ, ಅವುನಿಗೂ ಸರಿಯಾಗೇ ಬೀಳ್ತದೆ."

"ಬೀಳದೇನು, ಒಂಥರಾ ಟಗರು ಗುದ್ದಾಡಿದಂಗಾಯ್ತದೆ ಕಣೊ ಉಗ್ರಿ. ಕುರುಬ್ರು ಯಾರ ಕಡಿಯೋಯ್ತರೆ ನೋಡಬೇಕು."

"ಕುರುಬ್ರು ಸಿದರಾಮಯ್ಯನ ಕಡಿಕೆ ಅಲವೆ ಇರದು. ಈ ಉಡುಪಿ ಗಲಾಮ ಅವರು ಲ್ಯಕ್ಕಕ್ಕೇ ಇಟ್ಟಿಲ್ಲ."



ರಶ್ದಿ ಮತ್ತು ಜೆಫ್ರಿ



ಬರೆಯುವುದೆಂದರೆ ಹುಡುಗಾಟ ಎಂದು ತಿಳಿದಿದ್ದ ರಶ್ದಿ ಕಳೆದ ನಾಲ್ಕು ವರ್ಷದಿಂದ ತೂಗುವ ಕತ್ತಿಯ ಕೆಳಗಿರುವುದು ನಿಮಗೆ ಗೊತ್ತು. 'ಸೇಟನಿಕ್ ವರ್ಸಸ್' ಎಂಬ ಪುಸ್ತಕ ಬರೆದು ಇರಾನಿನ ಕೊಮೇನಿಯಿಂದ ಮರಣದಂಡನೆಯ ಆಜ್ಞೆಗೆ ಗುರಿಯಾಗಿರುವ ರಶ್ದಿ ಅಜ್ಞಾತವಾಸದಲ್ಲಿದ್ದಾನೆ; ಸಾವು, ಭಯ, ಆತಂಕ ಹೇಗಿರುತ್ತವೆಂದು ಅರಿತಿರುವ ಈತ ಗೆಳತಿಯಿಂದ ದೂರನಾದ, ಗೆಳೆಯರು ಬೇರ್ಪಟ್ಟರು. ಆದರೆ ಇಂಗ್ಲಿಷ್ ಸಾಹಿತಿಗಳು ಮತ್ತು ಬುದ್ಧಿಜೀವಿಗಳು ಇವನ ಕೈ ಬಿಡಲಿಲ್ಲ. ವಾಕ್ ಸ್ವಾತಂತ್ರ್ಯದ ಪರಂಪರೆಯೇ ಇರುವ ಇಂಗ್ಲೆಂಡಿನಲ್ಲಿ ಒಬ್ಬೊಬ್ಬ ಸಾಹಿತಿ ಒಂದೊಂದು ತರಹ. 'ಸ್ಪೆಕ್ಟೇಟರ್' ಪತ್ರಿಕೆಯ ಅಂಕಣಕಾರನಾಗಿದ್ದ ಜೆಫ್ರಿ ಬರ್ನಾರ್ಡ್ ತನ್ನ ವಿಡಂಬನೆ, ಹಾಸ್ಯವನ್ನೆಲ್ಲ ಒತ್ತಟ್ಟಿಗಿಟ್ಟು "ಇಂಥ ಸ್ಥಿತಿಯಲ್ಲಿ ಒಬ್ಬ ...ಕನಿದ್ದರೂ ನಾನು ನೆರವಾಗುತ್ತಿದ್ದೆ" ಎಂದು ರಶ್ದಿ ಅವಿತುಕೊಂಡಿದ್ದಲ್ಲಿಗೆ ... ಸಾಗಿಸುವ ಜವಾಬ್ದಾರಿ ಹೊತ್ತುಕೊಂಡ. ಆದರೆ ಜೆಫ್ರಿಯ ಹತ್ತಿಕ್ಕಲಾರದ ...ರ ವಿಚಿತ್ರ. ರಶ್ದಿಯ ಜೀವ ಉಳಿಯುತ್ತದೋ ಹೋಗುತ್ತದೋ ಎಂಬ ...ಬೆಟ್ ಕಟ್ಟಿದ; ತಮಾಷೆ ಮಾಡಿದ. ಹಾಗೆಯೇ "ಈ ಇಸ್ಲಾಂ ಧರ್ಮ ಮರಳುಗಾಡಿನ ಹಾಗೆ-ತುಂಬ ಡಲ್" ಎಂದು ಕಿಚಾಯಿಸಿದ.




...ಸುಕಿಭಾವುಕತೆಯನ್ನು ಇಷ್ಟಪಡದ ಇಂಗ್ಲಿಷ್ ವಿಡಂಬನಕಾರನೊಬ್ಬ ...ಂಥವರಿಗೆ ಕೂಡ ಎಂಥ ನಿಲುವು ತೆಗೆದುಕೊಳ್ಳುತ್ತಾರೆ-ಎಂಬುದು ...ಹಲಕರ.

ಜಪಾನಿನ ಕೈಗಾರಿಕೆಯ 'ಗುರು'

ಜಪಾನಿ ವಸ್ತುಗಳೆಂದರೆ ಕಾಸಿಗೊಂದು ಕೊಸರಿಗೊಂದು ಸಿಗುತ್ತಿದ್ದು ಗುಣಮಟ್ಟ ಅಷ್ಟೇ ಕೆಟ್ಟದಾಗಿದ್ದ ಕಾಲವೊಂದಿತ್ತು. ಅದು ಈಗ್ಗೆ ಸುಮಾರು ನಾಲ್ಕು ದಶಕಗಳ ಹಿಂದೆ; ಜಪಾನ್ ಅಂದರೆ ಚಿಲ್ಲರೆ ದೇಶ, ಕಚಡಾ ಮಾಲುಗಳ ತವರೂರು ಎಂದಾಗಿತ್ತು. ಆ ಕೆಟ್ಟ ಹೆಸರನ್ನು ತೊಡೆದು ಹಾಕಿದವನು ಎಡ್ವರ್ಡ್ಸ್ ಡೆಮಿಂಗ್ ಎಂಬ ಅಮೆರಿಕನ್. ಮೊನ್ನೆ ತನ್ನ 93ನೇ ವಯಸ್ಸಿನಲ್ಲಿ ತೀರಿಕೊಂಡ ಡೆಮಿಂಗ್ 1950ರಲ್ಲಿ ಜಪಾನಿನ 'ಗುಣಮಟ್ಟ ರಕ್ಷಕ'ನಾಗಿ ನೇಮಕಗೊಂಡ. ಉತ್ತಮ ವಸ್ತು ತಯಾರಿಸುವುದು ನಿಜಕ್ಕೂ ಲಾಭದಾಯಕ ಎಂಬುದು ಜಪಾನೀಯರಿಗೆ ಗೊತ್ತಾದದ್ದು ಈ ಡೆಮಿಂಗ್‌ನ ಪ್ರಚಾರದ ಮೂಲಕ. ಉತ್ಪಾದನೆ ಮಾತ್ರ ಸಾಲದು; ಶ್ರೇಷ್ಠ ವಸ್ತುಗಳನ್ನು ಉತ್ಪಾದಿಸಿದರೆ ವಿತರಣೆ, ವ್ಯಾಪಾರ, ಗ್ರಾಹಕರ ನಿಷ್ಠೆ-ಎಲ್ಲ ಸಿಗುತ್ತದೆ. ತಮಗೆ ಗುಣಮಟ್ಟದ ಮೂಲಕ ಅಂತರರಾಷ್ಟ್ರೀಯ ಗಮನದೊಂದಿಗೇ ಮಾರುಕಟ್ಟೆಯನ್ನೂ ದೊರಕಿಸಿಕೊಟ್ಟ ಡೆಮಿಂಗ್‌ನನ್ನು ಜಪಾನೀಯರು ಆರಾಧಿಸುತ್ತಾರೆ.


ಡೆಮಿಂಗ್ ತರಹದವರು ಭಾರತದಲ್ಲಿ ಬೆಳೆಯಬೇಕಾಗಿದೆ. ಇಲ್ಲಿ ವಂಚನೆಯ ಮೂಲಕ ಮಾರುಕಟ್ಟೆಯನ್ನು ಕಳೆದುಕೊಳ್ಳುವುದು ಸಾಮಾನ್ಯವಾಗಿದೆ. ಮೈಸೂರು ಗಂಧದ ಸಾಬೂನಿನ ಬಗ್ಗೆ ಈಚೆಗೆ ಒಂದು ಒಳ್ಳೆಯ ಮಾತು ಕೇಳಿದ್ದೀರಾ? ಸರ್ಕಾರಿ ಸ್ವಾಮ್ಯದ ಚರ್ಮದ ವಸ್ತುಗಳ ಬಗ್ಗೆ?



ಮೂರ್ಖತನಕ್ಕೆ ಪೇಟೆಂಟ್ ಇಲ್ಲ

ಆಹಾ ಏನೆಂಬೆನು ಏನೆಂಬೆನು ಈ ಯಿಚಿತ್ರಕೆ. ಯಿಚಿತ್ರ ಯಾವುದೆಂದರೆ... ಆ ಕರುಣಾಳು ಯೇಸುವೇ ಶತ್ರುತ್ವ ಸಾರಿದನೋ, ದಯಾಮಯಿ ಮಾತೆ ಮೇರಿಯೇ ಅಸಮಾಧಾನದಿಂದ ಮುಖ ತಿರುವಿದಳೋ, ಪ್ರಣಯ ದೇವತೆ ಕ್ಯುಪಿಡ್‌ಳ ಒಳಸಂಚೋ ಅಥವಾ ಇನ್ನಾವುದಾದರೂ ಅಗೋಚರ ಶಕ್ತಿ ತನ್ನ ಇರುವಿನ ಪ್ರದರ್ಶನಕ್ಕೆ ನಿಂತಿತೋ ಒಂದೂ ತಿಳಿಯುತ್ತಿಲ್ಲ. ಹೊರಗೆ ಮೈಕೊರೆಯುವ ಚಳಿ ಇದ್ದರೂ ಹೀಟಿಂಗ್ ಸರ್ಕ್ಯೂಟ್ ಇರುವ ಬೆಚ್ಚನೆ ಮನೆ ಸೇರಿ, ಟಿವಿ ಎದುರು ಕುಂತು ಹರ್ಷ

ಅಣಕ



▶ ಎಚ್.ಎಲ್. ಕೇಶವಮೂರ್ತಿ

ಆನಂದಮಯರಾಗುತ್ತಿದ್ದರಲ್ಲ ಜನ. ಆ ಇಂಗ್ಲೆಂಡು. ಇಂಗ್ಲೆಂಡೇ ಆಗಿರಲಿಲ್ಲ ಈಗ. ಸೂರನ್ನೇ ಕಿತ್ತು ಎಸೆಯುವ ರಭಸದ ಶೀತಲ ಮಾರುತ ಮುಚ್ಚಿದ್ದ ಕಿಟಕಿ ಬಾಗಿಲುಗಳಿಗೆ ಸವಾಲೆಸೆಯುತ್ತಿತ್ತು, ವಿಶ್ವದ ಹಿಮವೆಲ್ಲ ಕೇಂದ್ರೀಕೃತವಾಗಿರುವಂತೆ ದಾಳಿ ನಡೆಸುತ್ತಿತ್ತು, ಇವುಗಳ ಆರ್ಭಟಕ್ಕೆ ಬೆದರಿದ ಸೂರ್ಯ ಮೋಡಗಳ ಮರೆಯಲ್ಲಿ ಅವಿತು ಕುಳಿತಂತಿತ್ತು, ರಾತ್ರಿಯಲ್ಲಿರಲಿ ಹಗಲಲ್ಲೆ ಗವ್ ಅನ್ನುವ ಕತ್ತಲು ಕವಿದಂತಿತ್ತು, ಒಟ್ಟಿನಲ್ಲಿ ಆತ್ಮಹತ್ಯೆಗೆ ಅನುವಾದವರು ಹೊರಹೋಗುವ ಸಾಹಸ ಮಾಡಬಹುದಾದ ವಾತಾವರಣ ಮನೆ ಮಾಡಿತ್ತು, ಇಂತಹ ಸಂದರ್ಭದಲ್ಲಿ ವಿದ್ಯುತ್ ಸಂಪರ್ಕ ಕೈಕೊಟ್ಟಿತು. ಅದೂ ಪೂರಾ ಐದು ಹಗಲು ಐದು ರಾತ್ರಿ! ಪ್ರಕೃತಿಯೇ ವಿಧಿಸಿದ್ದ ಗೃಹಬಂಧನದಲ್ಲಿ ಬೆಚ್ಚಗಿರಲು ಹೀಟಿಂಗ್ ಸರ್ಕ್ಯೂಟ್ ಇಲ್ಲ; ಮನರಂಜನೆಗೆ ನೆಚ್ಚಿನ ಟಿವಿ ಹಾಕುವಂತಿಲ್ಲ! ಇಂತಹ ಚಿಂತಾಜನಕ ಸ್ಥಿತಿಯಲ್ಲಿ ಇಂಗ್ಲೆಂಡಿನ ನಾಗರಿಕರು ಏನು ಮಾಡಿದರಪ್ಪ ಅಂದರೆ.....

ಹಿಂದೆ ಇಂತಹದ್ದೇ ದುರಂತಮಯ ಸನ್ನಿವೇಶ ಇಂಗ್ಲೆಂಡ್ ಅನ್ನು ಆವರಿಸಿತ್ತು, ಅದೂ ಒಂದು ಹಗಲು ಒಂದು ರಾತ್ರಿಗೆ. ಆಗ ಅಲ್ಲಿನ ಮಹಾಜನತೆ ಏನು ಮಾಡಿತಪ್ಪ ಅಂದರೆ ಯಾವ ಕಾಯಕದಲ್ಲಿ ಮಗ್ನರಾಗಿರಬಹುದಿತ್ತೋ ಅದರಲ್ಲಿ ಮಗ್ನರಾಗಿದ್ದರು.....

ಇದರ ಫಲಶ್ರುತಿ ಏನಪ್ಪಾ ಎಂದರೆ.... ಈ ಘಟನೆ ಸಂಭವಿಸಿ ನವಮಾಸಗಳು ತುಂಬಿದಾಗ... ಇಂಗ್ಲೆಂಡಿನಲ್ಲಿ ಮುಂದೆ ನೋಡಿದರೆ ತುಂಬಿದ ಬಸುರಿಯರು. ಹಿಂದೆ ನೋಡಿದರೆ ತುಂಬಿದ ಬಸುರಿಯರು. ಎಡಕ್ಕೆ ನೋಡಿದರೆ ತುಂಬಿದ ಬಸುರಿಯರು. ಬಲಕ್ಕೆ ನೋಡಿದರೂ ತುಂಬಿದ ಬಸುರಿಯರು. ಅನಿರೀಕ್ಷಿತವಾಗಿ ಆವಿರ್ಭವಿಸಿದ ಬೇಡಿಕೆಯಿಂದಾಗಿ ಹೆರಿಗೆ ಆಸ್ಪತ್ರೆಗಳು ಈ ಬಾರಿ ಬಸುರಿ ಹೆಂಗಸರನ್ನು ನಿಭಾಯಿಸುವಷ್ಟರಲ್ಲಿ ಅಯೋಮಯ ಆಗಿದ್ದವಂತೆ.....

ಇಪ್ಪತ್ತು ನಾಲ್ಕು ಗಂಟೆಗಳಿಗೇ ಕ್ಯುಪಿಡ್ ದೇವತೆಯ ಆರ್ಭಟ ಹೀಗಿರಬೇಕಾದರೆ ಇನ್ನು ಐದು ಹಗಲು-ಐದು ರಾತ್ರಿ ಎಂದರೆ ಇನ್ನೂರ ನಲವತ್ತು ಗಂಟೆಗಳ ಅವಧಿಯ ಆಕೆಯ ಮಾಯಾಜಾಲ ಎಂತಹದ್ದಿರಬಹುದು. ಒಂಭತ್ತು ತಿಂಗಳ ನಂತರ ಬರಬಹುದಾದ ಬೇಡಿಕೆಗೆ ಹೆರಿಗೆ ಆಸ್ಪತ್ರೆಗಳು ಈಗಿನಿಂದಲೇ ಮುಂಜಾಗ್ರತೆ ಕ್ರಮವನ್ನು ಅನುಸರಿಸುತ್ತಿವೆಯಂತೆ!

ಇಂಗ್ಲೆಂಡಿನ ಈ ರೀತಿ ಅನಾಹುತಕ್ಕೆ ಕಾರಣಕರ್ತಳಾದ ಪ್ರಣಯದೇವತೆ ಕ್ಯುಪಿಡ್ ದಕ್ಷಿಣ ಕೊರಿಯಾದವರ ಮೇಲೆ ಏನು ಕೊರತೆ ಆಯಿತೋ ಏನೋ. ತನ್ನ ಸಮ್ಮೋಹನಾಸ್ತ್ರ ಬೀರಿಲ್ಲವಂತೆ. ದಿನೇದಿನೇ ಅಲ್ಲಿ ಮಕ್ಕಳ ಜನನ ಸಂಖ್ಯೆ ಯದ್ವಾತದ್ವಾ ಇಳಿಯುತ್ತಿರಲಾಗಿ... ಜಾಗತೀಕರಣ ಈ ಯುಗದಲ್ಲಿ ಹೀಗೆ ಆಗುತ್ತಿದೆಯಲ್ಲಾ.... ಹೀಗೇ ಮುಂದುವರೆದರೆ ಭವಿಷ್ಯದಲ್ಲಿ ದುಡಿಯುವ ಕೈಗಳೇ ಇಲ್ಲದೆ ಜಾಗತಿಕ ಮಟ್ಟದಲ್ಲಿ ನಮ್ಮನ್ನು ಹೇಳುವವರು ಕೇಳುವವರು ಯಾರು ಇರೊಲ್ಲವಲ್ಲಾ... ನಮ್ಮ ದುಡಿಮೆಯೆಲ್ಲ ಮುದಿಗೂಬೆಗಳ ಸಾಕಿ ಸಾಲ ಹೋಕೆ ಆಗುತ್ತಿದೆಯಲ್ಲ... ಅಜ್ಜಿ ನೂತದ್ದೆಲ್ಲ ಅಜ್ಜನ ಉಡುದಾರಕ್ಕೇ ಆಗಿಹೋಗುತ್ತಲ್ಲ... ಹಾ ಯೇಸು ಸ್ವಾಮಿಯೇ ನಮಗಾರು ದಿಕ್ಕು ಎಂದು ಮುಂತಾಗಿ ಅಲ್ಲಿನ ಆರೋಗ್ಯ ಸಚಿವರು ವ್ಯಾಕುಲಚಿತ್ತರಾಗಿ ಚಿಂತಿಸುತ್ತಿರುವ ಹೊತ್ತಿನಲ್ಲಿ.... ಧುತ್ತನೆ ಗೋಚರವಾಯಿತಂತೆ.....

ಅದು ಯಾವ ಸಂಗತಿ ಎಂದರೆ ಮಕ್ಕಳ ಜನನ ಸಂಖ್ಯೆ ಕಡಿಮೆಯಾಗಲು ಬೆಳಕೇ ಪ್ರಮುಖ ಕಾರಣ ಎಂಬುದಾಗಿತ್ತು. ಸಿಬ್ಬಂದಿಯನ್ನು ಕುರಿತು ಅಯ್ಯ ಬೇಗ ಮನೆಗೆ ಹೋಗಿ, ಅಮ್ಮ ಬೇಗ ಮನೆ ತಲುಪಿರಿ ಎಂದು ಪರಿಪರಿಯಾಗಿ ಬೇಡಿಕೊಂಡರೂ, ಮನೆಗೆ ಹೋಗಿ ಸಂಗಾತಿ ಜೊತೆ ಸರಸ ಆಡಿರೋ ಎಂದು ಇನ್ನಿಲ್ಲದಂತೆ ಹೇಳಿದರೂ ಅಂತಹ ಮಾತುಗಳಿಗೆ ಕಿವಿಗೊಡದೆ ಕಚೇರೀಲೇ ಬಹಳ ಹೊತ್ತು ಇರುತ್ತಿದ್ದರಂತೆ. ಸಂಗಾತಿ ಜೊತೆ ಸರಸಕ್ಕಿಂತ ಸರ್ಕಾರದ ಕೆಲಸದ ಮೇಲೇ ಹೆಚ್ಚಿನ ಒಲವು ತೋರುತ್ತಿದ್ದರಂತೆ. ಇಂತಹವರನ್ನು ಬೇಗ ಮನೆ ಸೇರಿಸಿ 'ದೇಶದ ಅಭಿವೃದ್ಧಿ' ಕಾರ್ಯದಲ್ಲಿ ಸಂಪೂರ್ಣವಾಗಿ ತೊಡಗಿಸಬೇಕು ಎಂದು ಅವರೇನು ಮಾಡಿದರು ಅಂದರೆ... ತಿಂಗಳಿಗೊಂದು ಸಲ ರಾತ್ರಿ ಏಳೂವರೆಗೆಲ್ಲ ಕಚೇರಿ ದೀಪಗಳನ್ನೆಲ್ಲ ಬಂದ್ ಮಾಡಿಸಿದರು... ಹಿಂಗಾದರೂ ಮನೆ ಅಂತ ಸೇರಲಿ, ದೇಶದ ಅಭಿವೃದ್ಧಿ ಕಾರ್ಯದಲ್ಲಿ ತಲ್ಲೀನರಾಗಲಿ ಅಂತಾವ....

ಎಂಥ ಬಂಗಾರದಂಥ ಅವಕಾಶ. ಅದನ್ನು ಕಳೆದುಕೊಂಡು ಬಿಟ್ಟರಲ್ಲ ಅವರು.... ಅವರು ಅಂದರೆ ದಕ್ಷಿಣ ಕೊರಿಯಾದ ಆರೋಗ್ಯ ಮಂತ್ರಿಗಳು ಎಂದು ನೆನೆದರೆ ವ್ಯಥೆ ಆಗುತ್ತೆ. ಭವ್ಯ ಭಾರತದ ಪುರೋಹಿತರನ್ನು ಸಂಪರ್ಕಿಸಿದ್ದರೆ..... ಪ್ರಣಯ ದೇವತೆ ಕ್ಯುಪಿಡ್ ವಿಗ್ರಹಗಳನ್ನು ಎಲ್ಲೆಲ್ಲಿ ಪ್ರತಿಷ್ಠಾಪಿಸಬೇಕು... ಯಾವ ಯಾವ ರೀತಿಯ ಪೂಜಾಕೈಂಕರ್ಯಗಳನ್ನು ಮಾಡಿ ಪ್ರಣಯ ದೇವತೆಯನ್ನು ಒಲಿಸಿಕೊಳ್ಳಬೇಕು ಎಂಬುದನ್ನೆಲ್ಲ ಸವಿವರವಾಗಿ ವಿಷದೀಕರಿಸುತ್ತಿದ್ದರು... ಇನ್ನೂ ಒಂದು ಇದೆ. ಬೆಳಕೇ ಜನಸಂಖ್ಯಾಭಿವೃದ್ಧಿಯ ಶತ್ರು ಆಗಿದ್ದಲ್ಲಿ... ನಮ್ಮ ವಿದ್ಯುತ್ ಸಚಿವರ ಸಲಹೆ ಪಡೆದಿದ್ದಲ್ಲಿ.. ಅಹಾ.... ಕತ್ತಲ ರಾಜ್ಯವನ್ನೇ ಸ್ಥಾಪಿಸುತ್ತಿದ್ದರು!

ಕಳಕೊಂಡರು ಬಿಡಿ ಬಂಗಾರದಂತಹ ಅವಕಾಶಾನ್ನ....



ಸಂಗೀತ ಚಿಕಿತ್ಸೆ

ಮನುಷ್ಯನಿಗೆ ನೆಮ್ಮದಿ ಇರಬೇಕು.

ಇದು ಸಿಗುವುದು ಹೇಗೆ?

ಸಂಗೀತದಿಂದ!

ಇದು ಕೆಲವರ ಅಭಿಮತ.

ಇದಕ್ಕೆ ಸಮಯ ಬೇಕು. ತಾಳ್ಮೆಬೇಕು. ಸಾಧನೆ ಬೇಕು.

ಉದ್ಯೋಗಸ್ಥ ಮಹಿಳೆಯರಿಗೆ ಇದು ಆಗದ ಮಾತು. ಮನೆಯಲ್ಲಿ ಗೃಹಿಣಿ ಜವಾಬ್ದಾರಿ, ಕಚೇರೀಲಿ ಕೆಲಸ ನಿರ್ವಹಣೆ ಮಾಡೋ ಅವರ ದೇಹ, ಮನಸ್ಸು ಎರಡೂ ಬಳಲಿ ಬೆಂಡಾಗುವುದು ಸಹಜ ಸಂಗತಿಯೇ ಸರಿ.

ಅವರಿಗೆ ಬೇಡವೆ ನೆಮ್ಮದಿ?

ಅವರಿಗೂ ಸಿಗುತ್ತಂತೆ.. ಸಂಗೀತದಿಂದ!

ಬಿಡುವು ಬೇಕಲ್ಲ?

ಮನಸ್ಸಿದ್ದರೆ ಮಹಾದೇವ!

ಅರೇ ಇದೇನು... ಸರ್ಕಾರದ ಕೆಲಸ ದೇವರ ಕೆಲಸ ಅಂತಾರಲ್ಲ ಅದ್ಕೇ ಕೆಲಸದ ವೇಳೇಲೆ ದೇವರನಾಮ ಹಾಡ್ತಾರೇನೋ ಅಂದರೆ ಅದಲ್ಲವಂತೆ. ಮಹಿಳೆಯರು ಎಂದು ಸತತವಾಗಿ ದುಡಿಸಿಕೊಳ್ಳೊಲ್ವಲ್ಲ ಮಧ್ಯಾಹ್ನ ಬಿಡುವು ಅಂತ ಇರುತ್ತಲ್ಲ ಆವಾಗಲಂತೆ. ಇದು ಲಂಚ್ ಬ್ರೇಕ್ ಅಲ್ವ ಅಂದರೆ ಲಂಚ್‌ನ ಬೇಗ ಮುಗಿಸುತ್ತಾರಂತೆ. ಉಳಿದ ಸಮಯ ಇರುತ್ತಲ್ಲ ಬೇರೆ ಮಹಿಳೆಯರ ತರಹ ಚಾಡಿ ಮಾತಿನ, ಹೊಲಸುಮಾತಿನ ಮನರಂಜನೆ ಪಡಿಯೋಲ್ವಂತೆ. ಸುಸಂಸ್ಕೃತ ಮಹಿಳೆಯರಲ್ವಾ ಅವರು. ಅದೇ ಉಳಿದ ಸಮಯಾನ prayer break ಆಗಿ ಬಳಸುತ್ತಾರಂತೆ!

ಇದು ಹೆಂಗಪ್ಪಾ ಅಂದರೆ... ವಿಕಾಸಸೌಧ ಅಂತ ಇದೆಯಲ್ಲ ಅದರ ಕೆಳಮಹಡಿ ಇದೆಯಲ್ಲ ಅಲ್ಲಿ ಕೆಲವು ಮಹಿಳಾ ಸಿಬ್ಬಂದಿ ಜಮಾಯಿಸ್ತಾರಂತೆ. ಇವರು ಹಿಂಗೆ ಸೇರ್ತಾರೆ ಅಂತ ಇತರರಿಗೆ ತಿಳಿಯೋದು ಹೆಂಗೆ ಅಂದರೆ... ಅವರು ದಿನಾ ಬಸ್ಸಲ್ಲಿ ಹೋಗಿಬರ್ತಾರಲ್ಲ ಆವಾಗ ಕಿವಿಯಿಂದ ಕಿವಿಗೆ ಅದು ಹರಡುತ್ತಂತೆ. ಆಯ್ತು ಅಲ್ಲಿ ಸೇರಿ ಏನು ಮಾಡ್ತಾರಪ್ಪ ಅಂದರೆ.. ಸೌಂದರ್ಯ ಲಹರಿ, ಲಕ್ಷ್ಮಿ ಸಹಸ್ರನಾಮ ಇಂತಹವನ್ನು ಇಂಪಾಗಿ ಹಾಡ್ತಾರಂತೆ. ಭಜನೇನೂ ಮಾಡ್ತಾರಂತೆ. ಇದರಿಂದ ಅವರೆಲ್ಲ ನವನವೋನ್ಮೇಶ ಶಾಲಿನಿಗಳಾಗ್ತಾರಂತೆ, ಉತ್ಸಾಹದ ಚಿಲುಮೇನೆ ಆಗ್ತಾರಂತೆ. ಉಳಿದ ಅರ್ಧ ದಿವಸದ ಕೆಲಸಾನ ಮಾಡೋಕೆ ಸಂಭ್ರಮೋತ್ಸಾಹ ಉಕ್ಕುಕ್ಕಿ ಬರುತ್ತಂತೆ!

ಯಾರು ಬೇಕಾದರೂ ಈ ಸಂಗೀತ ಚಿಕಿತ್ಸೆಯಲ್ಲಿ ಭಾಗವಹಿಸಬಹುದಾ ಅಂದರೆ ಭಾಗವಹಿಸಬಹುದು, ಹೆಂಗಸಾಗಿದ್ದರೆ ಸಾಕು. ಸಂಸ ತ ಪದಗಳ ಉಚ್ಚಾರಣೆಗೆ ನಾಲಿಗೆ ಸಲೀಸಾಗಿ ಹೊರಳುವಂತಿದ್ದು ಸಂಗೀತ ಜ್ಞಾನ ಇದ್ದರೆ ಉತ್ತಮ ಅಂತೆ!

ಇದನ್ನು ಪತ್ರಿಕೆಯಲ್ಲಿ ಓದಿದಾಗ ಸಂಸ್ಕಾರ ಚಿತ್ರದಲ್ಲಿ ನಾರಾಣಪ್ಪ ಪ್ರಾಣೇಶಾಚಾರ್ಯರಿಗೆ ಹೇಳೋ ಮಾತಿದೆಯಲ್ಲ... ಅದೇ ಇಲ್ಲಿನ ಯುವಕರು ಕೆಟ್ಟಿರೋದು ನನ್ನಿಂದಲ್ಲ ನಿಮ್ಮಿಂದ. ನಿಮ್ಮ ಸಂಸ ತ ಶ್ಲೋಕ ಕೇಳಿಕೇಳಿ ಈ ಹುಡುಗರು ಮಹಿಳೆಯ ದೇಹಾನ ಹೇಗೇಗೋ ಕಲ್ಪಿಸಿಕೊಂಡು ಹಾಳಾಗಿವೆ ಅನ್ನೋ ಅರ್ಥದ ಮಾತು ಹೇಳ್ತಾನಲ್ಲ, ಅದು ನೆನಪಾಯಿತು. ಇವರು ಸಂಗೀತ ಅನ್ನೊ ಹೆಸರಲ್ಲಿ ಬರೀ ಹೆಂಗಸರ ದೇಹದ ವರ್ಣನೇನ ಮಾಡ್ತಾ ಇದ್ದರೆ.. ಗೋಡೆಗೂ ಕಿವಿ ಇರುತ್ತವೆ ಅಲ್ವಾ... ಅದನ್ನ ಕೇಳ್ತಾ ನಿಂತೋರು... ಏನೂ ಆಗಲ್ಲ ಬಿಡ್ರಿ ಅಂದ್ರಾ. ಅದೂ ನಿಜಾನೆ. ಅವೆಲ್ಲ ಇರೋದು ಸಂಸ ತದಲ್ಲಿ ಕನ್ನಡದಲ್ಲಲ್ವ ಅರ್ಥವಾಗೋಕ್ಕೇ.... ●

'ರತ್ನ'ಕ್ಕೆ ಸಮರ್ಥನೆಯೇ ಪಾರದರ್ಶಕತೆ

ಜನವರಿ 27ರ ಸಂಚಿಕೆಯಲ್ಲಿ ಪ್ರಕಟವಾದ 'ವೀರೇಂದ್ರ ಹೆಗ್ಗಡೆ ಅದೆಂತಹ ಕರ್ನಾಟಕ ರತ್ನ' ಲೇಖನ ಓದಿದೆವು.

ಬೆಳ್ತಂಗಡಿ ತಾಲ್ಲೂಕಿನಲ್ಲಿ ನವೆಂಬರ್ 24ರಂದು ತಾಲ್ಲೂಕು ಮಟ್ಟದ 'ತುಳುವರ ಪರ್ಬ' ನಡೆಯಿತು. 18-20 ಸಾವಿರ ಜನಸಾಮಾನ್ಯರು ಸೇರಿ ನಿರೀಕ್ಷೆಗೂ ಮೀರಿ ಯಶಸ್ವಿಯಾದ ಈ ಚಾರಿತ್ರಿಕ ಹಬ್ಬ ತಾಲ್ಲೂಕಿನ ಎಲ್ಲಾ ಜನಪ್ರತಿನಿಧಿಗಳು, ರಾಜಕೀಯ-ಸಾಮಾಜಿಕ-ಜಾತಿ ಸಂಘಟನೆಗಳು, ಅದರಲ್ಲೂ ದಲಿತ-ಆದಿವಾಸಿ ಸಂಘಟನೆಗಳ ಸಾಮೂಹಿಕ ನಾಯಕತ್ವದಲ್ಲಿ ನಡೆಯಿತು. ವೀರೇಂದ್ರ ಹೆಗ್ಗಡೆಯವರ 'ಆಶೀರ್ವಾದ' 'ಪ್ರಸಾದ' ಇಲ್ಲದೆ, ಮಾತ್ರವಲ್ಲ ಅವರ ಪರೋಕ್ಷ ವಿರೋಧದ ನಡುವೆಯೂ (ವಿಶ್ವ ತುಳು ಸಮ್ಮೇಳನ ಅವರ ನೇತೃತ್ವದಲ್ಲಿ ನಡೆಯುವಾಗ ಈ ಪರ್ಬ ಯಾಕೆ ಎನ್ನುವ ಕಾರಣಕ್ಕಾಗಿ) ಇದು ಯಶಸ್ವಿಯಾದದ್ದು ಹೇಗೆ? ಕಾರಣ ಸ್ಪಷ್ಟ. ಮೂಲ ತುಳು ನಿವಾಸಿಗಳ ಸ್ವಾಭಿಮಾನದ ಜಾಗೃತಿಯೊಂದಿಗೆ ಈ ತಾಲ್ಲೂಕಿನ ಜನತೆಗೆ ಹೆಗ್ಗಡೆಯವರ ದಾನ ಧರ್ಮ ಗ್ರಾಮಾಭಿವೃದ್ಧಿ ಯೋಜನೆ ಎಂದರೆ ಏನು ಎಂದೂ ಅರ್ಥವಾಗಿದೆ!

ಈ ದೇವಸ್ಥಾನಕ್ಕೆ ಬರುವ 250-350 ಕೋಟಿ ರೂಪಾಯಿ ಆದಾಯದ ನಿಯಂತ್ರಣ ಬಂದು, ಅದು ಬಡಜನರ ಶಿಕ್ಷಣಕ್ಕೆ, ಅಭಿವೃದ್ಧಿಗೆ ವಿನಿಯೋಗವಾಗಬೇಕು. ಹೆಗ್ಗಡೆಯವರು ತಮ್ಮ ಕುಟುಂಬದ, ದೇವಸ್ಥಾನದ, ಸಂಸ್ಥೆಗಳ ಆದಾಯವನ್ನು ಬಹಿರಂಗಪಡಿಸಬೇಕು. ನ್ಯಾಯಾಧೀಶರ ಸ್ಥಾನದಲ್ಲಿರುವ ಅವರು ಪಾರದರ್ಶಕವಾಗಿರಬೇಕು. 1,50,000 ಸ್ವಸಹಾಯ ಸಂಘ ಮಾಡಿ 1500 ಕೋಟಿ ಬ್ಯಾಂಕ್ ಸಾಲ ಪಡೆದು, ಸಂಘಗಳಿಗೆ ಹೆಚ್ಚಿನ ಬಡ್ಡಿಗೆ ಕೊಡುವುದು ಎನ್‌ಜಿಓ ಕೆಲಸವೇ ಅಲ್ಲ, ಅದು ಬ್ಯಾಂಕಿಂಗ್ ಚಟುವಟಿಕೆ.

ಸರ್ಕಾರ ಸರ್ವಪಕ್ಷಗಳ ಶಾಸಕರಿರುವ ಸದನ ಸಮಿತಿ ರಚಿಸಿ, ಧರ್ಮಸ್ಥಳದ ಎಲ್ಲಾ 'ಸೇವಾ' ಕಾರ್ಯಗಳ, ವ್ಯವಹಾರಗಳ ಅಧ್ಯಯನ ಮಾಡಿಸಿ, ಈ ವರದಿಯನ್ನು ಸದನದಲ್ಲಿ ಮಂಡಿಸಬೇಕು. ಇದನ್ನು ಮಾಡುವಂತೆ ಹೆಗ್ಗಡೆಯವರೇ ಸರ್ಕಾರಕ್ಕೆ ಸೂಚಿಸಬೇಕು. ಕರ್ನಾಟಕ ರತ್ನ ಪ್ರಶಸ್ತಿ ನೀಡಿರುವುದಕ್ಕೆ ಸಮರ್ಥನೆ ಸಿಗುವುದೇ ಆಗ.

'ಮಾಹಿತಿ ಹಕ್ಕು ಕಾಯ್ದೆ' ಪ್ರಕಾರ ಈ ಸಂಬಂಧವಾಗಿ ಮಾಹಿತಿಯನ್ನು ನಾವು ಕಲೆ ಹಾಕಿದ್ದೇವೆ, ಹಾಕುತ್ತಿದ್ದೇವೆ. ಸದನ ಸಮಿತಿಗೆ ಇದನ್ನು ಕೊಡಲು ಸಿದ್ಧರಿದ್ದೇವೆ.

-ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ. ದ.ಕ.

ಹೊಗಳಿಕೆ ತೆಗಳಿಕೆ

ಈ ವಾರದ 'ಲಂಕೇಶ್'ನಲ್ಲಿ ಸದಾಶಿವ ಶೆಣೈರವರು ಅಶ್ವಥ್‌ರವರಿಗೆ ಅರ್ಪಿಸಿದ ನುಡಿನಮನ ಆ ಹಿರಿಯ ಕಲಾವಿದರಿಗೆ ಸಮರ್ಪಿಸಿದ ಶ್ರೇಷ್ಠ ಅಕ್ಷರನಮನ ಎಂದರೆ ತಪ್ಪಾಗಲಾರದು. ಅಶ್ವಥ್ ಕುರಿತು ನಮ್ಮ ಮನಸ್ಸಿನಲ್ಲಿ ಮೂಡಿದ್ದ ಪ್ರಶ್ನೆಗಳಿಗೆ ಶೆಣೈರವರು ಉತ್ತರ ನೀಡಿದ್ದಾರೆ. ನಮ್ಮ ಮಾಧ್ಯಮಗಳು ಅಶ್ವಥ್‌ರನ್ನು ಬರೀ ಚಾಮಯ್ಯ ಮೇಷ್ಟ್ರಿಗೆ ಸೀಮಿತಗೊಳಿಸಿದ್ದು ನಿಜಕ್ಕೂ ವಿಷಾದದ ಸಂಗತಿ. ವಾಸ್ತವವಾಗಿ 'ನಾಗರಹಾವು' ತೆರೆಗೆ ಬರುವ ಮುನ್ನವೇ ಅಶ್ವಥ್ ಹಲವಾರು ಚಿತ್ರಗಳಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದರು. ನನಗೆ ಅಶ್ವಥ್ ಎಂದರೆ ಈಗಲೂ ನೆನಪಾಗುವುದು 'ಕಸ್ತೂರಿ ನಿವಾಸ'ದ ರಾಮಯ್ಯ, 'ಸತ್ಯ ಹರಿಶ್ಚಂದ್ರ'ದ ವಸಿಷ್ಠ 'ಎರಡು ರೇಖೆಗಳು' ಚಿತ್ರದ ಸೇಡಿನ ತಂದೆ...

ಇದೆಲ್ಲಕ್ಕಿಂತ ಹೆಚ್ಚಾಗಿ 'ಬಂಗಾರದ ಪಂಜರ'ದ ಬುಂಜೇಗೌಡನ ಪಾತ್ರ ಮರೆಯಲಾದೀತೆ? ಈ ಚಿತ್ರದಲ್ಲಿ ರಾಜಕುಮಾರ್ ಮತ್ತು ಅಶ್ವಥ್ ಕುರುಬರಾಗಿ ಒಬ್ಬರಿಗೊಬ್ಬರು ಪೈಪೋಟಿ ನೀಡುವಂತೆ ಅಭಿನಯಿಸಿದ್ದಾರೆ. ಆಗ ತೆಲುಗಿನಿಂದ ಡಬ್ ಆಗುತ್ತಿದ್ದ ಪೌರಾಣಿಕ ಚಿತ್ರಗಳಲ್ಲಿ ಕಂಠದಾನ ಕಲಾವಿದರಾಗಿಯೂ ಅಶ್ವಥ್ ತಮ್ಮ ಪ್ರತಿಭೆಯನ್ನು ಧಾರೆ ಎರೆದಿದ್ದಾರೆ. ವಿಶೇಷವಾಗಿ ಎನ್.ಟಿ.ರಾಮರಾವ್‌ರವರ ಪಾತ್ರಗಳಿಗೆ ಧ್ವನಿ ನೀಡಿ ಜೀವ ತುಂಬುತ್ತಿದ್ದರು.

ಇಂತಹ ಮಹಾನ್ ಕಲಾವಿದನನ್ನು ಕೇವಲ ಚಾಮಯ್ಯ ಪಾತ್ರಕ್ಕೆ ಸೀಮಿತಗೊಳಿಸಿದ ಮಾಧ್ಯಮಗಳ ದಡ್ಡತನಕ್ಕೆ ಏನೆನ್ನುವುದು? ಶೆಣೈರವರ ಲೇಖನ ಅಶ್ವಥ್‌ರ ಚಿತ್ರಜೀವನಕ್ಕೆ ನ್ಯಾಯ ಒದಗಿಸಿದೆ. ತೀರಾ ವಿಶಿಷ್ಟವಾದ ಲೇಖನವಿದು.

ಜಾರ್ಜ್ ಫರ್ನಾಂಡಿಸರ ಬಗ್ಗೆ ಅಪಾರ ಅಭಿಮಾನ ಇರಿಸಿಕೊಂಡಿದ್ದ ನನಗೆ 'ಲಂಕೇಶ್'ದಲ್ಲಿನ ಲೇಖನ ಓದಿದ ಮೇಲೆ ಅಭಿಮಾನ ಜರ್ರನೆ ಇಳಿದುಹೋಯಿತು. ಸಮಾಜವಾದಿಯಾಗಿದ್ದ ಪ್ರಾಮಾಣಿಕರೆನಿಸಿದ್ದ ಅವರೂ ಇತರ ರಾಜಕಾರಣಿಗಳಂತೆ ಕೋಟಿ ಕೋಟಿ ಲೂಟಿ ಮಾಡಿದರೆ? ನಿಜಕ್ಕೂ ಇದೊಂದು ದುರಂತವೇ ಸರಿ.

-ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ


ಫೆಬ್ರವರಿ 3ರ ಸಂಚಿಕೆಯಲ್ಲಿ 'ಕಂಡ ಹಾಗೆ'ಯಲ್ಲಿ ಗೌರಿ ಲಂಕೇಶ್‌ರವರ ಮನದಾಳದ ಮಾತುಗಳನ್ನು ಓದಿ ಕಣ್ಣೀರು ಬಂದಿತು. ನಮ್ಮ 'ಮಾಸ್ತರು' ನಮ್ಮನ್ನು ಅಗಲಿ ಹತ್ತು ವರ್ಷಗಳಾದವು. ಚೈತನ್ಯದ ಚಿಲುಮೆಯಾದ ನಮ್ಮ ಗುರುಗಳಾದ ಲಂಕೇಶ್ ಅವರಿಗೆ ಎಂದಿಗೂ ಸಾವಿಲ್ಲ, ಅವರು ನಮ್ಮ ಹೃದಯದಾಳದಲ್ಲಿ ಎಂದೆಂದಿಗೂ ಅಮರ.

ಸದಾಶಿವ ಶೆಣೈರವರ 'ಸಿನಿಮಾ ಸಂತೆಯಲ್ಲಿ ಸಂತನಂತಿದ್ದ ಅಶ್ವಥ್' ಲೇಖನ ಉತ್ತಮವಾಗಿ ಮೂಡಿ ಬಂದಿದೆ. ಅಶ್ವಥ್ ಅವರ ಎಲ್ಲ ಚಿತ್ರಗಳೂ ಚೆನ್ನಾಗಿವೆ. 'ಅಪ್ಪ ಎಂದರೆ ಅಶ್ವಥ್ ತರಹ ಇರಬೇಕು' ಎಂಬ ಮಾತನ್ನು ಜನ ಈಗಲೂ ಆಡುತ್ತಿದ್ದಾರೆ. ಅಗಲಿದ ನಟರಿಗೆ ಶ್ರದ್ಧಾಂಜಲಿ ರೂಪದ ಬರಹಗಳನ್ನು ಅರ್ಪಿಸಿದ ಪತ್ರಿಕೆಯ ಜೊತೆ ನಮ್ಮ ಶ್ರದ್ಧಾಂಜಲಿಗಳೂ ಸಲ್ಲುತ್ತವೆ.

ಪಿ.ಗೋವಿಂದರಾಜ್, ಶಿವಮೊಗ್ಗ

(ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನುಡಿ/ಬರಹದಲ್ಲಿ lankesh70@rediffmail.comಗೆ ಕಳಿಸಬಹುದು)

ಸಂಭ್ರಮದ ಗಳಿಗೆಗಳು....



ಇತ್ತೀಚೆಗೆ ಶ್ರದ್ಧಾಂಜಲಿ ಸಭೆ ಸಮಾರಂಭಗಳಿಂದ ನಿರ್ಜೀವವಾಗಿದ್ದ ಗಾಂಧಿನಗರದಲ್ಲಿ ಈಗ ಒಂದಿಷ್ಟು ಸಂತೋಷ-ಸಂಭ್ರಮ ಕಾಣಿಸಿಕೊಳ್ಳುತ್ತಿದೆ. ಇದು ಈ ಬಣ್ಣದ ಲೋಕ ಮತ್ತೆ ಚೇತರಿಸಿಕೊಂಡು ಗರಿಕೆದರುವ ಲಕ್ಷಣ. ಮೊನ್ನೆ ನಡೆದಿರುವ ಕೆಲ ಘಟನೆಗಳು ಈ ಕೆಳಗಿನಂತಿದೆ.

ಕಪ್ಪು-ಬಿಳುಪು ಕಾಲದ ಛಾಯಾಗ್ರಾಹಕ ಕನ್ನಡಿಗ ವಿ.ಕೆ.ಮೂರ್ತಿಯವರಿಗೆ ಚಿತ್ರರಂಗದ ಅತ್ಯುನ್ನತ ಪ್ರಶಸ್ತಿಯಾದ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ದೊರಕಿರುವುದು ಎಲ್ಲ ಕನ್ನಡಿಗರಿಗೆ ಸಂತೋಷ ತಂದಿದೆ. ಆದರೆ ಛಾಯಾಗ್ರಾಹಕರನ್ನು ಹೊರತುಪಡಿಸಿ ಉದ್ಯಮದ ಇತರರು ಈ ಸಂತೋಷವನ್ನು ಆಚರಿಸಲಿಲ್ಲವೆಂಬುದು ಬೇರೆ ಮಾತು ಬಿಡಿ.

ಮೊನ್ನೆ ರಕ್ಷಿತಾ ನಿರ್ಮಾಣದ ಮೊದಲ ಚಿತ್ರದ ಹಾಡುಗಳ ಧ್ವನಿಮುದ್ರಣ ಸಮಾರಂಭ ಕೂಡಾ ವೈಭವಯುತವಾಗಿ ಪಂಚತಾರಾ ಹೋಟೆಲ್ ವೆಸ್ಟ್‌ಎಂಡ್‌ನಲ್ಲಿ ನಡೆಯಿತು. ಅದು ಕೆ.ಸಿ.ಎನ್.ಚಂದ್ರುರವರ ಆದೇಶವನ್ನು ಮೀರಿ ರಾತ್ರಿ ಹೊತ್ತು ನಡೆಯಿತಲ್ಲದೆ ಅಲ್ಲಿ ಚಿತ್ರರಂಗದ ಗ್ಲಾಮರ್ ಕಾಣಿಸುತ್ತಿತ್ತು. ಸಹಜವಾಗಿ ರಕ್ಷಿತಾ, ಆಕೆಯ ತಾಯಿ ಮತ್ತು ರಕ್ಷಿತಾ ಪತಿ ಪ್ರೇಮ್ ಇವರೆಲ್ಲಾ ಸಂತೋಷದಿಂದ ಓಡಾಡಿದ್ದೇ ಓಡಾಡಿದ್ದು.



ರಕ್ಷಿತಾ ನಿರ್ಮಾಣದ 'ಜೋಗಯ್ಯ' ಚಿತ್ರ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಅಭಿನಯದ 100ನೇ ಚಿತ್ರವೂ ಹೌದು. ಹೀಗಾಗಿ ಶಿವರಾಜ್‌ಕುಮಾರ್‌ಗೆ ಶುಭ ಹಾರೈಸಲು ಇಡೀ ಉದ್ಯಮ ಅಲ್ಲಿ ಸೇರಿತ್ತು. ಶಿವಣ್ಣ ಮತ್ತು ಆತನ ನಿರ್ಮಾಪಕರು, ಗೆಳೆಯ-ಗೆಳತಿಯರೆಲ್ಲಾ ಶಿವಣ್ಣ ಸೆಂಚುರಿ ಬಾರಿಸುತ್ತಿರುವುದನ್ನು ಸಂಭ್ರಮಿಸುತ್ತಿದ್ದಾರೆ.

ಹಲವಾರು ವರ್ಷಗಳಿಂದ ಬೆಂಗಳೂರಿಗೆ ಬರುವುದನ್ನು ಉದ್ದೇಶಪೂರ್ವಕವಾಗಿ ತಪ್ಪಿಸಿಕೊಳ್ಳುತ್ತಿದ್ದ ಹಿಂದಿ ಚಿತ್ರರಂಗದ ಲಂಬು ಅಮಿತಾಬ್ ಬಚ್ಚನ್ ಮೊನ್ನೆ ಇಡೀ ದಿನ ಬೆಂಗಳೂರಿನಲ್ಲಿದ್ದರು. ಯಡಿಯೂರಪ್ಪರಿಂದ ಹಿಡಿದು ಉದ್ಯಮದವರು ಮಾತ್ರವಲ್ಲ, ಆತನ ಅಭಿಮಾನಿಗಳು, ಜನಸಾಮಾನ್ಯರು ಸಹ ಸನ್ನಿ ಹಿಡಿದಂತೆ ಇಡೀ ದಿನ ಬಚ್ಚನ್ ಬಗ್ಗೆ ಮಾತನಾಡುತ್ತಾ ಸಂಭ್ರಮಿಸಿದರು.

ಸುದೀಪ್ ನಟಿಸಿರುವ 2ನೇ ಹಿಂದಿ ಚಿತ್ರ ಈ ವಾರ ತೆರೆಕಂಡಿದೆ. ಅದೂ ಅಮಿತಾಬ್ ಜತೆ ನಟಿಸಿದ್ದರಿಂದ ಸುದೀಪ್ ಮನೆಯವರು ಮತ್ತು ಅಭಿಮಾನಿಗಳು ಥ್ರಿಲ್‌ಗೊಂಡಿದ್ದಾರೆ. ಈ ಮೂಲಕ ತಾನು ಕನ್ನಡ ಚಿತ್ರರಂಗದ ತನ್ನ ಸಮಕಾಲೀನ ನಟರುಗಳಿಗಿಂತ ಸಾಕಷ್ಟು ಮುಂದಿದ್ದೇನೆಂಬ ಫೀಲಿಂಗ್‌ನಲ್ಲಿದ್ದಾರೆ ಸುದೀಪ್.


ಗಣೇಶ್ ನಿರ್ಮಾಣದ 'ಮಳೆಯಲಿ ಜೊತೆಯಲಿ' ಚಿತ್ರ ಅರ್ಧ ಸೆಂಚುರಿ ಬಾರಿಸಿರುವುದರಿಂದ ಗಣೇಶ್ ಮತ್ತು ಆತನ ಟೀಂ ಸಂತೋಷದಲ್ಲಿದೆ. ಹಾಗೆ ನೋಡಿದರೆ ಈ ತರಹದ ಸಂತೋಷ-ಸಂಭ್ರಮಕ್ಕೆ ಮುನ್ನುಡಿ ಹಾಡಿದ್ದೇ ಗಣೇಶ್‌ನ ಈ ಚಿತ್ರ.



ಪುನೀತ್ ರಾಜ್‌ಕುಮಾರ್ ಕೂಡಾ ಗಣೇಶನ ತರಹವೇ ಅರ್ಧ ಸೆಂಚುರಿ ಹೊಡೆಯುವ ಧಾವಂತದಲ್ಲಿದ್ದಾರೆ. ಈತನ 'ರಾಮ್' ಚಿತ್ರ ಐವತ್ತರ ಮೊದಲು ಔಟಾಗುವ ಸಾಧ್ಯತೆಗಳಿಲ್ಲ.

ಕಲಾತ್ಮಕ ಚಿತ್ರಗಳ ವಲಯದಲ್ಲೂ ಒಂಥರದ ಹಬ್ಬದ ವಾತಾವರಣ ಕಾಣಿಸುತ್ತಿದೆ. ಅಮೋಘ 5ನೇ ಬಾರಿ ಪ್ರಶಸ್ತಿ ಪಡೆಯುವ ಮೂಲಕ ಶೇಷಾದ್ರಿ ಕಾಸರವಳ್ಳಿ ಹಾದಿಯಲ್ಲೇ ಸಾಗುತ್ತಿದ್ದಾರೆ. ಇದರಷ್ಟೇ ಸಂತೋಷದ ಸಂಗತಿಯೆಂದರೆ ಮೊದಲ ನಿರ್ದೇಶನದ ಚಿತ್ರದಲ್ಲೇ ರಾಷ್ಟ್ರಪ್ರಶಸ್ತಿ ಪಡೆದ ಅಭಯ್ ಸಿಂಹ ಎಂಬ 29ರ ತರುಣನ ಸಾಧನೆ. ಈತನ ನಿರ್ದೇಶನದ 'ಗುಬ್ಬಚ್ಚಿಗಳು' ಅತ್ಯುತ್ತಮ ಮಕ್ಕಳ ಚಿತ್ರ ಎಂಬ ಹಿರಿಮೆಗೆ ಪಾತ್ರವಾಗಿದೆ.

ಕಲಾತ್ಮಕ ಚಿತ್ರಗಳಲ್ಲಿ ನಟಿಸಿ ಆರಕ್ಕೇರದ ಮೂರಕ್ಕಿಳಿಯದ ಗುಂಪಿನಲ್ಲಿದ್ದ ಶಿವಧ್ವಜ್ ತುಳು ಚಿತ್ರದ ನಿರ್ದೇಶನದೊಂದಿಗೆ ರಾಷ್ಟ್ರದ ಗಮನ ಸೆಳೆದಿದ್ದಾರೆ. ಇವರ ನಿರ್ದೇಶನದ 'ಗಗ್ಗರ' ತುಳು ಚಿತ್ರ ಕೂಡಾ ರಾಷ್ಟ್ರಪ್ರಶಸ್ತಿ ಗಳಿಸಿರುವುದು ಕರಾವಳಿ ಜನರಿಗೆ ಸಂತೋಷ ನೀಡಿದೆ.



ಅಂದರೆ ಚಿತ್ರರಂಗದಲ್ಲಿ ಎಲ್ಲಾ ಕಡೆ ಜನ ಸಂಭ್ರಮದ ವಾತಾವರಣ ಕಾಣುತ್ತಿದ್ದಾರೆ. ಈತನಕ ಒಂದು ಅಥವಾ ಎರಡು ...ತ್ತಿಗಳಿಗಷ್ಟೇ ಉದ್ಯಮದಲ್ಲಿ ಅದೃಷ್ಟ ಲಕ್ಷ್ಮಿ ಒಲಿಯುತ್ತಿದ್ದಳು. ಆದರೆ ಈ ಬಾರಿ ನಿರ್ದೇಶಕರು, ಛಾಯಾಗ್ರಾಹಕರು, ...ಯಕ-ನಾಯಕಿ.. ಬಹುತೇಕ ಎಲ್ಲಾ ವರ್ಗದವರೂ ಒಂದಲ್ಲ ಒಂದು ಕಾರಣಕ್ಕೆ ಸಂತೋಷಪಡುತ್ತಿದ್ದಾರೆ. ಇದರರ್ಥ ...ಂಧಿನಗರ ಮತ್ತೆ ಗಿಜಿಗಿಜಿಯಾಗಿದೆ.

ಈ ತರಹ ಇಡೀ ಉದ್ಯಮ ಸಂತೋಷ ಸಂಭ್ರಮಪಟ್ಟು ಅದೆಷ್ಟೋ ಸಮಯವೇ ಆಗಿಹೋಗಿತ್ತು. ಸಿ.ಅಶ್ವತ್ಥ್, ...ಷ್ಣುವರ್ಧನ್, ಕೆ.ಎಸ್.ಅಶ್ವತ್ಥ್, ಚಿಂದೋಡಿ ಲೀಲಾ ಮೊದಲಾದವರ ಮರಣದ ಸಾಲುಸಾಲು ಸುದ್ದಿಗಳು ಉದ್ಯಮದವರನ್ನು ...ಃಖದಲ್ಲಿ ಮುಳುಗಿಸಿತ್ತು. ಆದರೆ ಕತ್ತಲ ನಂತರ ಬೆಳಕು ಮೂಡಿದಾಗ ಮನಸ್ಸಿಗೆ ಅದೆಷ್ಟು ಹಿತವಾಗುತ್ತದೆಯೋ ಅದೇ ...ತಿ ಹಿರಿಯರ ನಿಧನದ ನಂತರ ಕಿರಿಯರ ಈ ಸಣ್ಣಪುಟ್ಟ ಸಾಧನೆಗಳು ಮತ್ತೆ ಜೀವನೋತ್ಸಾಹವನ್ನು ಸೃಷ್ಟಿಸಿದೆ. ಎಷ್ಟಾದರೂ ...ಾವಿದರೆಲ್ಲಾ ಬಹಳ ಎಮೋಷನಲ್ ತಾನೇ? ಇಂತಹ ಭಾವುಕ ಘಟನೆಗಳೇ ಈ ಕಲಾವಿದರಿಗೆ ಒಂದು ರೀತಿ ಟಾನಿಕ್ ...ದ್ದಂತೆ. ಅದಕ್ಕೆ ಈ ಸಂಭ್ರಮ....



ಚಿಲ್ರೆ ವಾರ್ತೆ ರಾಜೇಶ

ಇತ್ತೀಚೆಗೆ ಗಾಂಧಿನಗರದಲ್ಲಿ ರಾಜೇಶ್ ಗಣಪತಿ ಎಂಬ ಸೋಕಾಲ್ಡ್ ಸಿನಿಮಾ ಪತ್ರಕರ್ತನ ಹಾವಳಿ ಮಿತಿಮೀರುತ್ತಿದೆ.

ನೋಡಲು ಸಿಳ್ಳೇಖ್ಯಾತನಂತಿರುವ ಈ ಪ್ರಜೆ ಒಂದೆರಡು ವರ್ಷಗಳ ಹಿಂದೆ 'ಚಿತ್ತಾರಜ್ಯೋತಿ' ಎಂಬ ಸಿನಿಮಾ ಪತ್ರಿಕೆಯನ್ನು ಆರಂಭಿಸಿತ್ತು. ಕೆಲ ಅರೆಬರೆ ಸಿನಿಮಾ ಗಿರಾಕಿಗಳ ಬಗ್ಗೆ ಖಂಡತುಂಡವಾಗಿ ಹೊಗಳಿ ಅವರಿಂದ ಕೈ ಖರ್ಚಿಗೆ ಕಾಸು ಮಾಡಿಕೊಳ್ಳುತ್ತಿದ್ದ. ರಾಜೇಶನ ಇಂಥ ಕಳಪೆ ಪತ್ರಿಕೆಯನ್ನು ಉಚಿತವಾಗಿ ನೀಡಿದರೂ ಜನ ಓದಲು ಹಿಂಜರಿಯುತ್ತಿದ್ದರು. ಯಾವಾಗ ಈತನ 'ಚಿತ್ತಾರಜ್ಯೋತಿ' ಬೆಳಗಲಿಲ್ಲವೋ ಆಗ ಈತ 'ಚಿತ್ರವಾರ್ತೆ ಡಾಟ್ ಕಾಂ' ಎಂಬ ವೆಬ್ ಮ್ಯಾಗಜೀನ್ ಆರಂಭಿಸಿದ.

ಏನೋ ಹುಡುಗ ಬದುಕಿಕೊಳ್ಳಲಿ ಎಂದು ಸಿನಿಮಾ ಪಿ.ಆರ್.ಓ.ಗಳೂ ಅಷ್ಟಿಷ್ಟು ಸಹಾಯ ಮಾಡಿದರು. ಆದರೆ ಅದನ್ನೆಲ್ಲಾ ಉಳಿಸಿಕೊಳ್ಳದ ಈ ಐನಾತಿ ಸಿಕ್ಕಸಿಕ್ಕಲ್ಲೆಲ್ಲಾ ಕಾಸು ಗೆಬರಲು ಆರಂಭಿಸಿದ. ಇತ್ತೀಚೆಗೆ ನಟ ಪ್ರಕಾಶ್ ರೈ, ನಟಿ ಪ್ರಿಯಾ ಹಾಸನ್ ಮತ್ತು 'ಸೂರ್ಯಕಾಂತಿ' ಚಿತ್ರದ ನಿರ್ಮಾಪಕರ ಬಳಿಯೆಲ್ಲಾ ಹೋಗಿ ದುಡ್ಡು ನೀಡುವಂತೆ ಒತ್ತಾಯಿಸಿ, ಕಡೆಗೆ ಅವರಿಂದ ಮಕ್ಕುಗಿಸಿಕೊಂಡು ಬಂದಿದ್ದ. ಇನ್ನು ಕೆಲವೆಡೆ 'ನಾನು ನಾಗತಿಹಳ್ಳಿ ಚಂದ್ರಶೇಖರ್ ಅವರ ಶಿಷ್ಯ' ಎಂದು ಹೇಳಿ ಕಾಸು ಪೀಕಿದ್ದ.

ತಮಾಷೆಯೆಂದರೆ, ಕೋಟಿಗಟ್ಟಲೆ ಹಣ ಸುರಿದು ಸಿನಿಮಾ ಮಾಡುವ ನಿರ್ಮಾಪಕರಿಗೇ ಫೋನ್ ಮಾಡಿ "ಏನ್ರೀ ನೀವು ಸಿನಿಮಾ ಪತ್ರಕರ್ತರನ್ನು ಸರಿಯಾಗಿ ನೋಡಿಕೊಳ್ಳೋದೇ ಇಲ್ಲ" ಎಂದು ಆವಾಜು ಹಾಕುತ್ತಿದ್ದ. ಈತನ ಮಾತುಗಾರಿಕೆಗೆ ಬೆದರಿದ ನಿರ್ಮಾಪಕರು 'ಈತನೆಲ್ಲೋ ಮಹಾನ್ ಪತ್ರಕರ್ತನೇ ಇರಬಹುದು' ಎಂದು ಈತ ಕೇಳಿದಷ್ಟು ಕಪ್ಪ ಸಲ್ಲಿಸಿ ಸುಮ್ಮನಾಗಿದ್ದರು.

ಇಷ್ಟೆಲ್ಲಾ ಪ್ರಸಿದ್ಧಿ ಪಡೆದಿರುವ ರಾಜೇಶ ಈಗ ತನ್ನ ಕೇಡುಗಾಲಕ್ಕೆ ತಾನೇ ದಾರಿ ಮಾಡಿಕೊಂಡಿದ್ದಾನೆ. ಅದೇನೆಂದರೆ, ಕಳೆದ ವಾರ ಸಿನಿಮಾ ಪ್ರಚಾರಕರ್ತರೊಬ್ಬರಿಗೆ ಫೋನ್ ಮಾಡಿ "ನಾನು ಪ್ರಜಾವಾಣಿಯ ವರದಿಗಾರ" ಎಂದು ಹೇಳಿ ಬೆದರಿಸಿದ್ದಾನೆ. ಜೊತೆಗೆ ರಾಘವೇಂದ್ರ ರಾಜ್‌ಕುಮಾರ್ ಬಳಿಯೂ ಪತ್ರಿಕೆಯೊಂದರ ಹೆಸರು ಹೇಳಿಕೊಂಡು ದುರ್ಬಳಕೆ ಮಾಡಲು ಯತ್ನಿಸಿ ಛೀಮಾರಿ ಹಾಕಿಸಿಕೊಂಡು ಬಂದಿದ್ದಾನೆ.

ರಾಜೇಶ್ ಗಣಪತಿಯ ಈ ಹುಚ್ಚಾಟ ಮತ್ತು ಅನಾಹುತಕಾರಿ ಬೆಳವಣಿಗೆಯನ್ನು ಕಂಡು ಸ್ವತಃ ಪತ್ರಿಕಾ ಪ್ರಚಾರಕರ್ತರ ಸಂಘವೇ ಈಗ ಈತನ ವಿರುದ್ಧ ದೂರು ನೀಡಿ ಅವನನ್ನು 'ಮಾವನ ಮನೆ'ಗೆ ಕಳಿಸಲು ತಯಾರಿ ನಡೆಸುತ್ತಿದೆ.

ಸಾಧನೆಯ ಸಂತೋಷ...

ಇವತ್ತು ರಂಗಭೂಮಿ ಮತ್ತು ಚಿತ್ರರಂಗದಲ್ಲಿ ಹೊಸ ಭರವಸೆಯನ್ನು ...ಡಿಸಿರುವ ಈ ಹುಡುಗನ ಹೆಸರು ಸಂತೋಷ್ ದಾವಣಗೆರೆ. ಜೀವಕ್ಕಿಂತ ...ಚ್ಚು ಪ್ರೀತಿಸುತ್ತಿದ್ದ ತಂದೆ-ತಾಯಿಯ ಅಗಲಿಕೆಯಿಂದ ನೊಂದು, ಅದರಿಂದ ...ರಬರಲು ನಟನೆಯ ಮೊರೆ ಹೋದವನು ಸಂತೋಷ್. ತಾನು ...ನಾಗಬೇಕು ಎಂಬ ಹೆಬ್ಬಯಕೆಯಿಂದ ತುಂಬಿದ್ದ ಸಂತೋಷನ ಪ್ರತಿಭೆಯನ್ನು ...ುತಿಸಿದ್ದು ನಾಗಾಭರಣರ ಅಸೋಸಿಯೇಟ್ ಎಂ.ಕೆ. ಮಠ್. ಆಗ ...ತೋಷನಿಗೆ ಭರಣರ 'ಮಹಾಮಾಯಿ'ಯಲ್ಲಿ ಒಂದೊಳ್ಳೆ ಪಾತ್ರ ಸಿಕ್ಕಿತು. ...ಈ ನಡುವೆ ಸಂತೋಷನ ಪ್ರತಿಭೆಯನ್ನು ಮತ್ತಷ್ಟು ಪೊರೆದು, ಸಲುಹಿದ್ದು ...ಸ್. ಮೂರ್ತಿ ಅವರ ಅಭಿನಯ ತರಂಗ. ಅಭಿನಯ ತರಂಗ ಸೇರಿದ ...ಲೆ ಬೀದಿ ನಾಟಕಗಳಲ್ಲಿ ಅಭಿನಯಿಸುವ ಗೀಳಿಗೆ ಬಿದ್ದ ಸಂತೋಷ್‌ನನ್ನು ... ಗುರುತಿಸುವಂತಾಗಿದ್ದು ಆತನ ಹಾಸ್ಯನಟನೆಯಿಂದ. 'ಮೂಡ ನಂಬಿಕೆ', ...ರು ನೀರು ನೀರು', 'ಕನ್ನಡ ಕನ್ನಡ ಕನ್ನಡ', 'ಫರ್ಲಾಂಗಮ್ಮ', 'ಕಣ್ಣು ...ಷ್ಟ ಕಲ್ಲು' ಮುಂತಾದ ಬೀದಿ ನಾಟಕಗಳ ಮೂಲಕ ಜನಕ್ಕೆ ಸಾಮಾಜಿಕ ...ಶವನ್ನು ಸಾರುತ್ತಿದ್ದ ಸಂತೋಷ್ ಈ ಸಂದರ್ಭದಲ್ಲೇ ಅತ್ಯುತ್ತಮ ...್ಯ ನಟನಾಗಿಯೂ ಹೊರಹೊಮ್ಮಿದ್ದ.


...'ಡೊಂಕು ಬಾಲ' ಎಂಬ ರಂಗಪ್ರಯೋಗದಲ್ಲಿ ಹಿಂದೆ ಪ್ರಕಾಶ್ ರೈ ...ಲೀಸ್ ಪೇದೆಯಾಗಿ ನಟಿಸಿ ಹಲವಾರು ಪ್ರದರ್ಶನಗಳನ್ನು ನೀಡಿದ್ದರು. ...ಕಾರಣಕ್ಕೇ ಈ ನಾಟಕ ಸಾಕಷ್ಟು ಪಾಪ್ಯುಲಾರಿಟಿ ಪಡೆದಿತ್ತು. ಆದರೆ ರೈ ...ಮಾ ಸೇರಿದ ಮೇಲೆ ಈ ರಂಗಪ್ರಯೋಗವನ್ನು ಯಾರೂ ಮಾಡಿರಲೇ ... ಆದರೆ ಇವತ್ತು ಆ ಪಾತ್ರ ಸಂತೋಷ್ ಪಾಲಾಗಿದೆ. ಆ ನಾಟಕದಲ್ಲಿ ...ೋಷ್ ಅದೆಷ್ಟು ನೈಜವಾಗಿ ಅಭಿನಯಿಸಿದ್ದಾನೆಂದರೆ, ಈತ ಕುಂತರೂ, ...ದರೂ, ತಲೆ ಕೆರೆದರೂ ಜನ ಉಳ್ಳಾಡಿಕೊಂಡು ನಗುತ್ತಾರೆ. ಇಂಥ ...ಮಿಡಿ ಟೈಮಿಂಗ್ ಎಲ್ಲ ನಟರಿಗೂ ಸಿಗುವುದು ಅಸಾಧ್ಯ.

ಬೆಂಗಳೂರಿಗೆ ಬಂದ ಆರಂಭದ ದಿನದಲ್ಲಿ ತನ್ನ ಮಿತ್ರ ಗಿರೀಶ್ ಜತ್ತಿಯೊಂದಿಗೆ ಅಂಗೈಯಗಲದ ಕೋಣೆಯಲ್ಲಿ ವಾಸಿಸುತ್ತಾ, ಮಲ್ಲೇಶ್ವರದ ರೈಲ್ವೇ ರಸ್ತೆಯ ಬದಿಯಲ್ಲಿ ಮಧ್ಯಾಹ್ನ ಎರಡು ರಾಗಿ ಮುದ್ದೆ ಉಂಡು, ಮಿಕ್ಕ ಎರಡು ಹೊತ್ತು ಉಪವಾಸ ಮಲಗುತ್ತಿದ್ದ ಸಂತೋಷ್ ಈಗ ರಂಗಂಭೂಮಿಯಲ್ಲಿ ಮಾತ್ರವಲ್ಲ, ಕಿರುತೆರೆ ಹಿರಿತೆರೆಯಲ್ಲೂ ಬ್ಯುಸೀ ನಟನಾಗಿದ್ದಾನೆ. 300 ಬೀದಿ ನಾಟಕಗಳು, 55 ಸ್ಟೇಜ್ ಶೋಗಳನ್ನೂ ನೀಡಿರುವ ಸಂತೋಷ್ 35ಕ್ಕೂ ಹೆಚ್ಚು ಧಾರಾವಾಹಿಗಳಲ್ಲಿ ನಟಿಸಿದ್ದಾನೆ.

ಹೀಗೆ ನಾಟಕ, ಸಿನಿಮಾ, ಧಾರಾವಾಹಿಗಳಲ್ಲಿ ನಟನೆಯಲ್ಲದೆ, ಟಿವಿ ಚಾನೆಲ್‌ವೊಂದರಲ್ಲಿ ಕಾರ್ಯಕ್ರಮ ನಿರ್ಮಾಪಕನಾಗಿರುವ ಸಂತೋಷ್ 'ಚಿಂಟು' ಟೀವಿಯಲ್ಲಿ ಬರುವ ಕಾರ್ಟೂನ್ ಧಾರಾವಾಹಿಗಳಿಗೂ ಡಬ್ಬಿಂಗ್ ಮಾಡುತ್ತಾನೆ. ಯಶಸ್ಸಿಗಾಗಿ ಕಷ್ಟ ಪಡುವುದು ಅಂದರೆ ಇದಲ್ಲವೇ?



ಹುಲಿಯ ಹೆಗಲೇರಿದ ಕೋತಿ!



ಗಾಂಧಿನಗರದ ಮಟ್ಟಿಗೆ ಕೋತಿ ಡೈರೆಕ್ಟರ್ ಎಂದೇ ಚಿರಪರಿಚಿತವಾಗಿರುವ ಓಂ ಪ್ರಕಾಶ್ ಈಗ ಹುಲಿಯ ಹೆಗಲೇರಿದ್ದಾರೆ.

ಇನ್ನೂ 'ಎ.ಕೆ. 56'ನ್ನೇ ಸಂಪೂರ್ಣಗೊಳಿಸದ ಓಂ ಈಗ 'ಹುಲಿ' ಅನ್ನೋ ಚಿತ್ರವನ್ನು ನಿರ್ದೇಶಿಸುವ ತಯಾರಿಯಲ್ಲಿದ್ದಾರೆ. ಸದಾ ದರ್ಶನ್, ಸುದೀಪ್, ಶಿವರಾಜ್‌ಕುಮಾರಂಥ ಕಮರ್ಷಿಯಲ್ ಹೀರೋಗಳ ಸಿನಿಮಾಗಳನ್ನೇ ಮಾಡುತ್ತಾ ಬಂದಿರುವ ಓಂ ಪ್ರಕಾಶ್ ಈ ಬಾರಿ ಪೋಷಕ ನಟ ಕಿಶೋರ್ ಅವರನ್ನು ಹೀರೋ ಮಾಡಲು ತೀರ್ಮಾನಿಸಿದ್ದಾರೆ.

ಸದ್ಯ ತಮಿಳಿನಲ್ಲಿ ಪಾಪ್ಯುಲಾರಿಟಿ ಪಡೆದಿರುವ ಕಿಶೋರ್‌ರನ್ನು ಕಡಿಮೆ ಸಂಭಾವನೆ ನೀಡಿ ನಾಯಕನನ್ನಾಗಿಸಿದರೆ, ತಮ್ಮ ಚಿತ್ರವನ್ನು ತಮಿಳಿನಲ್ಲೂ ಡಬ್ ಮಾಡಿ ದೊಡ್ಡ ಲಾಭ ಗಿಟ್ಟಿಸುವುದು ಓಂ ಪ್ರಕಾಶ್‌ರ ಪ್ಲಾನ್ ಇರಬಹುದು.

ಓಂ ಪ್ರಕಾಶ್ ವೈಯಕ್ತಿಕವಾಗಿ ಪರಮ ತಿಕ್ಕಲನಾಗಿದ್ದರೂ ಆತನ ಸಿನಿಮಾ ಪ್ರೀತಿ ಮಾತ್ರ ಅಪಾರ. ಈಗಾಗಲೇ ತನ್ನ ಕೈಲಿ ಮೂರ್‍ನಾಲ್ಕು ಪ್ರಾಜೆಕ್ಟ್‌ಗಳನ್ನು ಹೊಂದಿರುವ ಓಂ ರವಿ ಬೆಳಗೆರೆ ಅವರ 'ಭೀಮಾ ತೀರದ ಹಂತಕರು' ಕೃತಿಯನ್ನು ಆಧರಿಸಿ ಸರಣಿ ಹತ್ಯಾಕಾಂಡದ ಸಿನಿಮಾವನ್ನೂ ನಿರ್ದೇಶಿಸಲಿದ್ದಾರಂತೆ.

ಇದನ್ನೆಲ್ಲಾ ನೋಡಿದರೆ ಓಂ ಪ್ರಕಾಶ್‌ಗೆ ಏನಿಲ್ಲವೆಂದರೂ ಕನಿಷ್ಠ ಎರಡು ವರ್ಷ ಕೈತುಂಬ ಕೆಲಸವಿದೆ...

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 10 -02-2010 RNI No. KARKAN/...

ಶಿವಣ್ಣನ ಸೆಂಚುರಿ

ಶಿವರಾಜ್‌ಕುಮಾರ್ ನಟಿಸುವ 100ನೇ ಚಿತ್ರ 'ಜೋಗಯ್ಯ' ಏಪ್ರಿಲ್ 24ರಂದು ಸೆಟ್ಟೇರಲಿದೆ. 'ಹ್ಯಾಟ್ರಿಕ್ ಹೀರೋ' ಶಿವರಾಜ್‌ಕುಮಾರ್‌ಗೆ ಈಗ ನಿರ್ದೇಶಕ ಪ್ರೇಮ್ 'ಸೆಂಚುರಿ ಹೀರೋ' ಎಂಬ ಹೊಸ ಬಿರುದನ್ನು ನೀಡಿದ್ದಾರೆ. ಅದೇನೆ ಇರಲಿ ಯುವ ನಾಯಕ ನಟರುಗಳಲ್ಲಿ ಅತ್ಯಂತ ವೇಗವಾಗಿ ಸೆಂಚುರಿ ಬಾರಿಸಿದ ನಟ ಎಂಬ ಖ್ಯಾತಿಗೆ ಶಿವಣ್ಣ ಪಾತ್ರರಾಗುತ್ತಾರೆ.



ಸಂಖ್ಯಾ ದೃಷ್ಟಿಯಿಂದ ಒಬ್ಬ ನಟನಿಗೆ 100 ಎಂಬುದು ಒಂದು ಮ್ಯಾಜಿಕ್ ಫಿಗರ್ ಇದ್ದಂತೆ! ಎಷ್ಟೋ ಕಲಾವಿದರು 100ರ ಗಡಿ ತಲುಪುವ ಮೊದಲೇ ನಾಯಕನ ತಂದೆಯಾಗಿ, ಅಂದರೆ ಪೋಷಕ ನಟನಾಗಿ ಮಾರ್ಪಾಡಾಗುತ್ತಾರೆ. ಇನ್ನು ಕೆಲವರು ಒಂದಿಷ್ಟು ದಿನ ನಾಯಕ ನಟರಾಗಿ ವಿಜೃಂಭಿಸಿದ ನಂತರ ಸಿನಿಮಾರಂಗದಿಂದಲೇ ದೂರವಾಗಿ ಮಾಯವಾಗಿ ಬಿಡುತ್ತಾರೆ. ಅಂತಹ ಜನರ ನಡುವೆ ಶಿವರಾಜ್‌ಕುಮಾರ್ 'ಸಿನಿಮಾವೇ ನನ್ನುಸಿರು' ಎನ್ನುವ ಧ್ಯೇಯ ವಾಕ್ಯಕ್ಕೆ ಅಂಟಿಕೊಂಡಂತೆ ನಟಿಸಿ ಯಶಸ್ಸಿನ ಒಂದೊಂದೇ ಮೆಟ್ಟಿಲನ್ನು ಏರಿದ್ದಾರೆ. ಅದರಲ್ಲೂ ಮುಖ್ಯವಾಗಿ ತನ್ನ ಮೈಕಟ್ಟನ್ನು ಮತ್ತು ಇಮೇಜನ್ನು ಉಳಿಸಿಕೊಂಡು ಈಗಿನ ಯುವನಾಯಕ ನಟರ ಪೈಪೋಟಿಯ ನಡುವೆ ಶಿವಣ್ಣ ಇನ್ನೂ ಚಾಲ್ತಿಯಲ್ಲಿರುವುದು ಮೆಚ್ಚಬೇಕಾದ ಸಂಗತಿ.

ಆರಂಭದ ದಿನಗಳಲ್ಲಿ ಡಾ.ರಾಜ್ ಮಗ ಎಂಬ ಪ್ರಭಾವಳಿಯಿಂದ ಹೊರಬಂದು ತನ್ನದೇ ವರ್ಚಸ್ಸು ಮತ್ತು ತಾರಾಮೌಲ್ಯವನ್ನು ಸೃಷ್ಟಿಸುವುದೇ ಶಿವರಾಜ್‌ಕುಮಾರ್‌ಗೆ ಬಹುದೊಡ್ಡ ಸವಾಲಾಗಿತ್ತು. ಗಾಂಧಿನಗರದ ಜನ ಮತ್ತು ಪ್ರೇಕ್ಷಕರು ಕೂಡಾ 'ಅಣ್ಣಾವ್ರ ಮಗ' ಎಂದು ಸಿಂಪಥಿ ಮತ್ತು ಪ್ರೀತಿಯಿಂದಲೇ ಈತನನ್ನು ಸ್ವಾಗತಿಸಿದರೆನ್ನಬಹುದು. ಆ ಸಂದರ್ಭದಲ್ಲೇ ಶಿವರಾಜ್‌ಕುಮಾರ್ ನಟಿಸಿದ ಮೊದಲ ಮೂರು ಚಿತ್ರಗಳು ಸಿಲ್ವರ್ ಜ್ಯೂಬಿಲಿ ಆಚರಿಸಿದ ಕೂಡಲೇ ಈತನಿಗೆ ವಿಶೇಷವಾದ ಬೇಡಿಕೆ ಬರಲಾರಂಭಿಸಿತು.

ಶಿವರಾಜ್‌ಕುಮಾರ್ ವಿಶೇಷತೆಯೆಂದರೆ ಯಾವುದೇ ಒಂದು ಪಾತ್ರಕ್ಕೆ ಅಥವಾ ಅದರ ಇಮೇಜಿಗೆ ಅಂಟಿಕೊಳ್ಳದೇ ವೈವಿಧ್ಯಮಯ ಪಾತ್ರಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದು. ಹೀಗಾಗಿ ಆ್ಯಂಗ್ರಿ ಯಂಗ್‌ಮ್ಯಾನ್, ಅಂಡರ್‌ವರ್ಲ್ಡ್ ಡಾನ್, ನೆಚ್ಚಿನ ಮಡದಿಯ ಪ್ರೀತಿಯ ಗಂಡ, ತಂಗಿಯ ಪ್ರೀತಿಯ ಅಣ್ಣ... ಹೀಗೆ ಹಲವಾರು ಪಾತ್ರಗಳಲ್ಲಿ ನಟಿಸಿ ಪ್ರೇಕ್ಷಕರ ಹೃದಯವನ್ನು ಗೆದ್ದು ತನ್ನ ಪ್ರತಿಭೆ ಮೆರೆದರು. ಅಷ್ಟೇ ಅಲ್ಲ ಅನೇಕ ಯುವ ನಟರು ಪ್ರಯೋಗಾತ್ಮಕ ಚಿತ್ರಗಳಲ್ಲಿ ನಟಿಸಲು ಹಿಂಜರಿಯುವಾಗ ಶಿವಣ್ಣ ತನ್ನ ಇಮೇಜ್ ಮತ್ತು ಮಾರುಕಟ್ಟೆಯನ್ನು ಲೆಕ್ಕಿಸದೇ ಅಲ್ಲಿಯೂ ಮುನ್ನುಗ್ಗಿದರು.




ಇದಕ್ಕೆ ಬರಗೂರು ರಾಮಚಂದ್ರಪ್ಪ ನಿರ್ದೇಶನದ 'ಹಗಲುವೇಷ', ನಾಗಾಭರಣ ನಿರ್ದೇಶನದ 'ಚಿಗುರಿದ ಕನಸು' ಮತ್ತು ಭಾರ್ಗವ ನಿರ್ದೇಶನದ 'ಗಂಡುಗಲಿ ಕುಮಾರರಾಮ' ಚಿತ್ರಗಳೇ ಉದಾಹರಣೆಗಳು. ಇತ್ತೀಚೆಗೆ 'ಸುಗ್ರೀವ' ಚಿತ್ರಕ್ಕಾಗಿ ಒಂದೇ ದಿನದಲ್ಲಿ ನಟಿಸುವ ಒಂದು ಹೊಸ ಸಾಹಸಕ್ಕಾಗಿ ಕೈಹಾಕುವ ಮೂಲಕ ಶಿವಣ್ಣ ತನ್ನಲ್ಲಿನ್ನೂ ಎನರ್ಜಿ ಇದೆಯೆಂಬುದನ್ನು ತೋರಿಸಿದ್ದಾರೆ.

ಹೀಗೆ ಒಂದು ಸೆಂಚುರಿ ಹೊಡೆಯುವ ರಭಸದಲ್ಲಿ ಬರೀ ಸಂಖ್ಯೆಯನ್ನಷ್ಟೇ ದೃಷ್ಟಿಯಲ್ಲಿಟ್ಟುಕೊಳ್ಳದ ಶಿವರಾಜ್‌ಕುಮಾರ್ ನಿರ್ಮಾಪಕ-ನಿರ್ದೇಶಕರ ಇಷ್ಟಗಳಿಗನುಸಾರವಾಗಿ ನಟಿಸುತ್ತಾ ಬಂದಿರುವುದರಿಂದಲೇ ಇಂದಿಗೂ ಶಿವಣ್ಣ ಎಂದರೆ ಎಲ್ಲರಿಗೂ ಅಚ್ಚುಮೆಚ್ಚು. ಶಿಸ್ತು ಮತ್ತು ನಯವಿನಯತೆಯಲ್ಲಿ ಡಾ.ರಾಜ್ ಅವರ ತದ್ರೂಪದಂತೆ ಶಿವಣ್ಣ ಇರುವುದೂ ಅವರ ಜನಪ್ರಿಯತೆಗೆ ಮತ್ತೊಂದು ಕಾರಣವಾಗಿದೆ.

ಹಾಗೆ ನೋಡಿದರೆ ಅನೇಕ ವಿಷಯಗಳಲ್ಲಿ ಶಿವರಾಜ್‌ಕುಮಾರ್ ತನ್ನ ತಂದೆಯನ್ನು ಅನುಕರಿಸುತ್ತಾ ಬಂದಿದ್ದಾರೆ. ಪರಭಾಷೆಗಳಲ್ಲಿ ನಟಿಸುವ ಗೋಜಿಗೆ ತಲೆಹಾಕದಿರುವುದು ಶಿವಣ್ಣನ ಮತ್ತೊಂದು ಹಿರಿಮೆ. ಹಾಗೆಯೇ ಅಲ್ಲೊಮ್ಮೆ ಇಲ್ಲೊಮ್ಮೆ ಡಾ.ರಾಜ್ ತರಹ ಹಿನ್ನೆಲೆ ಗಾಯಕರಾಗಿ ಹಾಡಿ ಅಭಿಮಾನಿಗಳ ಮೆಚ್ಚುಗೆ ಪಡೆದದ್ದು ಉಂಟು. ಹೀಗೆ ಡಾ.ರಾಜ್‌ರ ವೃತ್ತಿಜೀವನದ ಹಲವಾರು ಘಟ್ಟಗಳನ್ನು ನೆನಪಿಸುವ ರೀತಿಯಲ್ಲಿ ಮುನ್ನಡೆಯುತ್ತಿರುವ ಶಿವರಾಜ್‌ಕುಮಾರ್‌ಗೆ ಈ 'ಶತಕ' ಇನ್ನಷ್ಟು ಉತ್ಸಾಹ, ಹುಮ್ಮಸ್ಸು, ವರ್ಚಸ್ಸು ಮತ್ತು ರೋಮಾಂಚನವನ್ನು ನೀಡಲಿ ಎಂಬುದೇ ನಮ್ಮ ಶುಭ ಹಾರೈಕೆ.

ಶೆಣೈ





'ಪೊರ್ಕಿ'ಗಳ 'ರಣ್'ರಂಗ


ಮೂರ್‍ನಾಲ್ಕು ವರ್ಷಗಳ ಹಿಂದೆ ಸುದೀಪ್ ಮತ್ತು ದರ್ಶನ್ ನಡುವಿನ ಪೈಪೋಟಿ ಮತ್ತು ವೃತ್ತಿ ಮತ್ಸರ ಹೊಸ ವಿವಾದಗಳನ್ನು ಸೃಷ್ಟಿಸಿತ್ತು. ಆಗ ಒಂದೇ ದಿನ ಇವರಿಬ್ಬರ ಚಿತ್ರ ಬಿಡುಗಡೆಯಾಗುವುದು ಉದ್ಯಮದ ಜನರ ಪಾಲಿಗೆ ಬಹಳ ದೊಡ್ಡ ಸುದ್ದಿಯಾಗಿತ್ತು. ದರ್ಶನ್ ನಟಿಸಿದ 'ಕಲಾಸಿಪಾಳ್ಯ', ಸುದೀಪ್ ನಿರ್ದೇಶನದ 'ಮೈ ಆಟೋಗ್ರಾಫ್' ಅಂದು ಪರಸ್ಪರ ಮುಖಾಮುಖಿಯಾಗಿದ್ದವು. ಅದಕ್ಕೆ ಉದ್ಯಮದ ಜನ 'ಸ್ಟಾರ್‌ವಾರ್' ಎಂದು ನಾಮಕರಣ ಮಾಡಿದ್ದರು. ಡಾ.ರಾಜ್ ಮತ್ತು ವಿಷ್ಣು ನಡುವಿನ ಸ್ಟಾರ್‌ವಾರ್ ಬಳಿಕ ಚಿತ್ರರಂಗ ಕಂಡ ದೊಡ್ಡ ತಾರಾ ಕದನ ಇದು ಎಂದೇ ಬಿಂಬಿತವಾಗಿತ್ತು.



ಆದರೆ ಈಗ ಅವರಿಬ್ಬರ ನಡುವೆ ಕದನ ವಿರಾಮ ಘೋಷಣೆಯಾಗಿದೆ. ವಿರಾಮ ಘೋಷಿಸಿದ್ದವರು ಯಾರು? ಎಷ್ಟು ಸಮಯ ಎಂದು ಯಾರಿಗೂ ಗೊತ್ತಿಲ್ಲ. ಬಹುಶಃ ಕಾಲವೇ ಈ ಯುವ ನಾಯಕರನ್ನು ಪಕ್ವಗೊಳಿಸಿರಬಹುದು. ಈಗ ಅವರಿಬ್ಬರು ಸ್ನೇಹಿತರಾಗಿದ್ದಾರೆ. ಆದರೀಗ ಮತ್ತೆ ದರ್ಶನ್-ಸುದೀಪ್ ಚಿತ್ರಗಳು ಮುಖಾಮುಖಿಯಾಗುತ್ತಿವೆ. ದರ್ಶನ್ 'ಪೋರ್ಕಿ' ಚಿತ್ರದಲ್ಲಿ ನಾಯಕನಾಗಿ ಕಾಣಿಸಿಕೊಂಡರೆ, ಸುದೀಪ್ 'ರಣ್' ಎಂಬ ಚಿತ್ರದಲ್ಲಿ ಖಳನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಆದರೂ ಈ ಚಿತ್ರಗಳ ಬಿಡುಗಡೆ ಅಭಿಮಾನಿಗಳಲ್ಲಿ ಹಿಂದಿನಂತೆ ಥ್ರಿಲ್ ಅಥವಾ ಪುಲಕವನ್ನು ಸೃಷ್ಟಿಸಿಲ್ಲ. ಸುದೀಪ್ ಈಗ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಳ್ಳಲು ಇನ್ನಿಲ್ಲದ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ದರ್ಶನ್ ಅದೇ ಲಾಂಗು ಮಚ್ಚುಗಳ ನೆರವಿನಿಂದ ಕನ್ನಡ ಚಿತ್ರರಂಗದಲ್ಲೇ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಸೆಣೆಸುತ್ತಿದ್ದಾರೆ. ಈ ಐದು ವರ್ಷಗಳಲ್ಲಿ ಸುದೀಪ್ ಗೆದ್ದಿದ್ದಾರೋ? ಅಥವಾ ದರ್ಶನ್ ಗೆದ್ದಿದ್ದಾರೋ? ಎಂದು ತೀರ್ಮಾನಕ್ಕೆ ಬರುವುದು ಸ್ವಲ್ಪ ಕಷ್ಟ. ಇದು ಈ ಇಬ್ಬರು ಯುವ ನಾಯಕ ನಟರುಗಳ ದ್ವೇಷ-ಸ್ನೇಹ-ಪೈಪೋಟಿ ಮತ್ತು ಪರಿಪಕ್ವತೆಗೆ ಸಂಬಂಧಪಟ್ಟಂತೆ ಒಂದು ಪುಟ್ಟ ಟಿಪ್ಪಣಿ

ಗಂಡೆದೆ
ರಾಗಿಣಿ


ಹುರಿಗೊಂಡ ಕರಿಮೈ...



'ದುನಿಯಾ' ಖ್ಯಾತಿಯ ವಿಜಿ ಸದ್ಯಕ್ಕೆ ಚಿತ್ರರಂಗದಲ್ಲಿ ಅತ್ಯಂತ ಬೇಡಿಕೆಯಲ್ಲಿರುವ ಯುವ ನಾಯಕ ನಟ. ಆದರಲ್ಲೂ ಮುಖ್ಯವಾಗಿ ಆತ ತನ್ನ ದೇಹದಾರ್ಢ್ಯವನ್ನು ಹುಲುಸಾಗಿ ಬೆಳೆಸಿದ ನಂತರ ವಿಜಿಗೆ ಈಗ ಅನೇಕ ಹೊಸ ಪಾತ್ರಗಳು ಬರುತ್ತಿವೆ. ಈಗಾಗಲೇ 'ಶಂಕರ್ ಐಪಿಎಸ್' ಎಂಬ ಚಿತ್ರವನ್ನು ಮುಗಿಸಿರುವ ವಿಜಿಗೆ ಮೂರು ಕುತೂಹಲಕಾರಿ ಪಾತ್ರಗಳು ದೊರೆತಿವೆ. ಆ ಚಿತ್ರಗಳ ಹೆಸರು 'ಬಾಹುಬಲಿ', 'ವೀರಬಾಹು' ಮತ್ತು 'ಕರಿಚಿರತೆ'.

ಈ ಮೂರು ಚಿತ್ರಗಳ ನಿರ್ದೇಶಕರ ಕಣ್ಣು ಆತನ ನಟನಾ ಪ್ರತಿಭೆಗಿಂತ ಆತನ ದಷ್ಟಪುಷ್ಟವಾದ ದೇಹದಾರ್ಢ್ಯ ಮತ್ತು ಮಾಂಸಖಂಡಗಳ ಮೇಲೆ ಬಿದ್ದಿದೆ ಎಂದು ಹೇಳಿದರೆ ತಪ್ಪಾಗಲಾರದು.

ಆದೇನೆ ಇರಲಿ ಕನ್ನಡದ ಶಾರೂಕ್ ಖಾನ್, ಜೂನಿಯರ್ ಟೈಗರ್ ಪ್ರಭಾಕರ್ ಎಂಬಿತ್ಯಾದಿ ಅನ್ವರ್ಥನಾಮಗಳನ್ನು ಪಡೆದಿರುವ ವಿಜಿ ಉದ್ಯಮದಲ್ಲಿ ತನ್ನದೇ ಸಾಮ್ರಾಜ್ಯವನ್ನು ನಿಧಾನವಾಗಿ ಕಟ್ಟುತ್ತಿದ್ದಾನೆಂಬುದು ಮಾತ್ರ ನಿಜ.



ಕೊಬ್ಬರಿಯ ತೇಜಸ್ಸು!

ಪ್ರವೀಣ್ ನಾಯಕ್ ನಿರ್ದೇಶನದ 'ಮೀಸೆ ಚಿಗುರಿದಾಗ' ಚಿತ್ರದಲ್ಲಿ ನಾಯಕನಟನಾಗಿದ್ದ ತೇಜಸ್ ಈಗ ಮತ್ತೆ ಲೈಮ್ ಲೈಟಿಗೆ ಬರುತ್ತಿರುವಂತಿದೆ.

'ಮೀಸೆ ಚಿಗುರದ' ಕಾರಣ ಸಿನಿಮಾ ನಟನೆಗೆ ವಿರಾಮ ನೀಡಿ ಇನ್‌ಫೋಸಿಸ್‌ನಲ್ಲಿ ಉದ್ಯೋಗಕ್ಕೆ ಸೇರಿದ್ದ ತೇಜಸ್‌ಗೆ ಕಳೆದ ವರ್ಷ ತಮಿಳಿನ ಚಿತ್ರವೊಂದರಲ್ಲಿ ಹೀರೋ ಆಗುವ ಛಾನ್ಸು ಸಿಕ್ಕಿತ್ತು. ಅಲ್ಲಿನ ಖ್ಯಾತ ನಿರ್ಮಾಪಕ ಕೆ.ಟಿ. ಕುಂಜುಮನ್ ಅವರ 'ಕಾದಲುಕ್ಕು ಮರಣಮಿಲ್ಲೈ' ಚಿತ್ರದಲ್ಲಿ ತೇಜಸ್ ನಟಿಸಿದ್ದಾನೆ. ಅದಿನ್ನೂ ಬಿಡುಗಡೆಯ ಹಂತದಲ್ಲಿರುವಾಗಲೇ ನಮ್ಮ ಗಾಂಧಿನಗರದವರು ಈಗ ಆತನ ಸುತ್ತ ಮುಗಿಬಿದ್ದಿದ್ದಾರೆ. ಹೊಸ ಸುದ್ದಿ ಏನೆಂದರೆ ಕೊಬ್ರಿ ಮಂಜು ನಿರ್ಮಾಣದ ಹೊಸ ಚಿತ್ರಕ್ಕೆ ತೇಜಸ್‌ನೇ ನಾಯಕನಂತೆ.

ಇತ್ತೀಚಿನವರೆಗೂ ಕನ್ನಡ ಚಿತ್ರರಂಗದಲ್ಲಿ ಅವಕಾಶವಿಲ್ಲದೇ ಮೂಲೆಗುಂಪಾಗಿದ್ದ ತೇಜಸ್ ಚೆನ್ನೈಗೆ ಹೋಗಿ ಒಂದು ರೌಂಡು ಹೊಡೆದು ಬರುವ ಹೊತ್ತಿಗೇ ಆತನ ನಸೀಬೂ ಬದಲಾಗಿದೆ!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44